(b) A Pay Commission has been constituted to study the structure of pay and allowances of State Government employees.

(c) Yes

(d) Broadly, the demand is for parity with Central emoluments.

PAPERS LAID ON THE TABLE

SRI S. M. KRISHNA—(Minister for Industries and Parliamentary Affairs)—Madam Speaker, on behalf of the Chief Minister, I beg to lay.—

Notification No GSR 242 dated 7th August, 1975

The Karnataka Village Defence Parties (Amendment) Rules, 1975 under Sub-Section (4) of Section 19 of the Karnataka Village Defence Parties Act. 1964.

Madam SPEAKER—The Notification is laid.

SRI S. M. KRISHNA (Minister for Industries and Parliamentary Affairs).—Madam Speaker, on behalf of the Minister for Excise and Labour, I beg to lay.—

(i) Notification No. HD 116 EDC 73 (ii) dated 21st February 1974.

The Karnataka Excise (Denatured Spirit and Denatured Spiritious Preparations) (Amendment) Rules, 1974.

(ii) Notification No. GSR 33 dated 23rd January, 1976;

The Karnataka Excise (Distillary and Warehouse) (Amendment) Rules, 1976,

(iii) Notification No, GSR 34 dated 23rd January, 1976;

The Karnataka Excise (Exicise Duties) (Amendment) Rules, 1976

Under sub-section (4) of section 71 of the Karnataka Excise Act, 1965.

Madam SPEAKER—The Notification are laid.

MOTION OF THANKS TO GOVERNOR'S ADDRESS

Madam SPEAKER—The hon'ble Member Sri Prabhakar to continue his speech. He has not come and thereby loses his chance. Next, Sri B. Puttaswamaiah may speak on the Motion of Thanks to the Governor's Address.

1–30 P.M.

† ಶ್ರೀ ಬಿ. ಪುಟ್ಟಸ್ವಾಮಯ್ಯ. (ರಾಮನಗರ).—ಸನ್ಮಾನ್ಯ ಅಧ್ಯಕ್ಷರೇ, ಈ ತಿಂಗಳ 2ನೇ ತಾರೀಖು ಸನ್ಮಾನ್ಯ ರಾಜ್ಯಪಾಲರು ಈ ಸದನದಲ್ಲಿ ಮಾಡಿರುವ ಭಾಷಣದ ಬಗ್ಗೆ ಶ್ರೀಮಾನ್ ಪುಟ್ಟಸ್ವಾಮಿಯವರು ತಂದಿರತಕ್ಕಂಥ ನಿರ್ಣಯವನ್ನು ನಾನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಆಡಲು ಇಚ್ಛಿಸುತ್ತೇನೆ. ನಾವು ಈಗ ತುಂಬಾ ಪರ್ವ ಕಾಲದಲ್ಲಿದ್ದೇವೆ. ಹೆಣ್ಣು, ಮಣ್ಣು ಮತ್ತು ಹೊನ್ನು ಈ ಮೂರಕ್ಕೂ ಭಾರತದ ಪ್ರಜೆಗಳಾದ ನಾವು ಮೊದಲಿಂದಲೂ ಭಕ್ತಿ ಆದ್ಯತೆ ಕೊಟ್ಟುಕೊಂಡು ಬಂದಿದ್ದೇವೆ. ಆದರೆ ಈಗ ನಾವು ಭೂಕಾಯಿದೆ ಜಾಜಿಗೆ ಬಂದ ಕಾರಣದಿಂದ ಮಣ್ಣನ್ನು ಕಳೆದುಕೊಂಡಿದ್ದೇವೆ. ತೋಟಿ ತಳವಾರ, ಪಟೇಲ. ಶಾನುಭೋಗ ಮುಂತಾದವರೆಲ್ಲರೂ ಸಹ ಈ ಕಾಯಿದೆ ಜಾರಿಗೆ ಬಂದಮೇಲೆ ಭೂಮಿಯನ್ನು ಕಳೆದುಕೊಂಡರು, ಮಾನ್ಯ ಘೋರ್ಪಡೆಯವರು ಹೆಚ್ಚಿನ ಕರಭಾರವನ್ನು ರೈತರ ಮೇಲೆ ವಿಧಿಸುವುದಕ್ಕೆ ಪ್ರಾರಂಭ ಮಾಡಿದ್ದರಿಂದ ಅವರ ಬಳಿಯಿದ್ದ ಹೊನ್ನೆಲ್ಲಾ ಮಾಯವಾಗಿಬಿಟ್ಟಿದೆ. ಅವಿದ್ಯಾವಂತ ರೈತರು ಸರಿಯಾದ ಲೆಕ್ಕಪತ್ರಗಳನ್ನು ಇಡುವುದಕ್ಕೆ ಸಾಧ್ಯವಾಗದೆ ತಮ್ಮಲ್ಲಿರುವ ಹೊನ್ನನ್ನು ಕಳೆದುಕೊಂಡಿದ್ದಾರೆ. ಇನ್ನು ಹೆಣ್ಣು ಒಂದು ಮಾತ್ರ ಉಳಿದಿದೆ. ಯಾವ ಕ್ಷಣದಲ್ಲಿ ಆ ಹೆಣ್ಣು. ಆ ಮಹಾತಾಯಿ ಮಾಯವಾಗುತ್ತಾಳೋ ಎಂಬತಕ್ಕಂಥ ಶಂಕೆ ನನಗಿದೆ. ಇದರ ಬಗ್ಗೆ ನಾನು ಇನ್ನು ಹೆಚ್ಚು ಪ್ರಸ್ತಾಪ ಮಾಡುವುದಿಲ್ಲ. ಈ ದೇಶದಲ್ಲಿ ತುರ್ತುಪರಿಸ್ಥಿತಿ ಜಾರಿಗೆ ಬಂದಿರುವ ಕಾರಣದಿಂದ ಭಾರತದ ಪ್ರಜೆಗಳಾದ ನಾವುಅಂದರೆ ರೈತರೇ ಆಗಲೀ, ಕಾರ್ಮಿಕರೇ ಆಗಲೀ. ಸರ್ಕಾರಿ ಅಧಿಕಾರಿಗಳೇ ಆಗಲೀ, ಅಥವಾ ನಾನಾ ರಾಜಕೀಯ ಪಕ್ಷಗಳಿಗೆ ಸೇರಿದ ರಾಜಕಾರಣಿಗಳೇ ಆಗಲೀ, ತಮಗಿರುವಂತಹ ಆಂತಕಗಳನ್ನು ಪ್ರಜಾಸತ್ತಾತ್ಮಕ ರೀತಿಯಿಂದ ಸರ್ಕಾರಕ್ಕೇ ಆಗಲೀ, ಅಥವಾ ಸಂಬಂಧಪಟ್ಟವರಿಗೇ ಆಗಲೀ ತಿಳಿಸುವುದಕ್ಕೆ ಅಡ್ಡಿಯಾಗಿದೆ. ತಮ್ಮ ಒಂದು ಪ್ರತಿಭಟನೆಯನ್ನು ಶಾಂತ ರೀತಿಯಿಂದ ಸಲ್ಲಿಸುವುದಕ್ಕೆ ಸಹ ಅಡ್ಡಿ ತಂದಿದ್ದಾರೆ. ಇಂತಹ ಒಂದು ಅರಾಜಕತೆ ಈ ರಾಷ್ಟ್ರದಲ್ಲಿ ಬರದಾರದಾಗಿತ್ತು, ನಮ್ಮ ಭಾರತ ದೇಶದ ಮುಂದಿನ ಪೀಳಿಗೆ ಏನಾದರೂ ಈಗಿನ ಒಂದು ಚರಿತ್ರೆಯನ್ನು ಓದಿದಾಗ ಇದಕ್ಕೆಲ್ಲಾ ಕಾರಣಭೂತರಾದವರನ್ನು ಶಪಿಸದೇ ಇರಲಾರರು. ಇಷ್ಟು ಹೇಳಿ. ಸಮಯದ ಮೌಲ್ಯವನ್ನು ಅರಿತುಕೊಂಡು ಈಗ ನಾನು ರಾಜ್ಯಕ್ಕೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ. ಈಗ ನಾನು ಏನು ಒಂದು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ, ಆದರ ಬಗ್ಗೆ ಬಹಳ ಎಚ್ಚರಿಕೆಯಿಂದ, ಜಾಗರೂಕತೆಯಿಂದ ಪ್ರತಿಯೊಂದು ವಾಕ್ಯವನ್ನೂ ಹತೋಟಿಯಲ್ಲಿಟ್ಟುಕೊಂಡು ಬಹಳ ಗೌರವಯುತವಾಗಿ ಮಾನ್ಯ ಅಧ್ಯಕ್ಷರವರ ಮೂಲಕ ಈ ಸದನಕ್ಕೆ ಬಿಚ್ಚು ಮನಸ್ಸಿನಿಂದ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ರಾಷ್ಟ್ರದ ಅಭಿವೃದ್ಧಿಗಾಗಿ ಇಪ್ಪತ್ತು ಅಂಶದ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕಾದುದು ಅವಶ್ಯಕ. ಮಾನ್ಯ ಪುಟ್ಟಸ್ವಾಮಿಯವರು ತಮ್ಮ ಭಾಷಣದಲ್ಲಿ ಕೆಲವೊಂದು ವಿಚಾರಗಳನ್ನು ಪ್ರಸ್ತಾಪ ಮಾಡುತ್ತಾ ಈ ರಾಷ್ಟ್ರದಲ್ಲಿ ಹಾಲು ಮತ್ತು ಜೇನಿನ ಹೊಳೆ ಹರಿಯುವ ವಿಶ್ವಾಸ ತಮಗಿದೆ ಎಂಬುದಾಗಿ ತಿಳಿಸಿದರು. ಆ ಒಂದು ಪದಗಳನ್ನು ನಾನು ಅನೇಕ ಸಲ ನನ್ನ ಭಾಷಣದಲ್ಲಿ ಉಪಯೋಗಿಸಿದ್ದೇನೆ. ಪ್ರಾಯಶ: ಅದು ಆಗಬೇಕು. ಇಲ್ಲದಿದ್ದರೆ ನಮ್ಮ ಮುಂದಿನ ಪೀಳಿಗೆ ನಮ್ಮನ್ನು ಶಪಿಸುವುದಷ್ಟೇ ಅಲ್ಲ. ನಮ್ಮ ಬಗ್ಗೆ ಮತ್ತೊಂದು ಚರಿತ್ರೆಯನ್ನು ಬರೆದಾರು ಎಂಬ ಬಗ್ಗೆ ನನಗೆ ಅನುಮಾನವಿದೆ. ಈ ರಾಷ್ಟ್ರೀಯ ಕಾರ್ಯಕ್ರಮಗಳ ಪೈಕಿ ಬಹು ಮುಖ್ಯವಾದ ಕಾರ್ಯಕ್ರಮವೆಂದರೆ, ದೀನದಲಿತವರ್ಗದವರು ಏನಿದ್ದಾರೆ, ಅವರು ಮುಂದಕ್ಕೆ ಬರಬೇಕು, ಬೇರೆಯವರ ಮಟ್ಟಕ್ಕೆ ಅವರು ಬರುವವರೆಗೆ ಈ ಸಮಾಜ ಸುಧಾರಣೆಯಾಗಲಾರದು, ದೀನದಲಿತರು ಮತ್ತು ಅಸ್ಪೃಶ್ಯರು ಏನಿದ್ದಾರೆ ಅವರುಗಳು ಸ್ಪೃಶ್ಯರ ಜೊತೆಯಲ್ಲಿ ಸೇರಿಕೊಂಡು ನಕ್ಕುನಲ್ಲಿಯುವ ಕಾಲ ಬರಬೇಕು. ಅವರು ಉಪವಾಸವಿದ್ದಾಗ ಇವರು ಉಪವಾಸವಿರಲಿ. ಅವರು ನಲಿಯುವಾಗ ಇವರೂ ನಲಿಯಲಿ, ಆ ಒಂದು ನೈಸರ್ಗಿಕ ಬಾಂಧವ್ಯ ಜಾರಿಗೆ ಬರುವವರೆಗೆ ಈ ಸಮಾಜದ ಉದ್ಧಾರವಾಗುವುದಿಲ್ಲ ಎಂಬ ಭಾವನೆ ಉಳ್ಳವನಾಗಿದ್ದೇನೆ. ಭಾರತದ ಚರಿತ್ರೆಯಲ್ಲಿ ಈ ನಮ್ಮ ಮೈಸೂರು ರಾಜ್ಯ ಸ್ವಾತಂತ್ರ್ಯ ಪೂರ್ವದಿಂದಲೂ ಅಂದರೆ ಮಹಾರಾಜರ ಆಡಳಿತದ ಕಾಲದಿಂದಲೂ ಒಳ್ಳೆಯ ಕಾರ್ಯಗಳನ್ನು ಮಾಡಿ ಒಳ್ಳೆಯ ಹೆಸರನ್ನು ಗಳಿಸಿದೆ. ಅನೇಕ ಉತ್ತಮವಾದಂಥ ಕಾರ್ಯಗಳನ್ನು ಮಾಡಿ ಇಡೀ ಪ್ರಪಂಚದಲ್ಲಿಯೇ ಒಳ್ಳೆಯ ಹೆಸರನ್ನು ಗಳಿಸಿದೆ.

ಮಹಾರಾಜರು ಈ ರಾಜ್ಯವನ್ನು ಆಳುತ್ತಿದ್ದಾಗಲೂ ಸಹ ಹರಿಜನ ಮತ್ತು ಗಿರಿಜನರಿಗೆ ಮತ್ತು ದೀನದಲಿತರ ಬಗ್ಗೆ ಉದ್ಧಾರದ ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ಮಾಡಿಕೊಂಡು ಬರಲಾಗಿದೆ, ಅದಕ್ಕಾಗಿಯೇ ಇದು ಮಾದರೀ ಮೈಸೂರು ಎಂದು ಹೆಸರು ಪಡೆಯಿತು. ಸರ್. ಎಂ. ವಿಶ್ವೇಶ್ವರಯ್ಯ, ಮಿರ್ಜಾ, ಕೆ. ಹನುಮಂತಯ್ಯ ಮುಂತಾದವರು ಈ ರಾಜ್ಯವನ್ನು ಆಳಿ ಒಳ್ಳೆಯ ಪರಂಪರೆಯನ್ನು ಹಾಕಿಕೊಟ್ಟಿದ್ದಾರೆ. ಇಂತಹ ರಾಜ್ಯದಲ್ಲಿ ಹರಿಜನ ಮತ್ತು ಗಿರಿಜನರ ಕಲ್ಯಾಣ ಮತ್ತು ದೀನದಲಿತರ ಕಲ್ಯಾಣ ಹಿಂದಿನಿಂದ ಇಲ್ಲಿಯವರೆಗೆ ಎಷ್ಟರಮಟ್ಟಿಗೆ ಸಾಗಿಕೊಂಡು ಬಂದಿದೆ ಎಂಬುದನ್ನು ಇವೊತ್ತು ನಾವು ಪಕ್ಷಾತೀತವಾಗಿ ವಿಮರ್ಶಿಸಿ ಒಂದು ನಿರ್ಣಯಕ್ಕೆ ಬರಬೇಕಾಗಿದೆ ಜರೂರು ಪರಿಸ್ಥಿತಿ ಇರತಕ್ಕಂಥ ಕಾಲದಲ್ಲಿ ನಾವುಗಳು ಇಂತಹ ಅಂಶಗಳನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಸರ್ಕಾರ ನಡೆಸತಕ್ಕವರು ಈ ದೇಶದ ಪಾರುಪತ್ತೇಗಾರರು ಎಂದು ಹೇಳಿದರೆ ತಪ್ಪಾಗಲಾರದು, ಮತ್ತು ಈ ಸಭೆಯಲ್ಲಿರತಕ್ಕಂಥ ಸದಸ್ಯರುಗಳು, ಅವರು ಯಾವ ಒಂದು ಪಕ್ಷಕ್ಕೇ ಸೇರಿದವರಾಗಿರಲಿ, ಅವರೆಲ್ಲರೂ ಈ ರಾಜ್ಯದ ಗಡಿಗಲ್ಲುಗಳಿದ್ದಂತೆ, ಅದಕಾರಣ ನಾವುಗಳೆಲ್ಲರೂ ಧರ್ಮದರ್ಶಿಗಳಂತೆ ವರ್ತನೆ ಮಾಡಬೇಕಾಗುತ್ತದೆ. ಮೈಸೂರು ಕರ್ನಾಟಕ ಎಂದು ಬದಲಾವಣೆಯಾದ ಮೇಲೆ ಅದರಲ್ಲಿಯೂ ಮುಖ್ಯವಾಗಿ ಮಹಾರಾಜರ ಆಡಳಿತ ಕಾಲದಿಂದ ಇಲ್ಲಿಯವರೆಗೆ ಹರಿಜನ ಮತ್ತು ಗಿರಿಜನರ ಕಲ್ಯಾಣ ಎಷ್ಟರಮಟ್ಟಿಗೆ ಆಗಿದೆ ಎಂಬುದನ್ನು ನೋಡಬೇಕಾಗಿದೆ. ಇವರ ಕಲ್ಯಾಣಕ್ಕಾಗಿ ಅಂದಿನಿಂದ ಇಲ್ಲಿಯವರೆಗೆ ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಈ ಹಣವನ್ನು ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ, ಈ ಹಿಂದೆ ದಿವಾನರುಗಳ ಮೇಲ್ವಿಚಾರಣೆಯಲ್ಲಿ ಮತ್ತು ಇವರ ಬಗ್ಗೆ ಹೆಚ್ಚಿನ ಕಳಕಳಿಯಿರುವ ರಾಜಕಾರಣಿಗಳ ಮೂಲಕ ಖರ್ಚು ಮಾಡಲಾಗಿದೆ. ಈ ಜನರ ಕಲ್ಯಾಣಕ್ಕಾಗಿ ಕೆಲಸ ಮಾಡಲು ಈ ಜನಾಂಗದ ಅಧಿಕಾರಿಗಳೇ ಇದ್ದರೆ ಮತ್ತು ಈ ಜನಾಂಗದ ಮಂತ್ರಿಗಳೇ ಇದ್ದರೆ ಅವರುಗಳು ಇನ್ನೂ ಹೆಚ್ಚಿನ ರೀತಿಯಿಂದ ಮತ್ತು ಹೆಚ್ಚಿನ ಶ್ರದ್ಧೆಯಿಂದ ಕೆಲಸ ಮಾಡುತಾರೆಂಬ ಭಾವನೆಯನ್ನು ಸರ್ಕಾರದವರು ಹೊಂದಿ ಅಂತಹವರನ್ನೇ ನೇಮಕ ಮಾಡಿದರು. ನಮಗೆ ಸ್ವಾತಂತ್ರ್ಯ ಬಂದಮೇಲೆ ಈ ಇಲಾಖೆಯ ಆಡಳಿತ ನೋಡಿಕೊಳ್ಳಲು ಅದೇ ಜನಾಂಗಕ್ಕೆ ಸೇರಿದ ಮಂತ್ರಿಗಳನ್ನು ಗೊತ್ತು ಮಾಡಿಕೊಂಡು ಬಂದರು. ಆದರೆ ಇಂದು ಏನಾಗಿದೆ? ಈ ಜನಾಂಗಕ್ಕೆ ಸರ್ಕಾರದವರು ಒದಗಿಸಿದ ಹಣ ದುರ್ವಿನಿಯೋಗವಾಗಿದೆ ಎಂದು ಎಲ್ಲ ಪಕ್ಷಗಳ ಜನರು, ಎಲ್ಲ ವರ್ಗದ ಜನರು ಸಾರಿ ಸಾರಿ ಹೇಳುತ್ತಿರುವುದು ನಮಗೆ ಕೇಳಿಬರುತ್ತಿದೆ. ಈ ಅಂಶವನ್ನು ಕುರಿತು ಇಲ್ಲಿಯವರೆಗೆ ಭಾಷಣ ಮಾಡಿದ ಹರಿಜನ್ ಮುಖಂಡರುಗಳು ಹೆಚ್ಚಿನ ಆಸಕ್ತಿಯಿಂದ ಪ್ರಸ್ತಾಪ ಮಾಡುತ್ತಾರೆಂದು ನಾನು ತಿಳಿದಿದ್ದೆ, ಆದರೆ ಅವರು ಪ್ರಸ್ತಾಪ ಮಾಡಲಿಲ್ಲ. ಮಾನ್ಯ ಸಿದ್ದಯ್ಯನವರು ಮತ್ತು ಮಾನ್ಯ ಪ್ರಭಾಕರ್ ಅವರು ಪ್ರಭಾವಶಾಲಿಗಳಾದಂಥ ಸದಸ್ಯರುಗಳಾಗಿದ್ದಾರೆ. ಅವರುಗಳು ಮಾತನಾಡುವಾಗ ಈ ಅಂಶಗಳನ್ನೆಲ್ಲಾ ಪ್ರಸ್ತಾಪ ಮಾಡಬೇಕೆಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಂಡೆ, ಅದರಂತೆ ಅವರು ಅದರ ಬಗ್ಗೆ ಒಳ್ಳೆಯ ಆಸಕ್ತಿವಹಿಸಿ ಮಾತನಾಡುತ್ತಾರೆಂದು ನಂಬಿದ್ದೆ, ಆದರೆ ಅವರು ಕಾಲಾವಕಾಶವಿಲ್ಲದೆಯೋ ಅಥವಾ ಬೇರಾವ ದೃಷ್ಟಿಯಿಂದಲೋ ಪ್ರಸ್ತಾಪ ಮಾಡಲಿಲ್ಲ, ಸರ್ಕಾರದವರು ಈ ಜನಾಂಗದ ಅಭಿವೃದ್ಧಿಗಾಗಿ ಕೋಟಿಗಟ್ಟಲೆ ಹಣವನ್ನು ಏನು ಖರ್ಚು ಮಾಡುತ್ತಿದ್ದಾರೆ, ಅದು ಅವರಿಗೆ ಎಷ್ಟರಮಟ್ಟಿಗೆ ಮುಟ್ಟುತ್ತಿದೆ ಎಂಬ ಬಗ್ಗೆ ನಾನು ಪ್ರಸ್ತಾಪ ಮಾಡಬೇಕೆಂದು ಸ್ವಯಂ ಪ್ರೇರಣೆಯಿಂದ ಎಂದುನಿಂತಿದ್ದೇನೆ. ಇಲ್ಲಿಯವರೆಗೆ ಸರ್ಕಾರದವರು ಈ ಜನಾಂಗದವರಿಗೆ ಉಳುಮೆ ಮಾಡಲು ಸಾಕಷ್ಟು ಜಮೀನುಗಳನ್ನು ಕೊಟ್ಟರು, ಆದರೆ ಅವರು ಅದನ್ನು ಉಳಿಸಿಕೊಳ್ಳಲಿಲ್ಲ, ಅವರಿಗೆ ಜಮೀನು ಕೊಟ್ಟಮೇಲೆ ಜಮೀನು ಉಳುಮೆ ಮಾಡಲು ಬೇಕಾಗುವ ಅನುಕೂಲಗಳನ್ನು ಸರಿಯಾಗಿ ಮಾಡಿಕೊಡದ ಕಾರಣ ಅವರು ಅದನ್ನು ಕಳೆದುಕೊಳ್ಳಬೇಕಾಯಿತು. ಅದೇ ರೀತಿ ಅವರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಮರಮುಟ್ಟುಗಳನ್ನು ಕೊಡಲಾಯಿತು, ಆದರೆ ಅವುಗಳನ್ನು ಮಧ್ಯವರ್ತಿ ಜನರು ಬಹು ಸಂಖ್ಯೆಯಲ್ಲಿ ದುರ್ವಿನಿಯೋಗ ಮಾಡಿದರು. ಈ ಅಂಶವನ್ನು ನಾವು ಮತ್ತು ಆ ಕಡೆಯ ಸದಸ್ಯರು ಅನೇಕ ಸಲ ಹೇಳಿದ್ದಾಗಿದೆ. ಅವರ ಆರ್ಥಿಕಾಭಿವೃದ್ಧಿಗಾಗಿ ಕೋಟಿಗಟ್ಟಲೆ ಹಣ ಖರ್ಚು ಮಾಡಿದರೂ ಸಹ ಅವರು ಮುಂದೆ ಬರಲಿಲ್ಲ, ಅವರು ಆರ್ಥಿಕವಾಗಿ ಮುಂದೆ ಬರಲಿ ಎಂದು ಕೈಗಾರಿಕೆ ಸ್ಥಾಪನೆ ಮಾಡಲು ಮತ್ತು ಉಪಕರಣಗಳನ್ನು ಕೈಗೊಳ್ಳಲು ಕೊಟ್ಟ ಹಣ ಸರಿಯಾಗಿ ವಿನಿಯೋಗವಾಗಲಿಲ್ಲ.

ಇದುವರೆಗೆ ಹೇಳಿದ್ದನ್ನು ತಿಳಿದುಕೊಂಡಿದ್ದೀರಿ. ಅದು ಇರಲಿ, ಯಾರು ಕೋಟ್ಯಾಂತರ ರೂಪಾಯಿ ಟ್ಯಾಕ್ಸ್ ಕೊಟ್ಟಿದ್ದಾರೆ. ಅದು ಯಾವ ಜನಾಂಗ ಉದ್ಧಾರವಾಗಲಿ ಎಂದು ಕೋಟ್ಯಾಂತರ ರೂಪಾಯಿ ಟ್ಯಾಕ್ಸ್ ಕೊಟ್ಟರೋ, ಅದು ನಿಜವಾಗಿ ಸದ್ವಿನಿಯೋಗವಾಗಿದ್ದರೆ ಈ ಹರಿಜನ ಗಿರಿಜನರು ಈ ಮಟ್ಟದಲ್ಲಿ ಈ ರಾಜ್ಯದಲ್ಲಿ ಇರುತ್ತಿದ್ದರೆ ಎಂದು ಯೋಜನೆ ಮಾಡಿ ನೋಡಿ ? ನಾನು ಹಿಂದೆ ಅನೇಕ ಭಾರಿ ಮಾತನಾಡುವಾಗ ಈ ಸಭೆಯಲ್ಲಿ ನನ್ನ ಆಶಯವನ್ನು ವ್ಯಕ್ತಪಡಿಸಿದ್ದೇನೆ. ಅದು ಏನೆಂದರೆ ಆ ಜನಾಂಗದ ಅಭಿವೃದ್ಧಿ ಇನ್ನು ಸರಿಯಾದ ರೀತಿಯಲ್ಲಿ ಆಗಬೇಕಾದರೆ ಒಬ್ಬ ಹರಿಜನ ಮುಖ್ಯಮಂತ್ರಿಯಾದರೆ ಏನಾದರೂ ಅಭಿವೃದ್ಧಿಯಾಗಬಹುದು ಎಂದು ತಿಳಿದು ಅನೇಕ ಸಾರಿ ಪ್ರಸ್ತಾಪಮಾಡಿದ್ದೇನೆ ಇವತ್ತಿನದಿವಸ ಹರಿಜನ ಗಿರಿಜನರ ಸ್ಥಿತಿ ಏನಾಗಿದೆ ಅದರ ಬಗ್ಗೆ ತದನಂತರ ಮಾತನಾಡುತ್ತೇನೆ. ಪಿಜಿರೆನ್ಸ್ ಕಮಿಷನ್‌ನವರು ಮೊನ್ನೆ ವರದಿಮಾಡಿದ್ದಾರೆ ಆ ವರದಿಯಲ್ಲಿ ಈ ಹರಿಜನ ಗಿರಿಜನ ಹಾಸ್ಟೆಲ್‌ಗಳ ಆಡಳಿತವನ್ನು ಯಾವುದಾದರೂ ಬೇರೆ ಜನಾಂಗದವರ ಕೈಯಲ್ಲಿ ಕೊಟ್ಟರೆ ಉತ್ತಮವೆಂದು ಹೇಳಿರುವುದನ್ನು ಪತ್ರಿಕೆಯಲ್ಲಿ ಓದಿದ್ದೇನೆ. ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಕರ್ನಾಟಕದಲ್ಲಿ ಹರಿಜನ ಗಿರಿಜನರ ಹೃದಯದ ರಕ್ತನಾಳ ಯಾವರೀತಿ ಮಿಡಿಯುತ್ತಿದೆ ಎನ್ನುವುದನ್ನು ನೋಡಿದರೆ ನಿಜವಾಗಿ ನಮಗೆ ಬಹಳ ಖೇದವಾಗುತ್ತದೆ. ಕರ್ನಾಟಕ ಸಾವಿರಾರು ಜನರು ಕಷ್ಟಪಟ್ಟು ಕೊಟ್ಟಂಥ ಟ್ಯಾಕ್ಸ್ ಹಣ ನಿಜವಾಗಿ ಯಾವುದಕ್ಕೆ ಅದನ್ನು ಬಳಸಬೇಕಾಗಿದ್ದಿತ್ತು ಅದು ಅದಕ್ಕೆ ಬಳಸಲಾಗಿದೆಯೋ ? ಏನಾಯಿತು ಇದಕ್ಕೆ ಯಾರು ಹೊಣೆ ಎಂದು ಕಂಡು ಹಿಡಿಯಬೇಕಾದದ್ದು ನಮ್ಮೆಲ್ಲರ ಕರ್ತವ್ಯವೆಂದು ಹೇಳುತ್ತೇನೆ. ಇದರ ಬಗ್ಗೆ ಹೆಚ್ಚಿಗೆ ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಿಲ್ಲ. ಸಮಯದ ಒತ್ತಡವಿರುವುದರಿಂದ ಈಗ ಅನೇಕ ಜನ ಈ ಇಲಾಖೆಯನ್ನು ವಹಿಸಿಕೊಂಡು ಚೆನ್ನಾಗಿ ನಡೆಸಲಿ ಎಂದು ಸಾವಿರಾರು ಅಧಿಕಾರಿಗಳ ಟೀಮನ್ನು ಒದಗಿಸಿ ಕೊಟ್ಟಿದ್ದಾಯಿತು. ಆ ಜನಾಂಗದ ಅಧಿಕಾರಿಗಳನ್ನೇ ಹೆಚ್ಚಾಗಿ ಇರಲಿ ಎಂದು ಯಾವ ಅಪರಾಧ ಮಾಡಿದಾಗ್ಯೂ ಅದನ್ನು ಬೇರೆಯವರು ಮರೆತು ಅವರಿಗೆ ಆಶ್ರಯ ಕೊಟ್ಟಿದ್ದಾಯಿತು ಈಗ ಎರಡು ವರ್ಷಗಳ ಈಚೆಗೆ ಈ ಇಲಾಖೆಯು ಕಾರುಬಾರು ಎಷ್ಟರಮಟ್ಟಿಗೆ ನಡೆದಿದೆಯೆಂದು ಸೂಕ್ಷ್ಮವಾಗಿ, ತ್ರಿಕರಣಶುದ್ಧವಾಗಿ ಕೂಲಂಕಷವಾಗಿ ವಿಮರ್ಶೆ ಮಾಡಬೇಕು, ಅಪರಾಧಿ ಯಾರು ಎಂದು ಕಂಡು ಹಿಡಿದು ಪ್ರಾಯಶಃ ಯಾರೇ ಆಗಿರಲಿ ನಿರ್ದಾಕ್ಷಿಣ್ಯವಾಗಿ ಬಹಿರಂಗವಾಗಿ ಕರ್ನಾಟಕದ ಹರಿಜನ ಗಿರಿಜನ ವ್ಯಕ್ತಿ ಮತ್ತು ಯಾರು ಮುಖಂಡರು ಇದ್ದಾರೆ ಅವರು ಒಂದು ನಿರ್ಣಯವನ್ನು ಕೊಟ್ಟು ತೀರ್ಪುಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. 1973-74, 1974-75ರಲ್ಲಿ ಅಸ್ತಿತ್ವಕ್ಕೆ ಬಂದಂತಹ ಈ ಇಲಾಖೆಯಲ್ಲಿ ಹಣದ ಜವಾಬ್ದಾರಿ ಮತ್ತು ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದದ್ದು ಮತ್ತು ವ್ಯವಹಾರ ನಡೆಸುತ್ತಿದ್ದದ್ದು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಅದನ್ನು ತಪ್ಪಿಸಿ ಅದನ್ನೆಲ್ಲಾ ಸಂಬಂಧಪಟ್ಟ ಜಿಲ್ಲೆಗಳ ಡಿಸ್ಟ್ರಿಕ್ಟ್ ಸೋಷಿಯಲ್ ವೆಲ್‌ಫೇರ್ ಆಫೀಸರ್ ಅವರ ಜವಾಬ್ದಾರಿಗೆ ಕೊಡಲಾಯಿತು. ಅದು ಮಾನ್ಯ ಶ್ರೀ ಎನ್. ರಾಚಯ್ಯನವರು ಸಮಾಜ ಕಲ್ಯಾಣ ಇಲಾಖೆಯನ್ನು ವಹಿಸಿಕೊಂಡ ಕೂಡಲೇ ಈ ವ್ಯವಸ್ಥೆ ಆಚರಣೆಗೆ ತಂದರು. ಮಾನ್ಯ ಶ್ರೀ ರಾಚಯ್ಯನವರನ್ನು ಕಂಡರೆ ನನಗೆ ಅಪಾರ ಪ್ರೀತಿ. ಹಿಂದೆ ಅವರು ಸಮಾಜ ಕಲ್ಯಾಣ ಸಮಿತಿಯಲ್ಲಿ ಶಾಸನ ಸಮಿತಿಯಲ್ಲಿ ಅಧ್ಯಕ್ಷರಾಗಿದ್ದಾಗ, ನಾನು ಯಾವಾಗಲೂ ಅವರಿಗೆ ಹೇಳುತ್ತಿದ್ದೆ. ಆ ಒಂದು ಸಮಿತಿಯಲ್ಲಿ ನಾನು ಕೂಡ ಸದಸ್ಯನಾಗಿದ್ದೆ. ಒಬ್ಬ ಸದಸ್ಯನಾಗಿ ಅವರಿಗೆ ಈ ಅಧ್ಯಕ್ಷ ಗಿರಿ ಬೇಡ ಮೊದಲು ಮಂತ್ರಿಯಾಗಿ ಈ ಸಮಾಜದ ಮತ್ತು ಈ ಜನಾಂಗದ ಏಳಿಗೆಗಾಗಿ ದುಡಿಯುವುದು ಅವರ ಕರ್ತವ್ಯವೆಂದೇ ಹೇಳುತ್ತಿದ್ದೆ. ಅದೇ ಮಾನ್ಯ ರಾಚಯ್ಯನವರು ಮಂತ್ರಿಯಾದ ಕೂಡಲೇ ನನ್ನ ಹತ್ತಿರ ಬಂದು ನೀವು ಹೇಳಿದಂತೆ ನಾನು ಮಂತ್ರಿಯಾದೆನು ನನಗೆ ಆಶೀರ್ವಾದ ಮಾಡಿ ಎಂದು ಹೇಳಿದಾಗ ನಾನು ಎಷ್ಟೋ ಸಂತೋಷಪಟ್ಟೆ. ಜೊತೆಗೆ ಅವರನ್ನು ತಬ್ಬಿಕೊಂಡು ಬಹಳ ವಿಶ್ವಾಸದಿಂದ ನೀವು ಈ ಜನಾಂಗದ ಏಳಿಗೆಗಾಗಿ ದುಡಿಯುವುದಕ್ಕೆ ಭಗವಂತನು ನಿಮಗೆ ಒಂದು ಅವಕಾಶ ಕೊಟ್ಟಿದ್ದಾನೆ ಎಂದು ಹೇಳಿ ಆಶೀರ್ವಾದ ಮಾಡಿದೆ. ಅದೇ ಮಾನ್ಯ ರಾಚಯ್ಯನವರು ಸಮಾಜ ಕಲ್ಯಾಣ ಇಲಾಖೆಯನ್ನು ವಹಿಸಿಕೊಂಡ ತಕ್ಷಣವೇ ಜಿಲ್ಲಾಧಿಕಾರಿಗಳಲ್ಲಿದ್ದ ಅಧಿಕಾರವನ್ನು ವಿತ್‌ಡ್ರಾ ಮಾಡಿದರು. ನೇರವಾಗಿ ಆ ಇಲಾಖೆಯ ಅಧಿಕಾರಿಗಳು ಹಣದ ವ್ಯವಹಾರ ಮಾಡುವಂತೆ ಆಯಿತು. ಅಧ್ಯಕ್ಷರೇ, ತಮಗೂ ಅರಿವು ಇದೆ. ಹರಿಜನ ಗಿರಿಜನರ ಉದ್ಧಾರವಾಗಬೇಕಾದರೆ ಮತ್ತು ಅವರ ಕಾಲಮೇಲೆ ಅವರು ನಿಂತು ಜೀವನ ಮಾಡಬೇಕಾದರೆ ಅವರಿಗೆ

ಸರಿಯಾದ ವಿದ್ಯಾಭ್ಯಾಸ ಸಿಗಬೇಕು, ಅದರಿಂದ ಅವರು ಅವರ ದಾರಿದ್ರ್ಯ ನಿವಾರಣೆ ಮಾಡಿಕೊಳ್ಳಬೇಕು ಎನ್ನುವ ಮಟ್ಟಿಕ್ಕೆ ಬರುತ್ತಾರೆ, ಆ ಮೇಲೆ ಅವರ ಜೀವನ ಅವರು ಮಾಡಿಕೊಳ್ಳುತ್ತಾರೆ ಎನ್ನುವ ಸದುದ್ದೇಶದಿಂದ ಸುಮಾರು 18 ಸಾವಿರ ಹರಿಜನ ಗಿರಿಜನ ವಿದ್ಯಾರ್ಥಿಗಳನ್ನು ಸರ್ಕಾರಿ ಹಾಸ್ಟೆಲ್‌ಗಳಲ್ಲಿಟ್ಟು ಅವರಿಗೆ ಕಾಲಿಗೆ ಚಪ್ಪಲಿ, ಜುಟ್ಟು ಬೋಳಿಸುವುದಕ್ಕೆ ತಿಂಗಳಿಗೆ ಇಷ್ಟು ದುಡ್ಡು ಕೊಡಬೇಕೆಂದು ಜೊತೆಗೆ ಜೀವನದ ಖರ್ಚಿಗೆ ತಿಂಗಳಿಗೆ ನೂರು ರೂಪಾಯಿ ಕೊಡಬೇಕು ಎಂಥ ಅನ್ನದ ವ್ಯವಸ್ಥೆ ಶ್ರೀಮಾನ್ ದೇವರಾಜ್ ಅರಸ್‌ರವರ ಸರ್ಕಾರದಲ್ಲಿ ಜಾರಿಗೆ ಬಂತು. 1974-75ನೇ ಇಸವಿಯಲ್ಲಿ ಹಣವನ್ನು ಕೊಡಲಾಯಿತು. 1ನೇ ಏಪ್ರಿಲ್ 1974 ರಿಂದ 31ನೇ ಮಾರ್ಚಿ 197 ರಲ್ಲಿ ಈ ಹಣ ಖರ್ಚಾಗಬೇಕು, ಅದು ಯಾವ ರೀತಿಯಿಂದಲೂ ಖರ್ಚಾಗದೆ ಹಾಗೆ ಉಳಿದಿದೆ ಎಂದರೆ ಇದಕ್ಕೆ ಏನು ಹೇಳಬೇಕಾಗುತ್ತದೆ ? ಯಾವ ವಿದ್ಯಾರ್ಥಿಗೂ ಯಾವ ಸೌಲಭ್ಯವನ್ನೂ ಕೊಡದೆ ಹಣವನ್ನು ಹಾಗೆ ಇಟ್ಟುಕೊಂಡು 1975ನೇ ಮಾರ್ಚ್ 11ರವರೆಗೆ ಒಂದು ಆಣೆಯನ್ನು ಖರ್ಚು ಮಾಡಲಿಲ್ಲ. ಮಕ್ಕಳಿಗೆ ಬಟ್ಟೆ ಇಲ್ಲ. ಕಾಲಿಗೆ ಕೆರವೂ ಇಲ್ಲ, ಓದಲಿಕ್ಕೆ ಬರೆಯಲಿಕ್ಕೆ ಸರಿಯಾಗಿ ಪುಸ್ತಕವಿಲ್ಲ ಈ ರೀತಿಯ ಆಡಳಿತ ನಡೆದು, ವರ್ಷದ ಕೊನೆಯಲ್ಲಿ ಎಷ್ಟು ಹಣವನ್ನು ಸರ್ಕಾರ ಮಂಜೂರು ಮಾಡಿತ್ತು ಅಷ್ಟು ಹಣವನ್ನು ಏಪ್ರಿಲ್ ತಿಂಗಳಿಂದ ಡಿಸೆಂಬರ್ ತಿಂಗಳವರೆಗೆ ಮನಸೋ ಇಚ್ಛೆ ಸ್ವೇಚ್ಛೆಯಾಗಿ ಖರ್ಚು ಮಾಡಿದ್ದಾರೆ. ಸುಮಾರು 40-50 ಲಕ್ಷ ರೂಪಾಯಿಗಳ ಹಣವನ್ನು ಒದಗಿಸಿದ್ದರೂ ಕೂಡ ಅದೇ ಇಲಾಖೆಯ ಅಧಿಕಾರಿ ಕೊನೆ ಗಳಿಗೆಯಲ್ಲಿ ಯಾವುದೋ ಒಂದು ಅಂಗಡಿಗೆ ಹೋಗಿ ಒಂದು ಹುಡುಗನಿಗೆ ಈ ಸೈಜು ಬಟ್ಟೆ ಹೊಲಿ ಎಂದು ಆರ್ಡರ್ ಕೊಡುತ್ತಾನೆ ಎಂದರೆ ಇದಕ್ಕೆ ಏನು ಹೇಳಬೇಕು? ಸರ್ಕಾರದ ತೀರ್ಮಾನದ ಪ್ರಕಾರ ಮಕ್ಕಳಿಗೆ ಖಾದಿ ಬಟ್ಟೆಯನ್ನು ಒದಗಿಸಬೇಕೆಂದು ಇದೆ. ಇದನ್ನು ನೋಡಿದರೆ ಮೂರು ಕೋಟಿ ಜನರು ಯಾವ ಉದ್ದೇಶ್ಯಕ್ಕಾಗಿ ಟ್ಯಾಕ್ಸ್ ರೂಪದಲ್ಲಿ ಸರ್ಕಾರಕ್ಕೆ ಹಣವನ್ನು ಕೊಟ್ಟರೋ ಅದು ಯಾವ ರೀತಿ ಉಪಯೋಗುತ್ತಿದೆಯೆಂದು ನೋಡಿದರೆ ನಿಜವಾಗಿಯೂ ಬಹಳ ದು:ಖವಾಗುತ್ತದೆ. 31ನೇ ಮಾರ್ಚ್ ಸುಮಾರು 40-50 ಲಕ್ಷ ರೂಪಾಯಿಗಳನ್ನು ಕ್ಯಾಷ್ ಮಾಡಿ ತನ್ನ ಮನಸೋ ಇಚ್ಛೆ ಖರ್ಚು ಮಾಡುತ್ತಾನೆಂದರೆ ಇದಕ್ಕೆ ಏನು ಹೇಳಬೇಕು ? ಕೆಲವು ಹಾಸ್ಟೆಲ್‌ಗಳನ್ನು ಸಂದರ್ಶಿಸಿ ಸರ್ಕಾರಕ್ಕೆ ಒಂದು ರಿಪೋರ್ಟು ಕೊಡಬೇಕೆಂದು ಮಾನ್ಯ ಶ್ರೀ ದೇವರಾಜ್ ಅರಸ್‌ರವರು ಸರ್ಕಾರಿ ಅಧಿಕಾರಿಗೆ ಅಪ್ಪಣೆ ಮಾಡಿದ್ದಾರೆಂದು ತಿಳಿದು ಬಂದಿದೆ. ಆ ಅಧಿಕಾರಿಯ ಹೆಸರು ಶ್ರೀ ಮೂಡ್ಲಯ್ಯ. ಡೆಪ್ಯುಟಿ ಡೈರೆಕ್ಟರ್. ಅವರು ಬಿಜಾಪುರ ಜಿಲ್ಲೆಗೆ ಹೋಗಿ ಅಲ್ಲಿನ ಹಾಸ್ಟೆಲ್‌ಗಳನ್ನು ನಡೆಸುವವರಿಗೆ ಸನ್ಮಾನ್ಯ ಮಂತ್ರಿಗಳು ನನಗೆ ವಿಶೇಷತ: ಅಧಿಕಾರ ಕೊಟ್ಟು ನನ್ನನ್ನು ಕಳುಹಿಸಿದ್ದಾರೆಂದು ಹೇಳಿದರಂತೆ. ಅಲ್ಲಿ ಹಾಸ್ಟೆಲ್‌ಗೆ ಹೋದ ತಕ್ಷಣ ಏನಯ್ಯಾ ಲಂಬಾಣಿ ನೀನು 13 ಸಾವಿರ ರೂಪಾಯಿ ಸರ್ಕಾರಕ್ಕೆ ಕೊಟ್ಟರೆ ನೀನು ಬದುಕಿಕೊಳ್ಳುತ್ತೀ. 13 ಸಾವಿರದಲ್ಲಿ 2 ಸಾವಿರ ರೂಪಾಯಿ ನನಗೆ ಇನ್ನು 11 ಸಾವಿರ ರೂಪಾಯಿ ಕೊಡಬೇಕೆಂದು ಹೇಳಿದನಂತೆ. ಪಾಪ ಆ ಬಡಪಾಯಿ ಎಲ್ಲಿಂದ ತರುತ್ತಾನೆ ? ಅವನ ಹೆಂಡತಿಯ ಒಡವೆಗಳನ್ನೋ ಅಥವಾ ತಾಳಿಯನ್ನೂ ಮಾರಿ ಒಂದು ಸಾವಿರ ತಂದು ಕೊಡುತ್ತಾನೆ. ಒಂದು ಸಾರಿ ಪತ್ರಿಕೆಯಲ್ಲಿ ಈ ಅಧಿಕಾರಿಯ ಹೆಸರು ಎಲ್ಲಾ ವರದಿಯಾಯಿತು ಇಲ್ಲಿಯವರೆಗೆ ಅದರ ಬಗ್ಗೆ ಏನಾಯಿತು ಎಂಬುವುದು ಗೊತ್ತಿಲ್ಲ. ಅದೇ ಒಬ್ಬ ಸಣ್ಣ ನೌಕರ ನನ್ನ ಹತ್ತಿರ 5 ರೂಪಾಯಿ ತೆಗೆದುಕೊಂಡರೆ ಅದು ಲಂಚವೆಂದು ಅವನನ್ನು ಕೆಲಸದಿಂದ ತೆಗೆದು ಹಾಕುತ್ತೀರಿ ?

ಹಿಂದೆ ಹರಿಜನ ಗಿರಿಜನರು ಗ್ರಾಮಾಂತರಪ್ರದೇಶದಲ್ಲಿರತಕ್ಕ ಸಹಕಾರ ಸಂಸ್ಥೆಗಳಲ್ಲಿ ಸದಸ್ಯರಾಗಿ ಅಲ್ಲಿ ಷೇರು ಬಂಡವಾಳ ಪಡೆಯುವುದಕ್ಕೆ ಅವಕಾಶವಿತ್ತು. ಒಂದುವೇಳೆ ಅಲ್ಲಿ ದುಡ್ಡು ಇಲ್ಲವೆಂದು ಹೇಳಿದರೆ ಅವರ ಹೆಂಡತಿ, ಮಕ್ಕಳ ಒಡವೆ ವಸ್ತುಗಳನ್ನು ಅಡವಿಟ್ಟು ಷೇರು ಬಂಡವಾಳವನ್ನು ಕೂಡಿಸಿಕೊಳ್ಳುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಅವರ ನೆರವಿಗೆ ಹೋಗಬೇಕೆಂದು ಜಿಲ್ಲಾಧಿಕಾರಿಗಳ ಮುಖಾಂತರ ಹಣವನ್ನು ಕೊಡಿಸುತ್ತಿದ್ದರು. ಮಾನ್ಯ ಶ್ರೀ ರಾಚಯ್ಯನವರು ಅಧಿಕಾರಕ್ಕೆ ಬಂದಮೇಲೆ ಜಿಲ್ಲಾಧಿಕಾರಿಗಳ ಮುಖಾಂತರ ಆ ರೀತಿಯಾಗಿ ಸಹಾಯವನ್ನು ಹರಿಜನ, ಗಿರಿಜನರಿಗೆ ಕೊಟ್ಟಿಲ್ಲ. ನೇರವಾಗಿ ಈ ಒಂದು ಜವಾಬ್ದಾರಿಯನ್ನು ಇವರೇ ತೆಗೆದುಕೊಂಡು ಅದಕ್ಕಾಗಿಯೇ ಒಂದು ವರ್ಗವನ್ನು ನೇಮಕಮಾಡಿದರು. ಈ ಸಂದರ್ಭದಲ್ಲಿ ನಾವೂ ಒಂದು ಉದಾಹರಣೆಯನ್ನು ಕೊಡುತ್ತೇವೆ. ರಾಯಲ್ ಬೇಕರಿ ಅಂಡ್ ಕನ್‌ಫೆಕ್ಷನರಿ ಇಂಡಸ್ಟ್ರೀಯಲ್ ಸೊಸೈಟಿ ಎಂಬುದಾಗಿ ಮಾಡಿಕೊಂಡಿದ್ದಾರೆ. ಅದೂ ಅಲ್ಲದೆ ಲೆದರ್ ಇಂಡಸ್ಟ್ರೀಸ್ ಕೋ-

ಆಪರೇಟಿವ್ ಸೊಸೈಟಿ ಎಂಬುದಾಗಿ ಮಾಡಿಕೊಂಡು ಅನೇಕ ರೀತಿಯಲ್ಲಿ ಸರ್ಕಾರದ ಹಣವನ್ನು ದುರುಪಯೋಗ ಮಾಡುತ್ತಿದ್ದಾರೆ. ಇವರ ಸಹಾಯದಿಂದ ಒಬ್ಬ ಅಧಿಕಾರಿ ಆ ಸೊಸೈಟಿಯವರಿಗೆ, ನನ್ನ ಇಲಾಖೆಗೆ ಬಾರೋ ಎಂದು ಒಬ್ಬ ಮಹಾನುಭಾವ ಮೊದಲು ಹೇಳಿ ನನ್ನನ್ನು ಛೀಫ್ ಪ್ರೊಮೋಟರ್ ಆಗ ಗೊತ್ತುಮಾಡಿದ್ದಾರೆ, ನಾನೂ ಸಹ ಒಂದು ಸೊಸೈಟಿ ಮಾಡಬೇಕು ಎಂಬುದಾಗಿ ಹೇಳು ಎಂದು ಅವನಿಗೆ ಹೇಳುವುದಲ್ಲದೆ, ನನ್ನಲ್ಲಿ ಸ್ವಲ್ಪ ಬಂಡವಾಳ ಮಾತ್ರ ಇದೆಯೆಂದು ಹೇಳು ಎಂಬುದಾಗಿ ಅವರಿಗೆ ಪ್ರೇರೇಪಿಸುತ್ತಾನೆ. ಆ ತಾರೀಖಿನಲ್ಲಿ ಸಮಾಜ ಇಲಾಖೆಯ ಡೈರೆಕ್ಟರ್ ಅವರ ಹತ್ತಿರ 12,750 ರೂಪಾಯಿಗಳು ಇರುತ್ತದೆ ಅದನ್ನು ಅವನಿಗೆ ಡೈರೆಕ್ಟರ್ ಸಾಹೇಬರು ಕೊಡುತಾರೆ. ಆ ದುಡ್ಡನ್ನು ತೆಗೆದುಕೊಂಡು ಅವನು ಆ ಸೊಸೈಟಿಯನ್ನು ರಿಜಿಸ್ಟರ್ ಮಾಡುತ್ತಾನೆ. ಮರುದಿವಸವೇ ಡೈರೆಕ್ಟರ್ ಸಾಹೇಬರಿಗೆ ಒಂದು ಅರ್ಜಿ ಬರೆದು ನಾನು ನನ್ನ ಸೊಸೈಟಿಯನ್ನು ರಿಜಿಸ್ಟರ್ ಮಾಡಿದ್ದೇನೆ. ನಾನು ಈಗಾಗಲೇ 500 ರೂಪಾಯಿಗಳ ಷೇರು ಬಂಡವಾಳ ಮಾಡಿದ್ದೇನೆ. ನನ್ನಲ್ಲಿ 115 ಜನ ಮೆಂಬರುಗಳಿದ್ದಾರೆ. ಪ್ರತಿಯೊಬ್ಬರಿಗೂ 400 ರೂಪಾಯಿಗಳಂತೆ ನಮಗೆ 60 ಸಾವಿರ ರೂಪಾಯಿಗಳನ್ನು ಕೊಡಿ ಎಂದು ಕೇಳಿರುವುದಾಗಿದೆ. ಆಗ ಬಿಜಾಪುರ ಜಿಲ್ಲೆಯ ಡೆಪ್ಯುಟಿ ಡೈರೆಕ್ಟರ್ ಮೂಡಲಪ್ಪನವರು ಅದರ ಬಗ್ಗೆ ಒಂದು ನೋಟನ್ನು ಹಾಕಿ. ಸೊಸೈಟಿಯವರು ಒಂದು ಟ್ರೇಡ್ ಪ್ರಾರಂಭಮಾಡಿದ್ದಾರೆ, ನಮ್ಮ ಇಲಾಖೆಯಲ್ಲಿ ದುಡ್ಡು ಇದೆ ಜರೂರು ಕೊಡಬೇಕೆಂದು ಹೇಳಿ ಆ ಡೈರೆಕ್ಟರ್ ಸಾಹೇಬರೇ 60 ಸಾವಿರ ರೂಪಾಯಿಗಳನ್ನು ಆ ಸೊಸೈಟಿಗೆ ಕೊಟ್ಟಿದ್ದಾರೆ. ಜಿಲ್ಲಾಧಿಕಾರಿಗಳೇ ಅವರ ಮುಖಾಂತರ ಆ ಹಣವನ್ನು ಆ ಸೊಸೈಟಿಗೆ ಕೊಡಿಸಿದ್ದಾರೆ. ಹೀಗೆ ಬೆಂಗಳೂರು ಜಿಲ್ಲೆಯ ರಾಯಲ್ ಬೇಕರಿ ಮತ್ತು ಕನ್‌ಫೆಕ್ಷನರಿ ಇಂಡಸ್ಟ್ರೀಯಲ್ ಸೊಸೈಟಿಗೆ 60 ಸಾವಿರ ರೂಪಾಯಿಗಳು ಹೋಗುತ್ತಿದೆ. ಇನ್ನು ಕೆಲವು ದಿವಸಗಳಾದ ಮೇಲೆ, ಮತ್ತೆ ಅದೇ ಸೊಸೈಟಿಯಿಂದ ಇನ್ನೊಂದು ಕಾಗದ ಬರೆಯುತ್ತಾರೆ. ಅದೇನೆಂದರೆ, ಸ್ವಾಮಿ, ನಾನು ಮೊನ್ನೆ ಒಂದು ಮ್ಯಾನೇಜಿಂಗ್ ಕಮಿಟಿ ಮೀಟಿಂಗ್ ಕರದಿದ್ದೆ. ಷೇರು ಅಮೌಂಟ್ 500 ರೂಪಾಯಿಗಳಿಂದ ಸಾವಿರ ರೂಪಾಯಿಗಳವರೆಗೆ ಏರಿಸಲಾಗಿದೆ. ಆದ್ದರಿಂದ ನನಗೆ 75 ಸಾವಿರ ರೂಪಾಯಿಗಳ ಆಡಿಷನಲ್ ಷೇರು ಅಮೌಂಟ್ ಜೊತೆಗೆ 50 ಸಾವಿರ ರೂಪಾಯಿಗಳ ವರ್ಕಿಂಗ್ ಕ್ಯಾಪಿಟಲ್ ಕೊಡಬೇಕೆಂದು ಕೇಳಿದ್ದಾರೆ. ಆಗ ಅಲ್ಲಿದ್ದ ಮಹಾನುಭಾವರಾದ ಶ್ರೀ ಮೂಡಲಪ್ಪನವರು ವರ್ಷದ ಅಂತ್ಯದಲ್ಲಿ ಮಾರ್ಚ್ 27 ಅಥವಾ 29ಕ್ಕೆ ಅಲಾಟ್ ಆದ ಹಣ ಖರ್ಚಾಗಬೇಕು, ಆ ರೀತಿ ಆಗದೆ ಹಣ ಇಡಲ್ಲಾಗಿದೆ! ವರ್ಷಾಂತ್ಯವಾದುದರಿಂದ ಈಗ ಹಣವನ್ನು ಜರೂರಾಗಿ ಕೊಡಬೇಕೆಂದು ಹೇಳಿ ನೋಟ್ ಹಾಕಿದ್ದಾರೆ. ಅವರ ಒಂದು ನೋಟ್ ಮೇಲೆ ಆ 75 ಸಾವಿರ ರೂಪಾಯಿಗಳು ಸೊಸೈಟಿಯವರು ಕೇಳಿದ ಪ್ರಕಾರ ಮಂಜೂರಾಯಿತು ಮತ್ತೆ 50 ಸಾವಿರ ರೂಪಾಯಿಗಳನ್ನು ಸಹ ವರ್ಕಿಂಗ್ ಕ್ಯಾಪಿಟಲಿಗೆ ಎಂಬುದಾಗಿ ಕೊಟ್ಟಿದ್ದಾರೆ. ಅದನ್ನು ವರ್ಕಿಂಗ್ ಯೂನಿಟಿಗೆ ಕೊಟ್ಟಿದ್ದರೆ ಚೆನ್ನಾಗಿತ್ತು. ಆದರೆ ರಾಯಲ್ ಬೇಕರಿ ಅಂಡ್ ಕನ್‌ಫೆಕ್ಷನರಿ ಇಂಡಸ್ಟ್ರಿಯಲ್ ಸೊಸೈಟಿ ವರ್ಕಿಂಗ್ ಯೂನಿಟ್ ಅಲ್ಲ. ಯಾವಾಗಲೂ ಬೇಕರಿ ನಡೆಸಬೇಕಾಗಿದ್ದರೆ ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ನಡೆಸಬೇಕು, ಕಾರ್ಪೊರೇಷನ್ನಿನಿಂದ ಲೈಸನ್ಸ್ ಪಡೆಯಬೇಕು. ಗ್ರಾಮಾಂತರ ಪ್ರದೇಶದಲ್ಲಿಯಾದರೆ, ಪಂಚಾಯತಿಗಳಿಂದ ಲೈಸೆನ್ಸ್ ಪಡೆಯುತ್ತಾರೆ. ಅವರಿಗೆ ಯಾವ ಒಂದು ಲೈಸೆನ್ಸ್ ಏನೂ ಇಲ್ಲ. 75 ಸಾವಿರ ರೂಪಾಯಿಗಳು ಮತ್ತು 50 ಸಾವಿರ ರೂಪಾಯಿಗಳು ಒಂದೇ ಘಂಟೆಯಲ್ಲಿ ಮಂಜೂರಾಗಿದೆ. Rs. 1-25 lakhs is placed at the disposal of the District Social Welfare Officer to disburse it to the President of the Society Further in the same order, the Deputy Director, Education, Bangalore District is hereby authorised to supervise the working unit and to take ultilisation certificate from the concerned Society. ಈ ರೀತಿಯಾಗಿ ಆಜ್ಞೆಯಾಯಿತು. ಇವತ್ತಿನ ದಿವಸ ಸೊಸೈಟಿಯ ಬ್ಯಾಲೆನ್ಸ್ ಕೇವಲ 26-58 ರೂಪಾಯಿಗಳಷ್ಟಿದೆ. Rs. 26-58 is the cash balance remaining with that Society. ಏಕೆಂದರೆ 25 ರೂಪಾಯಿಗಳಷ್ಟು ಯಾವಾಗಲೂ ಕಡ್ಡಾಯ ಠೇವಣಿ ಇಲ್ಲಿಡಬೇಕು. ನಾನು ಏಕೆ ಈ ರೀತಿಯಾಗಿ ಹೇಳುತ್ತಿದ್ದನೆಂದರೆ, ಹರಿಜನರನ್ನು ಉದ್ಧಾರ ಮಾಡಬೇಕು, ಭೂಮಿ ಉಳತಕ್ಕ ಹರಿಜನ ರೈತರು ಯಾರು ಇದ್ದಾರೆಯೋ ಅವರಿಗೆ ಅನುಕೂಲ ಮಾಡಬೇಕು, ಏನೋ ಅವರಿಗೆ ಷೇರು ಬಂಡವಾಳ ಕೊಟ್ಟು ಉದ್ಧಾರಮಾಡೋಣವೆಂಬ

ಉದ್ದೇಶದಿಂದ ಮಾನ್ಯ ಶ್ರೀ ರಾಚಯ್ಯನವರು ಅಧಿಕಾರಕ್ಕೆ ಬಂದಮೇಲೆ ಈ ರೀತಿಯಾಗ ಹಣವನ್ನು ಉಪಯೋಗಮಾಡಲು ಅವಕಾಶಕೊಟ್ಟಿದ್ದಾರೆ. ನಾನು ಈಗ ಹೇಳುವುದಾವರೆ, ಈ ತರಹ ಎಲ್ಲಾ ಜಿಲ್ಲೆಗಳಲ್ಲಿಯೂ ಇದೇ ಬಾಳು ಇವರದಾಯಿತು. ಹರಿಜನ ಮಕ್ಕಳಿಗೆ ಎಲ್ಲಾ ತಾಯಿ ತಂದೆಗಳು ಕ್ಯಾಷ್ ಕೊಡುವುದಿಲ್ಲವೆಂದು ಹೇಳಿ ಹರಿಜನ ಮಕ್ಕಳು ಸಮಾಜದಲ್ಲಿ ಮೇಲಕ್ಕೆ ಮೇಲಕ್ಕೆ ಬರಲಿ ಎಂಬ ಬಗ್ಗೆ ಅವರ ಉದ್ಧಾರ ಹೀಗೆ ಆಯಿತು. ಇದಕ್ಕೆ ಯಾರು ಕಾರಣಕರ್ತರು ? ಈ ರಾಜ್ಯದಲ್ಲಿ ಈ ತರಹ ಆಗುವುದಕ್ಕೆ ರಾಜ್ಯಾಡಳಿತದಲ್ಲಿರತಕ್ಕ ಅನೀತಿ ಎಂದುಕೊಳ್ಳೋಣವೋ ಅಥವಾ ಪ್ರೈಪೋಟಿ ಎನ್ನೋಣವೋ ಗೊತ್ತಿಲ್ಲ. ಸ್ಟೇಟ್ ಮಾರ್ಕೆಟಿಂಗ್ ಕೊ-ಆಪರೇಟಿವ್ ಸೊಸೈಟಿಯಲ್ಲಿ ಒಂದು ಕೋಟಿ ರೂಪಾಯಿ ಅನ್ಯಾಯವಾಗಿದೆಯೆಂದು ಹೇಳಿ ನಾನೂ ಸಹ ಒಂದೂವರೆ ಕೋಟಿ ರೂಪಾಯಿ ಅನ್ಯಾಯ ಮಾಡಿದರೆ ಏನು ಆಗುತ್ತದೆ ಎಂಬತಕ್ಕಂಥ ಒಂದು ಪ್ರೈಪೋಟಿ ಈಗ ಈ ರಾಜ್ಯದಲ್ಲಿ ನಡೆಯುತ್ತಿದೆ. ಇದು ನನಗೆ ಬಂದಿರುವ ಗಾಳಿ ವರ್ತಮಾನ. ಫಾರೆಸ್ಟಿನಲ್ಲಿಯೂ ಸಹ ಎಷ್ಟೋ ಅನ್ಯಾಯವಾಗುತ್ತಿದೆ, ಎಷ್ಟೋ ನಷ್ಟವಾಗುತ್ತಿದೆ, ಅಂದಮೇಲೆ ಇದರಲ್ಲಿಯೂ ಒಂದಷ್ಟು ಹೋದರೇನು ಎಂಬುದಾಗಿ ಹೇಳುವ ಹವ್ಯಾಸ ಈಗ ಹೆಚ್ಚಾಗಿ ಬಂದಿದೆ. ಇಂತಹ ಅನ್ಯಾಯ ಮಾಡುತ್ತಿರುವವರು ಅವರು ಯಾರೇ ಆಗಿರಲಿ, ವ್ಯಕ್ತಿಗಳು ಎಷ್ಟೇ ದೊಡ್ಡವರಾಗಿರಲಿ ಅವರ ನಾಲಗೆಯನ್ನು ಕತ್ತಿಯಿಂದ ಕತ್ತರಿಸಬೇಕೆಂದು ನಿರ್ಣಯಮಾಡಬೇಕು. ಕರ್ನಾಟಕದಲ್ಲಿ ಕೋಟಿ ಗಟ್ಟಲೆ ಹರಿಜನರನ್ನು ಉದ್ಧಾರಮಾಡುತ್ತೇವೆಂದು ಹೇಳಿ ಗ್ರಾಮಾಂತರ ಪ್ರದೇಶಗಳಲ್ಲಿ ಒಬ್ಬ ಹರಿಜನ ರೈತ ಕೇವಲ 50 ರೂಪಾಯಿಗಳಷ್ಟು ಕಂದಾಯ ಬಾಕಿ ಇಟ್ಟಿದ್ದರೆ...

ಶ್ರೀ ಎನ್. ಹುಚ್ಚಮಾಸ್ತಿಗೌಡ : ಜನಗಳಿಗೆ ನಾಲಿಗೆ ಕತ್ತರಿಸುವ ಶಿಫಾರಸು ಮಾನ್ಯ ಸದಸ್ಯರು ಮಾಡುತ್ತಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ : ನಾನು ಹೇಳಿದ್ದು ಜನಗಳಿಗಲ್ಲ. ಯಾರು ಈ ದೇಶದ ಹಣವನ್ನು ದುರುಪಯೋಗ ಮಾಡುತ್ತಾರೆಯೋ, ಯಾರು ಲಂಚ ತೆಗೆದುಕೊಳ್ಳುತ್ತಾರೋ ಅಂತಹವರಿಗೆ ಆ ರೀತಿ ಶಿಕ್ಷೆ ಕೊಡಬೇಕೆಂದು ನಾನು ಹೇಳಿದ್ದು. ಯಾರೇ ಆಗಲಿ, ಅಂತಹವರು ಯಾವ ಮೇಲ್ಪಟ್ಟದ ಜನಾಂಗದವರೇ ಆಗಿರಲಿ, ಅವರು ತಪ್ಪಿತಸ್ಥರು ಎಂಬುದಾಗಿ ರುಜುವಾತು ಆದರೆ ಅಂತಹವರಿಗೆ ಕಾನೂನು ಪ್ರಕಾರ ಶಿಕ್ಷೆ ಆಗಬೇಕು. ಆಗ ಸಮಾಜ ಸುಧಾರಣೆ ಆಗುತ್ತದೆ. ಆ ರೀತಿಯಾಗಿ ಮಾಡದೆ ಕೇವಲ ಸಮಾಜ ಸುಧಾರಕರು ಎಂದು ವಿಷಾಸೆ ತಿರುಗಿಸಿಕೊಂಡು ತಮ್ಮ ಸಮಕ್ಷಮ ಆಗುತ್ತಿರುವ ಅನ್ಯಾಯ, ಅಪರಾಧಗಳನ್ನು ಬಿಟ್ಟು ಕೇವಲ ಕಂದಾಯ ಕಟ್ಟಲಿಲ್ಲವೆಂದು ಬಡ ರೈತನನ್ನು ಶಿಕ್ಷೆ ಮಾಡುವುದು ಸರಿಯೇ ? ಈಗ ತುರ್ತು ಪರಿಸ್ಥಿತಿ ಎಂದು ನಾನಾ ರೀತಿ ಪ್ರತಿಭಟನೆ ಯಾವ ವ್ಯಾಪ್ತಿಯಲ್ಲಿ ಬರುತ್ತಿದೆಯೆಂಬುದನ್ನು ಮಾನ್ಯ ಶ್ರೀ ಚನ್ನಬಸಪ್ಪನವರು ಈಗ ತಿಳಿಯಬೇಕು. ನಿಮ್ಮ ಮೇಲೆ ದಾಂಧಲೆ ಮಾಡಿದಂಥ ಜನ ಹಾಗೂ ನಿಮ್ಮನ್ನು ಲಂಚಕೋರರು ಎಂದು ಹೇಳಿದ ಜನರ ಪರಿಸ್ಥಿತಿಯನ್ನು ನೀವು ಈಗ ನೋಡಬೇಕು. ಮಾನ್ಯ ಅಧ್ಯಕ್ಷಣಿಯರೇ, ತಾವು ವಿಶಾಲ ಆಸ್ತಿಯನ್ನುಳ್ಳವರು, ಅದು ನಿಮ್ಮ ವಂಶಪಾರಂಪರ್ಯವಾಗಿ ಬಂದಿರತಕ್ಕದ್ದು.

ಅಧ್ಯಕ್ಷರು : ಈಗ ಇಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ : ಮಾನ್ಯ ಶ್ರೀ ರಾಚಯ್ಯನವರ ಬಗ್ಗೆ ನನಗೆ ಹೆಚ್ಚಿಗೆ ಮಾಹಿತಿ ಗೊತ್ತಿದೆ. ಅವರ ತಂದೆ ಗಾರೆ ಕೆಲಸಗಾರರು, ಯಜಮಾನ್ ನರಸಿಂಹಯ್ಯನವರು. ಆದರೂ ಅವರು ನನ್ನನ್ನು ಚೆನ್ನಾಗಿ ಓದಿಸಿದ್ದಾರೆಂದು ಇವರೇ ಹೇಳಿದ್ದಾರೆ. ಇವರು ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟಿನಲ್ಲಿ ಕೆಲವು ವರ್ಷಗಳ ಕಾಲ ಗುಮಾಸ್ತರಾಗಿದ್ದರು. 1950ರಲ್ಲಿ ನನಗೆ ತಿಳಿದಮಟ್ಟಿಗೆ ಮಾನ್ಯ ಶ್ರೀ ಕೆ. ಸಿ. ರೆಡ್ಡಿಯವರೇ ಈ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದರು. ಅವರ ಕಾಲದಲ್ಲಿಯೇ ದರಖಾಸ್ತಿನಲ್ಲಿ ಟಿ. ನರಸೀಪುರ ತಾಲ್ಲೂಕಿನ ಗುಮ್ಮನಪುರವೆಂಬ ಗ್ರಾಮದಲ್ಲಿ 20 ಎಕರೆ ಜಮೀನನ್ನು ಮಾಡಿದ್ದಾರೆ. ಆಗ ಕೆಲವು ಹರಿಜನರಿಗೆ ಸರ್ಕಾರದಿಂದ ಜಮೀನು ವಿಲೇವಾರಿ ಆಯಿತು. ಆಗಲೂ ಕೂಡ ಇದರ ಜೊತೆಯಲ್ಲಿ ಬಡ ಹರಿಜನರಿಂದ ಮಾನ್ಯ ಶ್ರೀ ರಾಚಯ್ಯನವರು 15 ಎಕರೆಯನ್ನು ಖರೀದಿ ಮಾಡಿದ್ದಾರೆ. ಅಂದಮೇಲೆ ಇವರಿಗೆ ಒಟ್ಟು 35 ಎಕರೆ ಖುಷ್ಕಿ ಜಮೀನು ಇದೆ. ಇದಕ್ಕೆ ಮೊದಲೇ ಮಾನ್ಯ ಶ್ರೀ ರಾಚಯ್ಯನವರು 1958ರಿಂದ 1962ರವರೆಗೆ ಎಕ್ಸೈಜು ಮಂತ್ರಿಗಳು, ವಗೈರೆ,, ವಗೈರೆ ಆಗಿದ್ದರು.

1961ರಲ್ಲಿ ರಾಜ ಮನೆತನದವರಿಂದ 25 ಎಕರೆ ತರೀ ಜಮೀನನ್ನು ಪಡೆದರು. ಕಾರಣ ವಾದರೂ ಏನು ? ತಮ್ಮ ತಂದೆ ನಿಸ್ಪೃಹತೆಯಿಂದ ನಿಷ್ಠೆಯಿಂದ ಬಹಳ ಉತ್ತಮವಾಗಿ ಕೆಲಸ ಮಾಡಿದ್ದಾರೆಂದು ಇನಾಂತಿ ಜಮೀನನ್ನು ಪಡೆದುಕೊಂಡಿದ್ದಾರೆ. ಅದು ಎಷ್ಟು ? 2 ಎಕರೆ 8 ಗುಂಟೆ. ಆ ಇನಾಂತಿ ಜಮೀನಾದರೂ ಕತ್ತಿ ಇನಾಂತಿ. ಆ 2 ಎಕರೆ 8 ಗುಂಟೆ ಜಮೀನು ಏನು ಇತ್ತು, ಅದು ಅವರ 4 ಜನ ಅಣ್ಣ ತಮ್ಮಂದಿರಿಗೆ ಭಾಗವಾಗಿಹೋಯಿತು. ಮಹಾರಾಜರ ಹತ್ತಿರ 52 ಎಕರೆ ಜಮೀನನ್ನು ಕೊಂಡು ಕೊಂಡರು. ಅದು ಕಾವೇರಿ ನದಿ ಹರಿಯುತ್ತಿರುವ ಪಕ್ಕದಲ್ಲಿಯೇ ಇದೆ. ಅವರು ಇವತ್ತಿನ ದಿನಸ $4\frac{1}{2}$ ಎಕರೆಯಷ್ಟು ಜಮೀನನ್ನು ಒತ್ತರಿಸಿಕೊಂಡು ಸಾಗುವಳಿ ಮಾಡುತ್ತಿದ್ದಾರೆ. ಶ್ರೀಮಾನ್ ಎನ್. ರಾಚಯ್ಯನವರು ತಮ್ಮ ಸಹೋದ್ಯೋಗಿಗಳು. ಅಂತಹವರಿಗೆ ಒತ್ತುವರಿ ಜಮೀನನ್ನು ಬಿಡಿಸುವುದಕ್ಕೆ ನಿಮಗೆ ಧೈರ್ಯ ಇದೆಯೇ ?

2-00 p m.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಅದು ನನ್ನ ಗಮನಕ್ಕೆ ಬಂದಿರಲಿಲ್ಲ. ತಮಗೂ ಗೊತ್ತಿರ ಬಹುದು ಈಗಾಗಲೇ ಇದರ ಬಗ್ಗೆ ನಾವು ಒಂದು ಶಾಸನವನ್ನು ಮಾಡ್ಬೇಡಿ. ಕ್ರಮವಾಗಿ ಒತ್ತುವರಿ ಮಾಡಿರತಕ್ಕಂಥವರು ಕೂಡಲೇ ಬಿಟ್ಟು ಕೊಡಬೇಕೆಂದು ಶಾಸನವಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ : ಭಿಕ್ಷೆ ಬೇಡುವವರು, ವಿಧವೆಯರಿಗೆ ತಾನೇ ತಾವು ಶಾಸನ ಮಾಡಿರತಕ್ಕಂಥದು. ಶಕ್ತಿ ಇರುವಂಥವರಿಗೆ, ನಾಲಿಗೆಯ ಬಲ ಉಳ್ಳಂಥವರಿಗೆ ಆ ಶಾಸನ ಅನ್ವಯವಾಗುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಎಲ್ಲರಿಗೆಂದೇ ಶಾಸನ ಮಾಡಿರುವುದು.

ಶ್ರೀ ಬಿ. ಪುಟ್ಟಸ್ವಾಮಯ್ಯ : ನಾನು ಕಾದು ನೋಡುತ್ತೇನೆ ಸ್ವಾಮಿ. ಅಧ್ಯಕ್ಷರೇ ಬೆಂಗಳೂರಿನಲ್ಲಿ ಸದಾಶಿವನಗರವೆಂದು ಇದೆ. ಅದು ಬಹಳ ಬೆಲೆ ಬಾಳತಕ್ಕಂಥ ಪ್ರದೇಶ ಎಂಬುದು ಎಲ್ಲರಿಗೂ ಗೊತ್ತು. ಅಲ್ಲಿ ಮೊದಲನೆಯ ಮನೆ ಯಾರದು ? ಮಾನ್ಯ ಶ್ರೀ ಎನ್. ರಾಚಯ್ಯನವರದು. ಬಹಳ ಭವ್ಯವಾದ ಬಂಗಲೆಯನ್ನು ಕಟ್ಟಿಸಿದ್ದಾರೆ. ಕೇವಲ 1700 ರೂಪಾಯಿಗಳು ಬಾಡಿಗೆ ಬರುತ್ತಿದೆ. ಮತ್ತು ನರಸಾಪುರ ಗ್ರಾಮದಲ್ಲಿ ಅವರು ಒಂದು ಕಟ್ಟಡವನ್ನು ಕಟ್ಟಿಸಿ ಟ್ರೈಲರಿಂಗ್ ಸೆಂಟರ್ ಮಾಡಿ ಅವರ ಇಲಾಖೆಯವರಿಗೇ ಬಾಡಿಗೆಗೆ ಕೊಟ್ಟಿದ್ದಾರೆ. ನರಸಾಪುರದಲ್ಲಿ ಒಂದು ಎಕರೆ ಎಂಟು ಗುಂಟೆ ಜಮೀನನ್ನು ಆಲಿನೇಷನ್ ಮಾಡಿಸಿ ಕಟ್ಟಡವನ್ನು ಕಟ್ಟಿಸಿ ಬಾಡಿಗೆಗೆ ಕೊಟ್ಟಿದ್ದಾರೆ. ಸರ್ವೆ ನಂ. 16/1, 18/2—ಒಂದು ಎಕರೆ 20 ಗುಂಟೆಯಲ್ಲಿ ಆಲಿನೇಷನ್ ಮಾಡಿಸಿ ಕಟ್ಟಡವನ್ನು ಕಟ್ಟಿಸಿ ರೆಡಿ ಮಾಡಿ ಇಟ್ಟಿದ್ದಾರೆ. ಮತ್ತೆ ಅವರು ತಮ್ಮವರೇ ಆದ ಒಬ್ಬರು ಶ್ರೀಮತಿ ಪುಟ್ಟ ಸಿದ್ದಮ್ಮ ಎನ್ನುವವರ ಹೆಸರಿನಲ್ಲಿ ತೆಗೆದುಕೊಂಡರೆ ಗೊತ್ತಾಗುವುದಿಲ್ಲವೆಂದು 25 ಸಾವಿರ ರೂಪಾಯಿಗಳಿಗೆ ಮನೆ ಖರೀದಿ ಮಾಡಿ 10 ಸಾವಿರ ರೂಪಾಯಿಗಳಿಗೆ ಮಾತ್ರ ಕಾಗದವನ್ನು ಬರೆಸಿ ಕೊಂಡಿರುತ್ತಾರೆ. ಆ ಕಟ್ಟಡವನ್ನು ಮೈಸೂರು ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ನಿಗೆ ಕೇವಲ 600 ರೂಪಾಯಿಗಳ ಬಾಡಿಗೆಗೆ ಕೊಟ್ಟಿದ್ದಾರೆ.

ಇನ್ನೊಂದು ವಿಚಿತ್ರ ಅಧ್ಯಕ್ಷರೇ, ಇವತ್ತು ದೇಶದಲ್ಲಿ ಗಂಡ ಹೆಂಡ್ತಿಗೇ ಜಮೀನನ್ನು ಭೋಗ್ಯಕ್ಕೆ ಹಾಕಿ 30 ರೂಪಾಯಿಗಳ ಸಾಲವನ್ನು ತೆಗೆದುಕೊಂಡಿದ್ದಾರೆ. ಇಷ್ಟೊಂದು ಆಸ್ತಿ ಇರತಕ್ಕಂಥ ಪುಣ್ಯಾತ್ಮರು ತಮ್ಮ ಶ್ರೀಮತಿಯವರಿಂದಲೇ 300 ರೂಪಾಯಿಗಳನ್ನು ಪಡೆದುಕೊಂಡಿದ್ದಾರೆ. ಅದು ಏತಕ್ಕಾಗಿ ಎಂದರೆ ದನದ ಕೊಟ್ಟಿಗೆ ರಿಪೇರಿ ಮಾಡಿಸಬೇಕೆಂದು ಸಾಲ ತೆಗೆದುಕೊಂಡಿದ್ದಾರೆ. ಇಷ್ಟೊಂದು ಆಸ್ತಿ ಇದ್ದೂ, ವೈಭವೋಪೇತವಾದಿ ಕಾರುಗಳು ಇದ್ದು, ರಿಪೇರಿಗೋಸ್ಕರ ಕೇವಲ 300 ರೂಪಾಯಿಗಳನ್ನು ಸಾಲ ತೆಗೆದುಕೊಳ್ಳಬೇಕೇ ?

ಮಾನ್ಯ ರಾಚಯ್ಯನವರು ಈಗ ತುರ್ತು ಪರಿಸ್ಥಿತಿ ಘೋಷಣೆಯಾದ ಮೇಲೆ ಹೇಳುತ್ತಾರೆ. ಬಡವರು ಬಾಯಿ ಮುಚ್ಚಿಕೊಂಡಿರಬೇಕು ಎಂದು. ಇವರು ಮಾತ್ರ ನರಸಾಪುರ ತಾಲ್ಲೂಕಿನಲ್ಲಿ 2 ಏಟಂ ಗದ್ದೆಯನ್ನು ತೆಗೆದುಕೊಂಡಿದ್ದಾರೆ. ಆ ಹೆಸರುಗಳೆಲ್ಲಾ ನನ್ನ ಹತ್ತಿರವಿದೆ. ಇಷ್ಟು ಆದಮೇಲೆ ಮೊನ್ನೆ ನನ್ನ ಕ್ಷೇತ್ರಕ್ಕೆ ಬಂದು ಒಂದು ಹೆಚ್ಚು ಬೆಲೆ ಬಾಳುವ ಆಸ್ತಿಯನ್ನು ತೆಗೆದು ಕೊಂಡಿದ್ದಾರೆ.

ಅಧ್ಯಕ್ಷರು : ಆದರಿಂದ ಆಗುತ್ತಿರುವ ಅಪರಾಧವಾದರೂ ಏನು ?

ಶ್ರೀ ಬಿ. ಪುಟ್ಟಸ್ವಾಮಯ್ಯ : ಅವರು ಎಷ್ಟು ವೆಲ್ತ್ ಟ್ಯಾಕ್ಸ್ ಕಟ್ಟಿದ್ದಾರೆ ? ಇನ್‌ಕಂ ಟ್ಯಾಕ್ಸ್ ಎಷ್ಟು ಕಟ್ಟಿದ್ದಾರೆ ? ಅವರಿಗೆ ಇಷ್ಟು ವರಮಾನ ಹೇಗೆ ಬಂತು ? ತಾವು ವಿಚಾರಣೆ ಮಾಡಬೇಕು.

ನಮ್ಮ ತಾಲ್ಲೂಕಿನಲ್ಲಿ ಎರಡು ಸ್ವತ್ತನ್ನು ಕೊಂಡು ಕೊಂಡಿದ್ದಾರೆ. ಒಂದು ದೊಡ್ಡ ಬಂಗಲೆ ಅದಕ್ಕೇ ಲಗತ್ತಾಗಿರತಕ್ಕಂಥ ಒಂದು ದನದ ಕೊಟ್ಟಿಗೆ ಇದೆ. ಮತ್ತೊಂದು ಐಟಂ ಯಾವುದೆಂದರೆ ಒಂದೂವರೆ ಎಕರೆ ಜಮೀನಿನಲ್ಲಿ ಬೋರ್‌ವೆಲ್ ಇರತಕ್ಕಂಥ ಒಳ್ಳೆಯ ಭೂಮಿಯನ್ನು ತೆಗೆದು ಕೊಂಡಿದ್ದಾರೆ. ಆ ಮನೆ ಬಹಳ ಉತ್ತಮವಾಗಿರತಕ್ಕಂಥ, ಸುಸಜ್ಜಿತವಾಗಿರತಕ್ಕಂಥ ಮನೆ ಅದು. ಶ್ರೀ ಎಂ. ಕೆ. ಸುಬ್ರಮಣ್ಯಂ ಎನ್ನತಕ್ಕಂಥವರಿಂದ ಅವರ ಮಗನ ಹೆಸರಿನಲ್ಲಿ ಖರೀದಿ ಮಾಡಿದ್ದಾರೆ. ಶ್ರೀ ಎನ್. ಆರ್. ಶಂಕರ್ ಬಿನ್ ಶ್ರೀ ಎನ್. ರಾಚಯ್ಯರವರ ಹೆಸರಿನಲ್ಲಿ ಅದು ಇದೆ. ಲಕ್ಷಾಂತರ ರೂಪಾಯಿ ಬೆಲೆ ಬಾಳತಕ್ಕಂತ ಮನೆಯನ್ನು ಕೇವಲ 44 ಸಾವಿರ ರೂಪಾಯಿ ಗಳಿಗೆ ಕಾಗದ ಮಾಡಿದ್ದಾರೆ. ಅದೇ ಸುಬ್ರಮಣ್ಯಂ ಎನ್ನುವವರಿಂದ ಒಂದೆರಡು ಎಕರೆ ಗದ್ದೆ, ಮುಕ್ಕಾಲು ಎಕರೆ ಖುಷ್ಕಿ ಜಮೀನನ್ನು ಅವರ ಹೆಂಗಸರ, ಸೋದರಿ ಎಂದು ಹೇಳತಕ್ಕ ಶ್ರೀಮತಿ ಸಣ್ಣಮ್ಮ ಎಂಬುವರ ಹೆಸರಿನಲ್ಲಿ 2 ಸಾವಿರ ರೂಪಾಯಿಗಳಿಗೆ ರಿಜಿಸ್ಟರ್ ಮಾಡಿಸಿಕೊಂಡಿರುತ್ತಾರೆ. ಇದರ ಜೊತೆ ಸೀಮೆ ಹಸು ಬಹಳ ಬೆಲೆ ಬಾಳತಕ್ಕಂಥದ್ದು 25,30 ಮತ್ತೆ ಎರಡು ಜೊತೆ ಎತ್ತುಗಳು, ಒಂದು ಗಾಡಿ ಇಷ್ಟನ್ನೂ 45-50 ಸಾವಿರ ರೂಪಾಯಿಗಳಿಗೆ ತೆಗೆದುಕೊಂಡಿರುತ್ತಾರೆ. ನನ್ನ ತಾಲ್ಲೂಕಿನಲ್ಲ ಏನೋ ಜನ ಗುಸುಗುಸು ಆಗಿ ಮಾತನಾಡುತ್ತಿದ್ದರು. ಇಷ್ಟು ದೇಶಕ್ಕೆ ನ್ಯಾಯ ಹೇಳತಕ್ಕಂಥ ಮಾನ್ಯ ಚನ್ನಬಸಪ್ಪನವರು, ದೇವರಾಜ ಅರಸ್‌ರವರ ಸೋದರರ ಬಗ್ಗೆ ಅಪಪ್ರಚಾರ ವಾಗುತ್ತಿರುವುದರ ಬಗ್ಗೆ ನಾನು ಸ್ವಲ್ಪ ಮುತುವರ್ಜಿ ವಹಿಸಿ ಏನು ವಿಷಯ ತಿಳಿದುಕೊಳ್ಳೋಣ ವೆಂದು ಪೂರ್ತಿ ಮಾಹಿತಿಯನ್ನು ಪಡೆಯುವುದಕ್ಕೆ ಶುರುಮಾಡಿದೆ. ಅಲ್ಲದೆ ಅವರ ಹತ್ತಿರ ಬೇಕಾದಷ್ಟು ಆಭರಣ, ನಗದು ಹಣವಿದೆಯೆಂದು ತಿಳಿದದ್ದೇನೆ. ಶ್ರೀಮತಿ ಇಂದಿರಾಗಾಂಧಿಯವರ ನೀತಿಗೆ ವಿರುದ್ಧವಾಗಿ ನಾನು ಹೇಳುತ್ತಿಲ್ಲ. ಮಾನ್ಯ ದೇವರಾಜ್ ಅರಸ್‌ರವರು, ಚನ್ನಬಸಪ್ಪ ನವರು, ಸಿದ್ಧವೀರಪ್ಪನವರು ಹಾಗೂ ಶ್ರೀ ಪುಟ್ಟಸ್ವಾಮಿಯವರಂಥ ಸೀನಿಯರ್ ಮೋಸ್ಟ್ ಪಾರ್ಟಿ ಮೆಂಬರ್ಸ್ ಇಲ್ಲಿ ಇದ್ದೀರಿ, ನಿಮ್ಮಲ್ಲಿ ಆತ್ಮವಿದ್ದರೆ, ಅಂತರಾತ್ಮದಲ್ಲಿ ಪರಮಾತ್ಮನಿದ್ದರೆ ಇದರ ಬಗ್ಗೆ ಒಂದು ನ್ಯಾಯಾಂಗ ತನಿಖೆಯನ್ನು ವ್ಯವಸ್ಥೆ ಮಾಡಿ, ನಾನೂ ಇನ್ನೂ ಅನೇಕ ಮಾಹಿತಿಗಳನ್ನು ಒದಗಿಸುತ್ತೇನೆ. ನಾನು ಹೇಳುವುದಲ್ಲಿ ಏನಾದರೂ ತಪ್ಪಿದ್ದರೆ ತಾವು ಏನು ಶಿಕ್ಷೆ ಕೊಡುತ್ತೀರೋ ಅದಕ್ಕೆ ನಾನು ತಲೆಬಾಗುತ್ತೇನೆ.

ಮಾನ್ಯ ಅಧ್ಯಕ್ಷರೇ, ಮೊನ್ನೆ ನಾನು ಹರಿಜನ ಗಿರಿಜನ ಅಭಿವೃದ್ಧಿ ಸಮಿತಿಯ ಮೀಟಿಂಗ್ ಬೆಂಗಳೂರಿನಲ್ಲಿ ನಡೆದಾಗ, ಮಾನ್ಯ ರಾಚಯ್ಯನವರು 15, 16 ಲಕ್ಷ ರೂಪಾಯಿ ಬೆಲೆ ಬಾಳತಕ್ಕಂಥ ದ್ದನ್ನು ಕೇವಲ 50-60 ಸಾವಿರ ರೂಪಾಯಿಗಳಿಗೆ ಕಾಗದ ಪತ್ರ ವ್ಯವಹಾರ ಮಾಡಿದ್ದಾರೆ. ಇದರಿಂದ ಸ್ಟೇಟ್ ಎಕ್ಸಚಕರ್‌ಗೆ ಮೋಸ ಮಾಡಿದ ಹಾಗೆ ಆಯಿತು ಎಂದು ಜಿಲ್ಲಾಧಿಕಾರಿಗಳಿಗೆ ಹೇಳಿ ಇದರ ಬಗ್ಗೆ ಪೂರ್ಣವಾಗಿ ತನಿಖೆ ನಡೆಸಬೇಕೆಂದು ಹೇಳಿದ್ದೇನೆ. 31-1-1976 ರಂದು ಮಾನ್ಯ ಶ್ರೀ ರಾಚಯ್ಯನವರು ಸಿ. ಆರ್. ಸಿ. ಕಟ್ಟಡವನ್ನು ಪ್ರಾರಂಭೋತ್ಸವ ಮಾಡುತ್ತಾ ಈ ರೀತಿ ಭಾಷಣ ಮಾಡಿರುತ್ತಾರೆ. '' ಈ ದೇಶದಲ್ಲಿ, ಕೇಂದ್ರದಲ್ಲಿ ಇಂದಿರಾಗಾಂಧಿಯವರು ಉಳಿದಿರ ತಕ್ಕಂಥದ್ದು ಹರಿಜನರ ಬೆಂಬಲದಿಂದ, ಹಾಗೂ ಕರ್ನಾಟಕ ರಾಜ್ಯದಲ್ಲಿ ಮಾನ್ಯ ದೇವರಾಜ್ ಅರಸ್ ರವರು ಉಳಿದಿರತಕ್ಕಂಥದ್ದು ಹರಿಜನರಿಂದ''. ಹರಿಜನರ ಯೋಗ ಕ್ಷೇಮವನ್ನು ವಿಚಾರಿಸುತ್ತಿರು ವುದರಿಂದ ಕೇಂದ್ರದಲ್ಲಿ ಶ್ರೀಮತಿ ಇಂದಿರಾಗಾಂಧಿಯವರು, ಶ್ರೀ ಜಗಜೀವನ್ ರಾಮ್ ರವರು ಮಾತ್ರ ಉಳಿದು ಕೊಂಡಿದ್ದಾರೆ.

ತಾವು ಏತಕ್ಕೆ ಸುಮ್ಮನೆ ಕುಳಿತಿದ್ದೀರಿ? ಹೊಡೆಯಿರಿ ಚಪ್ಪಾಳೆ ಎಂದು ಶ್ರೀಮಾನ್ ರಾಚಯ್ಯನವರು ಕೇಳಿಕೊಂಡಾಗ, ತುರ್ತು ಪರಿಸ್ಥಿತಿಯಲ್ಲಿ ಜನರಿಗೆ ಏನು ಬಾಯಿ ಇದೆ, ಎಲ್ಲ ಜನರೂ ಚಪ್ಪಾಳೆ ಹೊಡೆದರು. ಅವರು ಬೇಕಾದರೆ ಅವರ ಪಕ್ಷದ ಬಗ್ಗೆ ಮಾತನಾಡಲಿ ನನಗೆ ಅಭ್ಯಂತರವಿಲ್ಲ. ಈ ರಾಜ್ಯದಲ್ಲಿ ವ್ಯವಸಾಯ ಮಂತ್ರಿಗಳು ಇದ್ದಾರೆ. ಆತ ಯಾವ ಕೋಮಿನವರು ಗೊತ್ತಿಲ್ಲವೇ, ಆತನಿಂದ ಹರಿಜನರಿಗೆ ಏನು ಉದಾರವಾಗಿದೆ ಎಂದು ಎಲ್ಲಾ ಕೇಡಿಗಳಿಗೂ ಹೋಗಿ ಸಾರುತ್ತೇನೆ ಎಂದು ಉಜ್ವಲ ಭಾಷಣವನ್ನು

ರಾಚಯ್ಯನವರು ಮಾಡಿದ್ದಾರೆ, ತಮ್ಮ ಪಕ್ಷದವರ ಬಗ್ಗೆ ಏನು ಬೇಕಾದರೂ ಹೇಳಿಕೊಳ್ಳಲಿ. ಅದನ್ನು ಕೇಳುವ ಹಕ್ಕು ನನಗೆ ಇಲ್ಲ. ಆದರೆ ಈ ಕ್ಷೇತ್ರದಲ್ಲಿ ಒಬ್ಬರನ್ನು ಆಯ್ಕೆ ಮಾಡಿದ್ದೀರಿ, ಅವರು ಯಾವ ವರ್ಗಕ್ಕೆ ಸೇರಿದವರು? ರೆವಿನ್ಯೂ ಮಂತ್ರಿಗಳ ವರ್ಗಕ್ಕೆ ಸೇರಿದವರು, ಇವರಿಂದ ಹರಿಜನರಿಗೆ ಏನು ಉದ್ಧಾರವಾಗಿಲ್ಲ ಎನ್ನುವ ಮಟ್ಟಕ್ಕೆ ಹೋಗಿದ್ದಾರೆ. ನಾನು ಕರ್ನಾಟಕದ ಪ್ರಜೆಯಾಗಿ, ವಿರೋಧ ಪಕ್ಷದ ಸದಸ್ಯನಾಗಿ ನನಗೆ ಯಾವ ಹೆದರಿಕೆಯೂ ಇಲ್ಲ. ಇರುವ ಸತ್ಯ ಸಂಗತಿಯನ್ನು ಸಭೆಯ ಮುಂದೆ ಇಡುತ್ತಿದ್ದೇನೆ ಈಗ ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ ಈವರೆಗೆ ನಾನು ಹೇಳಿರುವ ಬಗೆ ನ್ಯಾಯಾಂಗ ವಿಚಾರಣೆ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರು ರಾಜ್ಯದಲ್ಲಿ ಹಿಂಸಾತ್ಮಕ ಚಟುವಟಿಕೆಗಳು ನಡೆದಿಲ್ಲ (ಪುಟ ೧೨) ಎಂದು ತಮ್ಮ ಭಾಷಣದಲ್ಲಿ ತಿಳಿಸಿ ಕರ್ನಾಟಕದಲ್ಲಿ ಶಾಂತಿ ಮತ್ತು ಕಾನೂನು ಪರಿಸ್ಥಿತಿ ಉತ್ತಮವಾಗಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ರಾಜ್ಯಪಾಲರು ತಳೆದಿರುವ ಈ ಅಭಿಮಾನ ಸಕಾರಣವಾಗಿದೆ. ರಾಜ್ಯದಲ್ಲಿ ಗಲಭೆಗಳಾಗಲೀ ದೊಂಬಿ ದೌರ್ಜನ್ಯಗಳಾಗಲೀ, ಕಾನೂನು ಶಾಂತಿಯ ಉಲ್ಲಂಘನೆಯಾಗಲಿ, ನಡೆಯಲು ಅವಕಾಶವೇ ಇಲ್ಲದಂತಹ ಸುಸ್ಥಿತಿ ಇದೆ. ಇದಕ್ಕೆ ಸರ್ಕಾರವನ್ನು ಅಭಿನಂದಿಸಲೇಬೇಕು.

ಮಾನ್ಯ ಅಧ್ಯಕ್ಷರ, ಜನತೆಯ ಶಕ್ತಿಯ ವಿನಿಯೋಗಕ್ಕೆ ಸರಿಯಾದ ಹಾದಿ ಇದ್ದು ಅದು ಸಾರ್ಥಕವಾಗಿ ವಿನಿಯೋಗವಾಗಲು ಸೊಗಸಾದ ಅವಕಾಶವಿರುವ ಕರ್ನಾಟಕ ರಾಜ್ಯದಲ್ಲಿ ಗಲಭೆಗಳಾಗಲೀ, ಶಾಂತಿ ಭಂಗಕ್ಕಾಗಲೀ ಎಡೆಯೆಲ್ಲಿ? ನಾನು ಆಧಾರವಿಲ್ಲದೇ ಈ ಅಭಿಪ್ರಾಯಕ್ಕೆ ಬಂದಿಲ್ಲ.

ಕಳೆದ ತಿಂಗಳು ಜನವರಿ ೧೮ರಂದು ಬೆಂಗಳೂರಿಗೆ ಬಂದಾಗ ಇಲ್ಲಿ ಒಂದು ದೊಡ್ಡ ಕಾತುರವೇ ಕಾಣಿಸಿತು. ಈ ಮಹಾನಗರದಲ್ಲೆಲ್ಲಾ ಹಬ್ಬದ ಸಡಗರ. ಆ ತಳಿರು ತೋರಣಗಳೆಷ್ಟು ಪತಾಕಿಗಳೆಷ್ಟು; ರಂಗುರಂಗಿನ ಭಿತ್ತಿ ಪತ್ರಗಳೆಷ್ಟು ಅದೆಷ್ಟು ನಮೂನೆ.

ನನಗೆ ಆಗ ಪುರಾಣ ಕಾಲದ ಅನೇಕ ಘಟನೆಗಳು ನೆನಪಿಗೆ ಬಂದವು. ತ್ರೇತಾಯುಗದ ಮಾರುತಿ ಯೇನಾದರೂ ಸಂಜೀವಿನಿ ಪರ್ವತವನ್ನು ಸಾಗಿಸಿ ಇಲ್ಲಿಗೆ ತಂದನೋ, ಆ ಸಂಜೀವಿನಿಯನ್ನು ಕಾಣಲು ಜನರು ತವಕದಿಂದ ಕೂಡಿದ್ದರೋ ಅರ್ಥವಾಗಲಿಲ್ಲ ನಾನು ರಾಮನಗರದಿಂದ ಬೆಂಗಳೂರು ಬಸ್ಸಿಗೆ ಹತ್ತಿದೆ. ಆದರೆ ಇಲ್ಲಿಗೆ ಬಂದಾಗ ಮರೆತು ಮೈಸೂರಿಗೆ ಬಂದು ಬಿಟ್ಟೆನೇ ಅನ್ನುವ ಭ್ರಮೆಯಾಯಿತು. ಒಂದಲ್ಲ ನಾಲ್ಕಾರು ಕಡೆಗಳಲ್ಲಿ ಮೈಸೂರು ಚಾಮುಂಡಿಬೆಟ್ಟದ ಮೇಲೆ ಮಹಿಷಾಸುರನ ಗಾತ್ರದ ಬೊಂಬೆಗಳು ನಿಂತಿದ್ದುವು ನನಗಂತು ಪರಮಾನಂದವಾಯಿತು. ನಿಜವಾಗಿ ಹೇಳುವುದಾದರೆ-ಸಿನಿಮಾದವರು ಆ ದಿನ ತಲೆ ತಗ್ಗಿಸಿ ಈ ರೀತಿಯ ಪ್ರಚಾರ, ವೈಭವ ಪ್ರದರ್ಶನ ನಡೆಸುವುದು ನಮ್ಮ ಹಣೆಯಲ್ಲಿ ಬರೆದಿಲ್ಲವೆಂದು ಒಪ್ಪಿಕೊಂಡರೋ ಏನೋ ? ಈ ಊರೊಟ್ಟಿನ ಹಬ್ಬದಲ್ಲಿ ಪಾಲ್ಗೊಂಡಿಪರೇನೂ ಸಾಮಾನ್ಯರಲ್ಲ. ಅಧ್ಯಕ್ಷರೇ ತಮಗೂ ಆಹ್ವಾನವಿತ್ತೋ ಏನೋ; ಹಸ್ತಿನಾವತಿಯಿಂದ ಬಂದ ಸಂಜೀವಿನೀ ಪರ್ವತವನ್ನು ಇದಿರುಗೊಳ್ಳಲು, ಸಾಧಾರಣವಾಗಿ ಕ್ಷಣಕಾಲ ಬಿಡುವಿಲ್ಲದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳೇ ೯೦ ನಿಮಿಷ ಕಾಲ ಪುಷ್ಪಕ ವಿಮಾನದ ಆಗಮನಕ್ಕಾಗಿ ಕಾದು ನಿಂತಿದ್ದರು. ಎಂಥೆಂಥವರು; ಎಷ್ಟೆಷ್ಟು ಆಸೆಗೆ ಬಸಿರಾದವರು ಅಲ್ಲಿದ್ದರು. ಲೆಕ್ಕಮಾಡಲು ಸಾಧ್ಯವಾಗಲಿಲ್ಲ.

ಅಧ್ಯಕ್ಷರು ಇಷ್ಟು ಕಾಲ ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀಮತಿ ರಾಧಾಭಟ್ಟ (ಅಂಕೋಲ)–ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರು ಮಾಡಿದಂತಹ ಭಾಷಣವನ್ನು ನಾನು ಸ್ವಾಗತಿಸುತ್ತಾ ಕೆಲವು ವಿಚಾರಗಳನ್ನು ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ನಾಡಿನ ಪ್ರಧಾನ ಮಂತ್ರಿಯವರಾದ ಶ್ರೀಮತಿ ಇಂದಿರಾಗಾಂಧಿಯವರು ಹತ್ತು ವರ್ಷಗಳ ಕಾಲದಿಂದ ಪ್ರಧಾನಿಯವರಾಗಿದ್ದಾರೆ ಈ ಹತ್ತು ವರ್ಷಗಳಲ್ಲಿ ಅವರು ಮಾಡಿದಂತಹ ಕೆಲಸವು ಅದ್ಭುತ ವಾದುದಾಗಿದೆ, ಈ ಅದ್ಭುತವಾದ ಕಾರ್ಯವನ್ನು ನಾವೆಲ್ಲರೂ ಮೆಚ್ಚತಕ್ಕುದ್ದು ಆದುದರಿಂದ ಅವರಿಗೆ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಸಲ್ಲಿಸಬೇಕಾಗುತ್ತದೆ. ಇವರು ಮಾಡಿದಂತಹ ಕೆಲಸವನ್ನು ತಾವು ಪ್ರತಿಯೊಬ್ಬರು ನಮ್ಮ ನಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದೇ ಆದರೆ ದೇಶವನ್ನು ಸುಧಾರಿಸಲಿಕ್ಕೆ ಬಹಳಷ್ಟು ದಿವಸ ಏನು ಬೇಕಾಗುವುದಿಲ್ಲ ಎಂದು ಹೇಳುತ್ತೇನೆ. ಈ ಒಂದು ಅದ್ಭುತ ಕೆಲಸ ರಾಷ್ಟ್ರದಲ್ಲೇ ಒಂದು ಅಗ್ರಸ್ಥಾನ ಪಡೆಯುತ್ತದೆ ಎಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇನ್ನು ನಮ್ಮ ಜಿಲ್ಲೆಯ

ವಿಷಯುವಾಗಿ ಕೆಲವಾರು ಮಾತುಗಳನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ ಮೊದಲನೆಯದಾಗಿ ಹೇಳುವುದಾದರೆ ಅತಿಕ್ರಮಣದಾರರು ನಮ ಜಿಲ್ಲೆಯಲ್ಲಿ ತೊಂದರೆಪಡುತ್ತಿರುವ ವಿಷಯ. ಈ ಅತಿಕ್ರಮಣಕಾರರಲ್ಲಿ ಮೂರು ವಿಧ ಇರುತ್ತದೆ. ಮೊದಲನೆಯದು ಅಡವಿಯಲ್ಲಿ ಅತಿಕ್ರಮಣ ಮಾಡುವುದು. ಎರಡನೆಯದು ಬೆಟ್ಟಗಳಲ್ಲಿ ಅತಿಕ್ರಮಣ ಮಾಡುವುದು, ಮೂರನೆಯದು ರೆವಿನ್ಯೂ ಜಮೀನುಗಳನ್ನು ಅತಿಕ್ರಮಣ ಮಾಡುವುದು. ಎಷ್ಟೋ ಜನರು ೧೯೫೪ನೇ ಇಸವಿಯಲ್ಲಿ ಅತಿಕ್ರಮಣ ಮಾಡಿಕೊಂಡವರು ದಂಡ ತುಂಬುತ್ತಿದ್ದಾರೆ.

ಈ ವಿಷಯದ ಬಗ್ಗೆ ನಮ್ಮ ರಾಜ್ಯದ ಮಾನ್ಯ ಮುಖ್ಯ ಮಂತ್ರಿಗಳವರಿಗೂ, ಮಾನ್ಯ ಕಂದಾಯ ಮಂತ್ರಿಗಳಿಗೂ ಮತ್ತು ಖಾತೆಯ ಸಂಬಂಧಪಟ್ಟ ಅಧಿಕಾರಿಗಳಿಗೂ, ಎರಡು ವರ್ಷಗಳ ಹಿಂದೆಯೇ, ಪರಿಸ್ಥಿತಿಯನ್ನು ವಿವರಿಸಿ ಕೆಲವು ಸೂಚನೆಗಳನ್ನು ಕೊಟ್ಟಿದ್ದೇನೆ. ಆದರೆ, ನಾನು ಕೊಟ್ಟಂಥ ಅಭಿಪ್ರಾಯಗಳನ್ನಾಗಲೀ, ಸೂಚನೆಗಳನ್ನಾಗಲೀ ಸರ್ಕಾರ ಯಾವಾಗ ಮತ್ತು ಯಾವ ರೀತಿಯಿಂದ ಮಾಡುತ್ತಾರೆ ಎಂದು ಕಾದು ನೋಡಬೇಕಾದ ಪರಿಸ್ಥಿತಿ ಬಂದಿದೆ. ಕೆಲವು ಜನರು ಬಡವರು, ಸರ್ಕಾರದಿಂದಾಗಲೀ ಅಥವಾ ಇನ್ನಾವುದೇ ರೀತಿಯಿಂದಾಗಲೀ ಸಹಾಯ ಸಿಗದೇ ಇರುವಂಥ ಜನ ಕೆಲವು ಕಡೆಗಳಲ್ಲಿ ಅತಿಕ್ರಮ ಮಾಡಿಕೊಂಡಿದ್ದು, ಆ ಜಮೀನಿನಲ್ಲಿ ಗಿಡಮರಗಳನ್ನೂ, ಹಣ್ಣು ಹಂಪಲುಗಳನ್ನೂ, ತೆಂಗಿನ ಮರಗಳನ್ನೂ ಮತ್ತು ಮಾವಿನ ಮರಗಳನ್ನೂ ಬೆಳೆದು ಫಲವತ್ತಾದ ಫಸಲನ್ನು ತೆಗೆಯುತ್ತಿದ್ದಾರೆ. ಇಂಥಾ ಬಡ ಜನರಿಂದ, ಇಂಥಾ ಜಮೀನುಗಳನ್ನು ಸರ್ಕಾರದವರು ಕಸಿದುಕೊಂಡು ಮತ್ತಾರಿಗೆ ಕೊಡುತ್ತಾರೆ ಎಂದು ನನಗೆ ಆಶ್ಚರ್ಯವಾಗುತ್ತಾ ಇದೆ. ನನಗೆ ಗೊತ್ತಿರುವ ಹಾಗೆ ಜಮೀನು ಸಾಗುವಳಿಗೆ ಇಲ್ಲದಿರುವವರೇ ಈ ರೀತಿ ಮಾಡಿಕೊಂಡಿರುವುದು. ಆದುದರಿಂದ, ಇವೆಲ್ಲವನ್ನೂ ಕ್ರೋಢೀಕರಿಸಿ ನಾನು ಸರ್ಕಾರಕ್ಕೆ ಕೆಲವು ಸೂಚನೆಗಳನ್ನು ಕೊಡಬಯಸುತ್ತೇನೆ.

ನಮ್ಮ ಸರ್ಕಾರದವರು, ಬಡಜನತೆಯ ಆರ್ಥಿಕ ಪರಿಸ್ಥಿತಿಯನ್ನು ತಿಳಿದುಕೊಂಡು ಅವರ ಭೂಹಿಡುವಳಿಗಳನ್ನು ವಿವರವಾಗಿ ತಿಳಿದುಕೊಳ್ಳಲಿಕ್ಕೆ, ಕಷ್ಟಸಾಧ್ಯವಾಗುವುದಿಲ್ಲವೆಂದು ಭಾವಿಸಿದ್ದೇನೆ. ಆದುದರಿಂದ, ಇವರ ಬಗ್ಗೆ ಶಾಸಕರು, ಶಾಸಕೇತರರು ಮತ್ತು ಅಧಿಕಾರಿಗಳನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ, ಅವರಿಂದ ತೀವ್ರಗತಿಯಿಂದ ಒಂದು ವರದಿಯನ್ನು ತರಿಸಿ, ಆ ಪ್ರಕಾರವಾಗಿ ಯಾರಿಗೆ, ಅವರಿಗೆ ಬೇಕಾಗಿರುವುದಕ್ಕಿಂತ ಹೆಚ್ಚಿಗೆ ಜಮೀನು ಇಟ್ಟುಕೊಂಡಿದ್ದಾರೆ, ಅವರಿಂದ ಕಸಿದುಕೊಂಡು, ಯಾರಿಗೆ ಜಮೀನು ಇಲ್ಲ; ಯಾರು ಬಡವರು ಇದ್ದಾರೆ. ಮತ್ತು ಯಾರ ಆರ್ಥಿಕ ಪರಿಸ್ಥಿತಿ ಶೋಚನೀಯವಾಗಿದೆ ಅಂತಹವರ ಆಕ್ರಮಣ ಜಮೀನುಗಳನ್ನು ಅವರವರಿಗೇ ಬಿಟ್ಟುಬಿಡುವಂಥ ವ್ಯವಸ್ಥೆ ಮಾಡಿದರೆ ಬಹಳ ಹಿತಕರವಾಗಿರುತ್ತದೆ ಎಂದು ನಾನು ಭಾವಿಸಿದ್ದೇನೆ. ನಮ್ಮ ರಾಜ್ಯದಲ್ಲಿ ಇಂಥಾ ಪ್ರಕರಣಗಳು ಬೇಕಾದಷ್ಟು ಇವೆ. ಆದುದರಿಂದ, ಬಡ ಜನನೆಯ ಕುಟುಂಬಗಳೆಲ್ಲ ತುಂಬಾ ತೊಂದರೆಗೆ ಈಡಾಗುತ್ತಾರೆ. ಆದುದರಿಂದ, ಈ ದೃಷ್ಟಿಯಿಂದ ನಾನು ಸಲಹೆ ಮಾಡುವುದೇನೆಂದರೆ; ಸರ್ಕಾರದವರು ರಚಿಸುವ ಸಮಿತಿಯ ವರದಿ ಬರುವವರೆಗೂ, ಈಗ ಇರುವಂಥಾ ಪರಿಸ್ಥಿತಿಯನ್ನೇ ಮುಂದುವರಿಸಿ, ಅನಂತರ ಇವರ ಬಗ್ಗೆ ವಿಚಾರಣೆ ನಡೆಸಬೇಕೆಂದು ಸರ್ಕಾರದವಲ್ಲಿ ನಮ್ರವಾಗಿ ವಿನಂತಿ ಮಾಡಿಕೊಳ್ಳುತ್ತೇನೆ,

ನಮ್ಮ ರಾಜ್ಯದಲ್ಲಿ, ಅದರಲ್ಲೂ ನನ್ನ ಮತದಾರರ ಕ್ಷೇತ್ರದಲ್ಲಿ ಇರುವ ಕಷ್ಟ ತೊಂದರೆ ಎಂದರೆ; ಸಾರಿಗೆ ಸಂಪರ್ಕ. ಯಾವ ಋತುವಿನಲ್ಲೂ ಕೂಡ ಸಾರಿಗೆ ಸಂಪರ್ಕ ಇಲ್ಲದೇ ಇರುವಂಥ ಸ್ಥಳಗಳು ನನ್ನ ಕ್ಷೇತ್ರದಲ್ಲಿದೆ; ನಾನು ಇಲ್ಲಿ ಶಾಸಕಿಯಾಗಿ ಬಂದ ದಿವಸದಿಂದಲೂ ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರುತ್ತಾ ಬಂದರೂ ಕೂಡ ನನ್ನ ಮತದಾರರ ಕಷ್ಟ ಮಾತ್ರ ನಿವಾರಣೆಯಾಗಿಲ್ಲ. ನನ್ನ ಕ್ಷೇತ್ರದಲ್ಲಿರುವ ಪ್ರತಿಯೊಂದು ಪಂಚಾಯಿತಿಗೂ ನಾನು ಭೇಟಿ ಕೊಟ್ಟ ಸಂದರ್ಭಗಳಲ್ಲಿ ಸುಮಾರು ೬ ೮ ೧೦ ಮೈಲಿಗಳ ದೂರವನ್ನು ನಡೆದುಕೊಂಡು ಹೋಗಬೇಕಾದ ಪರಿಸ್ಥಿತಿ ಇತ್ತು. ಇಂತಹ ಪರಿಸ್ಥಿತಿಯನ್ನು ಲೆಕ್ಕಿಸದೆ, ನಾನು, ಪ್ರತಿಯೊಂದು ಹಳ್ಳಿಗೂ ಹೋಗಿದ್ದೇನೆ. ನಾನು ಅಲ್ಲಿಗೆ ಹೋದಾಗ ಅಲ್ಲಿನ ಪಂಚಾಯತಿ ಸದಸ್ಯರೂ ಮತ್ತು ಹಳ್ಳಿಗಾಡಿನ ಜನರು ಅವರವರ ಕಷ್ಟಸುಖಗಳನ್ನು ಹೇಳಿಕೊಂಡಾಗ, ಆ ಜನತೆಯ ಹಿತವಾಗುವುದೋ ಇಲ್ಲವೋ ಎನ್ನುವ ದಿಗ್ಭ್ರಮೆಯಾಯಿತು ನನಗೆ; ಇಂಥಾ ಒಗ್ಗಟ್ಟಿನ ಸರ್ಕಾರ ಆಡಳಿತಕ್ಕೆ ಬಂದರೂ ಕೂಡ ಅಲ್ಲಿನ ಜನತೆಯ ಕಷ್ಟ ನಿವಾರಣೆಯಾಗಿದ್ದಕ್ಕೆ ನನಗೆ ವಿಷಾದವಾಗುತ್ತದೆ. ೧೯೭೩-೭೪ನೇ ಇಸವಿಯಲ್ಲಿ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಬರಗಾಲ ಬಂದಿದ್ದು, ಬೇರೆ ಬೇರೆ ಹಳ್ಳಿಗಾಡುಗಳಿಗೆ ಇಟ್ಟಿದಂಥ ಹಣವನ್ನು, ಅದೇ ಹಳ್ಳಿಗಳಿಗೆ ಖರ್ಚು ಮಾಡದೆ, ಬರಗಾಲಪೀಡಿತ ಪ್ರದೇಶಗಳಿಗೆ ಕಳುಹಿಸಿ, ಅಲ್ಲೆಲ್ಲಾ ಅಭಿವೃದ್ಧಿ ಕೆಲಸ ಆಗುತ್ತಾ ಇದೆ ಎಂದು ಸುಮ್ಮನೆ ಇದ್ದೆವು. ಆದರೆ, ನಮ್ಮ

ರಾಜ್ಯದ ಸದ್ಯಕ್ಕೆ ಯಾವುದೇ ಅಭಾವ ಪೀಡಿತ ಪ್ರದೇಶಗಳಿಲ್ಲವಾದುದರಿಂದ, ನಮ್ಮ ಕ್ಷೇತ್ರಕ್ಕೆ ಸಾರಿಗೆ ಸಂಪರ್ಕವನ್ನು ಹೆಚ್ಚಿನ ರೀತಿಯಲ್ಲಿ ಮಾಡಿಕೊಟ್ಟು ಅಲ್ಲಿನ ಬಡ ಜನತೆಗೆ ಅನುಕೂಲ ಮಾಡಿಕೊಡಬೇಕೆಂದು ನವ್ರವಾಗಿ ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರು ವಿಶಾಕಪಟ್ಟಣದಲ್ಲಿ ವಿಜ್ಞಾನಿಗಳನ್ನು ಕುರಿತು ಭಾಷಣ ಮಾಡುವಾಗ, ಪ್ರತಿಯೊಂದು ಹಳ್ಳಿಗಾಡಿನ ಪ್ರದೇಶಕ್ಕೂ ಸಾರಿಗೆ ಸಂಪರ್ಕ ಹೆಚ್ಚಿನ ರೀತಿಯಲ್ಲಿ ಆಗಬೇಕೆಂಬ ಮಾತನ್ನು ಒತ್ತಿ ಹೇಳಿದ್ದಾರೆ. ಅಷ್ಟೇ ಅಲ್ಲದೆ, ಅವರು ಘೋಷಿಸಿರುವ ೨೦ ಅಂಶದ ಕಾರ್ಯಕ್ರಮಗಳು ಬರೀ ಪತ್ರಿಕೆಯಲ್ಲಿ ಉಳಿಯುವುದು ಬೇಡ; ಪ್ರತಿಯೊಂದು ಸ್ಥಳದಲ್ಲೂ ಈ ೨೦ ಅಂಶದ ಕಾರ್ಯಕ್ರಮಗಳು ಜಾರಿಯಲ್ಲಿರುವುದು ಕಾಣಬೇಕು; ಆ ರೀತಿಯಲ್ಲಿ ಎಲ್ಲರೂ ಕೆಲಸ ಮಾಡಬೇಕು; ಪರಿಶ್ರಮದಿಂದ ದುಡಿಯಬೇಕು ಎಂದು ಹೇಳಿದ್ದಾರೆ ಮತ್ತೆ, ಅವರು ಇದರಿಂದ ನಮಗೆ ''ಪ್ರಚಾರ'' ಬೇಕು ಎಂದು ಹೇಳಿಲ್ಲ. ಆದರೆ, ಕೆಲವು ಕಡೆಗಳಲ್ಲಿ ೨೦ ಅಂಶದ ಕಾರ್ಯಕ್ರಮ ''ಪ್ರಚಾರ''ಕ್ಕಾಗಿ ನಡೆಯುತ್ತಿದೆ ಎಂದು ನನಗನ್ನಿಸುತ್ತದೆ. ೨೦ ಅಂಶಗಳ ಕಾರ್ಯಕ್ರಮಗಳು ಘೋಷಣೆಯಾಗಿ ಒಂದು ವರ್ಷವಾಗುತ್ತಾ ಬಂದರೂ ಕೂಡ ಎಷ್ಟೋ ಹಳ್ಳಿಗಳಲ್ಲಿ ಇದು ಕಾರ್ಯಗತವೇ ಆಗಿಲ್ಲ ಆದುದರಿಂದ, ಶಾಸಕರು ಇದನ್ನೆಲ್ಲಾ ತಿಳಿದುಕೊಂಡು, ಪ್ರತಿಯೊಬ್ಬರೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಪ್ರಾಮಾಣಿಕತನದಿಂದ ದುಡಿದರೆ, ಇಂದಿರಾಗಾಂಧಿಯವರು ಘೋಷಿಸಿರುವ ೨೦ ಅಂಶದ ಕಾರ್ಯಕ್ರಮಗಳನ್ನು ಜನತೆಗೆ ಮುಟ್ಟಿಸಲಿಕ್ಕೆ ಸಾಧ್ಯ ಎಂದು ನನ್ನ ಭಾವನೆ ಅದೇ ರೀತಿ, ಸರ್ಕಾರ ಕೂಡ, ನಮ್ಮ ಶಾಸಕರು, ಅದರಲ್ಲೂ ಪ್ರಾಮಾಣಿಕರಾಗಿ ಕೆಲಸ ಮಾಡುವಂಥ ಶಾಸಕರು, ಅದರಲ್ಲೂ ಒತ್ತಿ ಹೇಳಬೇಕಾದರೆ, ನಮ್ಮ ಹೆಣ್ಣು ಮಕ್ಕಳ ಕ್ಷೇತ್ರದಲ್ಲಿ ಹೆಚ್ಚು ಕೆಲಸ ಮಾಡಲಿಕ್ಕೆ ಯಾರು ಮುಂದಾಗುತ್ತಾರೆ, ಅಂಥವರಿಗೆ ನಮ್ಮ ಸರ್ಕಾರದವರು ಬೆಂಬಲಿಗರಾಗಿ ನಿಂತು, ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಬೇಕೆಂದು ನಾನು ನಮ್ರವಾಗಿ ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಸೂಚನೆ ಮಾಡಬಯಸುತ್ತೇನೆ.

ಇನ್ನೊಂದು ಮುಖ್ಯವಾದ ವಿಚಾರವೇನೆಂದರೆ; ಶ್ರೀ ವಿನೋಭಾ ಭಾವೆಯವರು ಐದು ಅಂಶದ ಕಾರ್ಯಕ್ರಮವನ್ನು ತಂದಿದ್ದಾರೆ ಇದನ್ನು ಪ್ರತಿಯೊಬ್ಬ ಮನುಷ್ಯನೂ ತಿಳಿದುಕೊಳ್ಳಬೇಕಾದುದು ಅತಿ ಅವಶ್ಯಕ. ಅದರಲ್ಲೂ, ನಾವು, ಜವಾಬ್ದಾರಿ ಶಾಸಕರು ಅರಿತುಕೊಂಡು, ಪ್ರಧಾನ ಮಂತ್ರಿಯವರ ೨೦ ಅಂಶದ ಕಾರ್ಯಕ್ರಮದ ಜೊತೆಗೆ ಮತ್ತು ಅದಕ್ಕಿಂತ ಮುಖ್ಯವಾಗಿ ವಿನೋಬಾ ಭಾವೆಯವರ ಈ ೫ ಅಂಶದ ಕಾರ್ಯಕ್ರಮದಲ್ಲಿ ಮಾಡಬೇಕಾದ ಕೆಲಸ ಇನ್ನೂ ತುಂಬಾ ಇದೆ. ಆದುದರಿಂದ ಈ ೫ ಅಂಶದ ಕಾರ್ಯಕ್ರಮದಲ್ಲಿ ಭಾಗಿಯಾಗಿ, ಶಕ್ತಿಮೀರಿ ಕೆಲಸ ಮಾಡಿ, ನಮ್ಮ ಜನತೆಯ ಹಿತದೃಷ್ಟಿಯಿಂದ ದುಡಿಯಲಿಕ್ಕೆ ನಮ್ಮ ಶಾಸಕರು ಪ್ರಯತ್ನ ಮಾಡುತ್ತಾರೆ ಎಂದು ಭಾವಿಸಿದ್ದೇನೆ. ನಮಗ ಮಾನ್ಯ ಇಂದಿರಾಗಾಂಧಿಯವರು ಹಾಕಿ ಕೊಟ್ಟಿರತಕ್ಕ ಕಾರ್ಯಕ್ರಮಗಳು ದಾರಿದೀಪವಾಗಿದೆ ಜನತೆ ದಾರಿ ದೀಪವಾಗಿದೆ ಹಾಗೆ ಕರ್ನಾಟಕ ಮುಖ್ಯ ಮಂತ್ರಿಯವರೂ ಕೂಡ,ಬಹಳ ದಕ್ಷತೆಯಿಂದ ನಮಗೆ ದಾರಿದೀಪವಾಗಿ ಬೆಳಗುತ್ತಿದ್ದಾರೆ. ಅವರ ಪ್ರಕಾರವೂ ಕಾಲಿನದಿಯಿಂದ ಇನ್ನೂ ಉಜ್ವಲವಾಗಿ ನಮ್ಮ ಕಣ್ಣಿಗೆ ಪ್ರಕಾಶಿಸುತ್ತಿದೆ, ಹಾಗೆಯೇ ನಾವೆಲ್ಲರೂ ಪ್ರಾಮಾಣಿಕತನದಿಂದ ನಮ್ಮ ಸರ್ಕಾರದ ಧೋರಣೆ ಮತ್ತು ಕಾಯಿದೆಗಳನ್ನು ಅಳವಡಿಸಿಕೊಂಡು ಕೆಲಸ ಮಾಡಲಿಕ್ಕೆ ಬದ್ಧರಾಗೋಣ ಎಂದು ಹೇಳಬಯಸುತ್ತೇನೆ ಮೊದಲು ಜನತೆಗೆ ಮುಟ್ಟಬೇಕಾದುದು ಏನು ಎಂದರೆ ಕುಟುಂಬ ಯೋಜನೆ. ಇದು ಈಗಾಗಲೇ ಜಾರಿಯಲ್ಲಿದ್ದರೂ ಕೂಡ ಯಾರು ಸರಿಯಾಗಿ ತಿಳಿದುಕೊಂಡಿಲ್ಲ ವಂದು ನನಗನ್ನಿಸುತ್ತದೆ. ಕುಟುಂಬ ಯೋಜನೆ ಜಾತೀಯತೆಯ ಮೇಲೆ ಹೋಗುತ್ತಾ ಇದೆ ಎಂದು ಕೆಲವರ ಭಾವನೆ ಇರಬಹುದು. ಅಂದರೆ, ಇದನ್ನು ಸರ್ಕಾರದವರು ತಂದಿದ್ದು ಜಾತೀಯತೆಯ ದೃಷ್ಟಿಯಿಂದಲ್ಲ ಇದು ಪ್ರತಿಯೊಬ್ಬ ಮಾನವನಿಗೂ ಅನ್ವಯಿಸುತ್ತದೆ. ಆದರೆ, ವಾಸ್ತವದಲ್ಲಿ ಆಗುತ್ತಾ ಇರುವುದನ್ನು ನೋಡಿದರೆ ಬಹಳ ಅನ್ಯಾಯವಾದಂತೆ ಕಾಣುತ್ತದೆ. ಈ ಯೋಜನೆಯ ತತ್ವವನ್ನು, ಪ್ರತಿಯೊಬ್ಬ ಶಾಸಕರೂ, ಮಂತ್ರಿಗಳೂ ಮತ್ತು ದೇಶದ ಪ್ರತಿಯೊಬ್ಬ ಜನತೆಯೂ ಅರಿತುಕೊಂಡು ಪಾಲಿಸಿದ್ದೇ ಆದರೆ ದೇಶದಲ್ಲಿ ಒಳ್ಳೆಯ ರೀತಿಯಿಂದ ಜೀವನ ಮಾಡುವುದಕ್ಕೆ ಸಾಧ್ಯವಾಗುತ್ತದೆ; ಮತ್ತು ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ; ಎಂದು ಹೇಳಿ, ರಾಜ್ಯಪಾಲರು ಮಾಡಿದ ಭಾಷಣಕ್ಕೆ ವಂದನೆ ಸಲ್ಲಿಸುವುದರ ಬಗ್ಗೆ ಎರಡು ಮಾತುಗಳನ್ನಾಡಲು ಅಪ್ಪಣೆ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ' ಅಕಾಲ ಚಂಡಿಕ ಚಿನ್ನ ಮಸ್ತಿಕ ರಕ್ತ ಪಿಶಾಚಿನಿಯ ಸರ್ವಾಧಿಕಾರದ ಅಡಿಯಲ್ಲಿ ೮ನೇ ತಿಂಗಳಲ್ಲಿ ಕಳೆಯುತ್ತಿದ್ದೇವೆ. ಕಳೆದ ಆಗಸ್ಟ್ ೯ನೇ ದಿನ ಈ ಮಾನ್ಯ ಸಭೆ ಸೇರಿದಾಗ ಆಡಿದ ಮಾತುಗಳು ನೆನಪಿಗೆ ಬರುತ್ತಿವೆ. ಅಂದು ನಾವು ಆಶಿಸಿದ್ದೆವು, ಇಂದೋ ನಾಳೆಯೋ ನಮ್ಮನ್ನು ಆವರಿಸಿರುವ ಭಯಂಕರ ಪರಿಸ್ಥಿತಿ ನಿವಾರಣೆ ಆದೀತು, ಮರಳಿ ಪ್ರಜಾಪ್ರಭುತ್ವ ಸ್ವಾತಂತ್ರ್ಯ ಕೋಟಿ ಕೋಟಿ ಭಾರತೀಯರಿಗೆ ದೊರೆತೀತು ಎಂದು ನಾವು ಕಲ್ಪನೆ ಇಟ್ಟುಕೊಂಡಿದ್ದೆವು. ಆದರೆ, ದಿನೇ ದಿನೇ ಹೆಜ್ಜೆ ಹೆಜ್ಜೆಯನ್ನು ಮುಂದಿಡುತ್ತಾ ಸಂಪೂರ್ಣವಾಗಿ ಸ್ವಾತಂತ್ರ್ಯದ ಹರಣ, ಪ್ರಜಾಪ್ರಭುತ್ವದ ದಮನ ನಡೆದು ಈ ಸ್ಥಿತಿಗೆ ಇಂದು ನಾವು ಬಂದಿದ್ದೇವೆ ನಿಜ, ಶಾಸನಸಭೆಗಳು, ಲೋಕಸಭೆಗಳು ನಡೆಯುತ್ತಿವೆ. ಆದರೆ ಲೋಕಸಭೆಯಲ್ಲಿ ಇಂದು ವಿರೋಧಪಕ್ಷದ ೩೯ ಜನ ಕಾರಾಗೃಹದಲ್ಲಿದ್ದಾರೆ, ಕರ್ನಾಟಕದ ಶಾಸನಸಭೆಯ ಎರಡು ಸದನಗಳ ವಿರೋಧಪಕ್ಷದ ನಾಯಕರುಗಳು ಇಂದು ಕಾರಾಗೃಹದಲ್ಲಿದ್ದಾರೆ ವಿರೋಧ ಪಕ್ಷಗಳ ಸಹಸ್ರ ಜನ, ಪ್ರಾಮಾಣಿಕವಾಗಿ ಪ್ರಜಾಪ್ರಭುತ್ವವಾದಿಗಳು, ಸ್ವಾತಂತ್ರ್ಯವಾದಿಗಳು, ನಾಡಿನ ಸ್ವಾತಂತ್ರ್ಯಕೋಸ್ಕರ ದುಡಿದು ತನುಮನವನ್ನು ಅರ್ಪಣೆ ಮಾಡಿಕೊಂಡಂತಹ ಮಹಾನುಭಾವರು ಇಂದು ಕಾರಾಗೃಹದಲ್ಲಿ—ಕೊಳೆಯುತ್ತಿದ್ದಾರೆ. ನಾವು ಕಾಳಸಂತೆಕೋರರನ್ನು, ಕಾಳಸಂತೆ ಕದೀಮರನ್ನು, ಲಂಚಕೋರರನ್ನು, ಭ್ರಷ್ಟರನ್ನೂ ಮತ್ತು ದುಷ್ಟರನ್ನು ಹಿಡಿದುಕೊಡತಕ್ಕಂಥ ಜನ ಇಂಥ ವಿಚಾರಕ್ಕೆ ವಿರೋಧಿಗಳಲ್ಲ ನಾವು. ಆದರೆ ಅಖಿಲ ಭಾರತ ಸೋಷಲಿಷ್ಟ ಪಕ್ಷದ ಮುಖಂಡರುಗಳಾದ ಮಧುಲಿಮಯೆ, ಮಧುದಂಡವತೆ ಮುಂತಾದವರು ಇಂದು ಕಾರಾಗೃಹದಲ್ಲಿ ಕೊಳೆಯುತ್ತಿದ್ದಾರೆ ಇಲ್ಲಿ ನನ್ನ ಪಕ್ಷದ ಅಧ್ಯಕ್ಷ, ಕಾರ್ಯದರ್ಶಿಗಳು ಕಾರಾಗೃಹದಲ್ಲಿದ್ದಾರೆ. ಜನತಂತ್ರವಾದಿಗಳನ್ನು ಹತ್ತಿಕ್ಕಿ ಅವರನ್ನು ಸೆರೆಮನೆಯಲ್ಲಿಟ್ಟು ಪ್ರಜಾಪ್ರಭುತ್ವವನ್ನು ನಡೆಸುತ್ತಿದ್ದೀರಿ ನೀವು. ಶಾಸನಸಭೆಗಳು ಮತ್ತು ಲೋಕಸಭೆಗಳು ನಡೆಯುವುದಾದರೂ ಕೇವಲ ತೋರಿಕೆಗೆ ಮಾತ್ರ, ಇಲ್ಲಿ ನಡೆಯುವುದು ಯಾವುದು ಬಹಿರಂಗವಾಗಿ ಸಾರ್ವಜನಿಕರಿಗೆ ತಲುಪಲು ಸಾಧ್ಯವಿಲ್ಲ. ಪತ್ರಿಕೆಗಳ ಮೇಲೆ ಸಂಪೂರ್ಣ ಹತೋಟಿ ಇಟ್ಟು, ಸೆನ್‌ಸಾರ್ ಷಿಪ್‌ಗೆ ಒಳಪಡಿಸಿ ಅದರ ಮೇಲೆ ಸರ್ವಾಧಿಕಾರದ ಮತ್ತು ಪ್ರಜಾಪ್ರಭುತ್ವದ ನಾಟಕವನ್ನು ಹಾಡುತ್ತಿದ್ದೀರಿ. ಈ ನಾಟಕ ಬಹುಶಃ ಹೀಗೆಯೇ ನಡೆಯಲಾರದು. ಇವತ್ತು ನಮ್ಮಲ್ಲಿ ಸರ್ವಾಧಿಕಾರ ಇದೆ, ಇತರ ರಾಷ್ಟ್ರಗಳ ಜನರಿಗೆ ನಮ್ಮಲ್ಲಿ ದೊಡ್ಡ ಪ್ರಜಾಪ್ರಭುತ್ವ ನಡೆಯುತ್ತಿದ. ಎನ್ನತಕ್ಕ ಕಲ್ಪನೆ ಮತ್ತು ಭ್ರಮೆ ಹುಟ್ಟಿಸತಕ್ಕಂಥ ನಾಟಕ ನಮ್ಮ ಭಾರತದಲ್ಲಿ ನಡೆಯುತ್ತಿದೆ. ಪ್ರಜಾಪ್ರಭುತ್ವವಾದಿಗಳು, ಹಿಂದೆ ಬ್ರಿಟೀಷರ ವಿರುದ್ಧ ಸ್ವಾತಂತ್ರ್ಯ ಚಳುವಳಿಯಲ್ಲಿ ಹೋರಾಟ ಮಾಡಿ, ಕಾರಾಗೃಹವಾಸ ಅನುಭವಿಸಿದಂತ ಮಹಾತ್ಮ ಗಾಂಧೀಜಿ, ಸುಭಾಷ್ ಚಂದ್ರಬೋಸ್, ಜವಹರಲಾಲ್ ನೆಹರು ಮತ್ತು ವಲ್ಲಭಾಯ್ ಪಟೇಲ್ ಅವರೊಂದಿಗೆ ಹೋರಾಡಿ ಸ್ವಾತಂತ್ರ್ಯ ತಂದುಕೊಟ್ಟಂತ ಹಿರಿಯರನ್ನು ಕೇಳುತ್ತೇನೆ, ಹಾಗೆಯೇ ಮಾನ್ಯ ಕೆ. ಪುಟ್ಟಸ್ವಾಮಿಯವರಿಗೂ ನೇರವಾಗಿ ಪಶ್ನೆ ಮಾಡುತೇನೆ. ನಿಮ್ಮ ಅಂತರಾತ್ಮದಿಂದ ಈ ಪರಿಸ್ಥಿತಿಯನ್ನು ಸಮರ್ಥಿಸುತ್ತೀರಾ ? ತಾವು ಮೈಸೂರು ಜಿಲ್ಲೆಯಲ್ಲಿರತಕ್ಕ ಹಿರಿಯರೆಲ್ಲರೂ ಸೇರಿ ಸ್ವಾತಂತ್ರ್ಯಕೋಸ್ಕರ ಚಳುವಳಿ ಮಾಡಿದ್ದೀರಿ, ಆದರೆ ವಂದನಾನಿರ್ಣಯದಲ್ಲಿ ಈ ತುರ್ತುಪರಿಸ್ಥಿತಿಯನ್ನು ಸಮರ್ಥನೆ ಮಾಡುವಷ್ಟು ಏಕೆ ಮನಸ್ಸು ಮಾಡಿದರೋ ನಾನು ಬೇರೆ ಶಬ್ಧವನ್ನು ಹೇಳುವುದಕ್ಕೆ ಅಪೇಕ್ಷೆ ಪಡುವುದಿಲ್ಲ. ಇಂಥ ಸ್ಥಿತಿಯನ್ನು ಪಾರು ಮಾಡಲು ಹಿರಿಯರು ಯಾರು ಇರಲಿಲ್ಲವೇ ? ಆಳುವ ಪಕ್ಷದಲ್ಲಿ ಯಾರು ಪ್ರಾಮಾಣಿಕರು ಇಲ್ಲವೇ ? ಸ್ವಾತಂತ್ರ್ಯಕ್ಕೆ ಮಾರಕಪ್ರಾಯರಾದಂತ ಗಂಡು ಶಿಖಂಡಿಗಳು ಏನು ನೀವು ? ಇಂಥ ಪರಿಸ್ಥಿತಿಯಲ್ಲಿ ನಾವು ಇಲ್ಲಿ ಕೂತುಕೊಳ್ಳುವ ಬದಲು ಎಲ್ಲರೂ ಸೇರಿ ನೆಮ್ಮದಿಯಾಗಿ ಜೈಲಿನಲ್ಲಿ ಸಾಯೋಣ, ಇಂಥ ಸ್ಥಿತಿಯಲ್ಲಿ ಈ ದೇಶದ ಸ್ವಾತಂತ್ರ್ಯವನ್ನು ಹರಣ ಮಾಡುತ್ತಾ ಇರತಕ್ಕಂಥ ಪರಿಸ್ಥಿತಿಯಲ್ಲಿ ಶಾಸೋಚ್ವಾಸ ಮಾಡುವ ಪರಿಸ್ಥಿತಿ ಉಂಟು 'ಎನು ?

ಶ್ರೀ ಎ. ಎಸ್. ಪಾಟೀಲ್.—ಈಗ ತಾವು ಮಾತನಾಡುತ್ತಿರುವುದು ಸ್ವಾತಂತ್ರ್ಯ ಅಲ್ಲವೇನು ?

ಶ್ರೀ ಕೋಣಂದೂರು ಲಿಂಗಪ್ಪ —ಸ್ವಾತಂತ್ರ್ಯ ಇದೆ, ನಾನು ಮಾತನಾಡುತ್ತಿರುವುದು ಇಲ್ಲಿಂದ ಅಲ್ಲಿಗೆ ಹೋಗುವುದಿಲ್ಲ. ಪ್ರಧಾನಮಂತ್ರಿಯವರಿಗೆ ಇರುವುದು ಭಯ ಇಬ್ಬರದು. ಒಬ್ಬರು ಜಯಪ್ರಕಾಶ್ ನಾರಾಯಣ್, ಇನ್ನೊಬ್ಬರು ಪ್ರೆಸ್ ಕಾರಣ ಇಷ್ಟೆ. ರಾಷ್ಟ್ರದ ಪ್ರೆಸ್ ಸಾರೋಧ್ಧಾರವಾಗಿ ಅಧಿಕಾರ ಇದ್ದವರಿಗೆ ಬೆಂಬಲ ಕೊಟ್ಟುಕೊಂಡು ಬಂದಿತ್ತು, ಆದರೆ ಜೂನ್ ೧೨ನೇ ತಾರೀಖು ಅಲಹಾಬಾದ್ ಹೈಕೋರ್ಟಿನ ತೀರ್ಪನ್ನು ಬಹಳ ದೊಡ್ಡದಾಗಿ ಭಾರತದ ಎಲ್ಲಾ ಪತ್ರಿಕೆಗಳು ಪ್ರಚಾರ ಮಾಡಿದವು. ಅದನ್ನು ಕಂಡು ಕೆರಳಿದ ಪ್ರಧಾನಮಂತ್ರಿಯವರು ಮೊದಲು ಪತ್ರಿಕೆಗಳ ಗಂಟಲನ್ನು ಹಿಸುಕಿದರು. ಬಳಿಕ ವಿರೋಧಪಕ್ಷದವರ ಗಂಟಲನ್ನು ಹಿಸುಕಿದರು. ಇದನ್ನೆಲ್ಲಾ ನೋಡಿದಾಗ ನಾನು ಓದಿದಂತ ಚರಿತ್ರೆ

ನೆನಪಿಗೆ ಬರುತ್ತದೆ. ಅಡಾಲ್ಫ್ ಹಿಟ್ಲರ್, ಜರ್ಮನಿಯಲ್ಲಿ ಹೇಗೆ ಸರ್ವಾಧಿಕಾರಿಯಾದ ಎಂದು ಅದನ್ನು ಓದಿ ಅದರ ಕಾರ್ಬನ ಕಾಪಿ ಈಗ ಭಾರತದಲ್ಲಿ ನಡೆಯುತ್ತಾ ಇದೆ ಇದನ್ನು ತಾವು ವಿಚಾರ ಮಾಡಬೇಕು, ಅಧ್ಯಯನ ಮಾಡಬೇಕು ? ಹಾಗಾದರೆ, ವಿರೋಧಪಕ್ಷಗಳಿಗೆ ಕೆಲಸವೇ ಇಲ್ಲವೆಂದು ತಮ್ಮ ಅಭಿಪ್ರಾಯವೇ ? ಪ್ರಜಾಪ್ರಭುತ್ವದಲ್ಲಿ ವಿರೋಧಪಕ್ಷಗಳ ಕರ್ತವ್ಯ ಏನು ಸ್ವಾಮಿ ? ಮಾನ್ಯ ಪುಟ್ಟಸ್ವಾಮಿಯವರು ಮಾತು ಕಡಿಮೆ ಆಡಬೇಕೆಂದು ಹೇಳಿದರು. ಮಾನ್ಯ ರಾಚಯ್ಯನಂತವರಿಗೆ ಮಾತುಕಡಿಮೆ ಮಾಡಿ ದುಡಿಮೆ ಜಾಸ್ತಿ ಮಾಡಿ ಎಂದು ಹೇಳುವುದು ತಪ್ಪು ಏನು ? ಇಂತಹವರಿಗೆ ಮಂತ್ರಿಮಂಡಳದಿಂದ ದಬ್ಬಿ ಎಂದು ಹೇಳುವುದು ತಪ್ಪು ಏನು ? ಭ್ರಷ್ಟರನ್ನು, ದುಷ್ಟರನ್ನು ಎತ್ತಿಹಾಕಿ ಎಂದು ಹೇಳುವುದು ವಿರೋಧಪಕ್ಷದವರ ಕರ್ತವ್ಯ ಅಲ್ಲವೇನು ? ಹಾಗಾದರೆ ಆಳುವ ಪಕ್ಷಕ್ಕೆ ನಾವೂ ಬೆಂಬಲಕೊಡಬೇಕೇನು ? ಅಂದ ಮಾತ್ರಕ್ಕೆ, ನಾವು ಯಾವುದೇ ಒಳ್ಳೆಯ ಕೆಲಸಗಳಿಗೆ ಅಡ್ಡಿ ಆತಂಕ ಒಡ್ಡಿಲ್ಲ. ಮಾನ್ಯ ಹುಚ್ಚಮಾಸ್ತಿ ಗೌಡರು ಭೂಸುಧಾರಣೆ ಶಾಸನವನ್ನು ತಂದಾಗ ಪ್ರಾಯಶಃ ನಾವು ಬೆಂಬಲ ಕೊಟ್ಟ ಹಾಗೆ ಬೇರೆ ಯಾರೂ ಕೊಟ್ಟಿಲ್ಲ. ಸರ್ಕಾರ ಮಾಡತಕ್ಕ ಒಳ್ಳೆಯ ಕೆಲಸಗಳಿಗೆ ನಾವು ಸದಾ ಬೆಂಬಲ ಕೊಟ್ಟಿದ್ದೇವೆ. ಇವತ್ತು ನಾನು ಪ್ರಶ್ನೆ ಮಾಡುತ್ತೇನೆ, ಕಾಂಗ್ರೆಸ್ಸಿನವರು ತಮ್ಮ ತಮ್ಮ ಕ್ಷೇತ್ರದಲ್ಲಿ ಎಷ್ಟು ಜನ ಗೇಣಿದಾರರಿಂದ ಡಿಕ್ಲರೇಷನ್ ಹಾಕಿಸಿದ್ದೀರಿ ಎಂದು ? ಪ್ರಧಾನಿಯವರ ೨ ಅಂಶಗಳ ಬಗ್ಗೆ ನಾವು ವಿರೋಧ ಮಾಡಿಲ್ಲ. ಅವುಗಳನ್ನು ಕಾರ್ಯಗತ ಮಾಡಲಿಕ್ಕೆ ಪ್ರಾಮಾಣಿಕವಾದ ಕಳಕಳಿ ಇರತಕ್ಕಂಥ ಜನ ನಾವು. ಅಂತಹ ಕಳಕಳಿ ಇರುವುದಕ್ಕೆ ಕಾರಣ ಇದೆ, ನೀವು ೬ ತಿಂಗಳಿಂದ ಈಚೆಗೆ ಕೊಟ್ಟಂತಕ್ಕ ಘೋಷಣೆ ಅದಲ್ಲಾ. ೨೦-೩೦ ವರ್ಷಗಳಿಂದ ಈ ಕಾರ್ಯಕ್ರಮಗಳನ್ನು ಹೇಳಿ, ಹೋರಾಡಿಕೊಂಡು ಬಂದವರು ನಾವು ನಮ್ಮ ನಮ್ಮ ಕ್ಷೇತ್ರದಲ್ಲಿ ನಮ್ಮ ಕೈಲಾದಷ್ಟು ಇವುಗಳನ್ನು ಕಾರ್ಯಗತ ಮಾಡಿದ್ದೇವೆ.

ಈ ಆರ್ಥಿಕ ಕಾರ್ಯಕ್ರಮದ ಬಗ್ಗೆ ನಮ್ಮ ವಿರೋಧ ಇಲ್ಲ. ಈ ಕೇವಲ ೨೦ ಅಂಶದ ಕಾರ್ಯಕ್ರಮಕ್ಕೆ ನಾಂದಿ ಹಾಕಿದಂಥವರು ಸೋಷಲಿಸ್ಟ್ ಪಕ್ಷಕ್ಕೆ ಸೇರಿದ ನಾವು ೨೦ ೩೦ ವರ್ಷಗಳಿಂದ ಸಾರಿಕೊಂಡು ಬಂದವರು ನಾವು.

ಶ್ರೀ ಕೆ. ಬಿ ಶಿವಯ್ಯ —ಮಹಾಮೈತ್ರಿ ಕೂಟಕ್ಕೆ ನಾಂದಿ ಹಾಕಿದವರು ಯಾರು ?

ಶ್ರೀ ಕೋಣಂದೂರ ಲಿಂಗಪ್ಪ —ಕೇರಳದಲ್ಲಿ ಮುಸ್ಲಿಂ ಲೀಗ್‌ನೊಡನೆ ಕೈಜೋಡಿಸಿ ಸರ್ಕಾರ ನಡೆಸತಕ್ಕಂಥಾ ಜನರು ಯಾರು ?

ಶ್ರೀ ಕೆ. ಬಿ. ಶಿವಯ್ಯ.—ಆರ್.ಎಸ್.ಎಸ್. ಜೊತೆ ಸೇರಿಕೊಂಡು ಮೈತ್ರಿ ಬೆಳೆಸಿದವರು ಯಾರು ?

ಶ್ರೀ ಕೋಣಂದೂರು ಲಿಂಗಪ್ಪ.—ಇದೇ ಆರ್.ಎಸ್.ಎಸ್. ಪ್ರಧಾನರಾಗಿದ್ದಂಥಾ ಶ್ರೀ ಗೋಳ್ವಾಲ್ಕರ್ ಅವರನ್ನು ಲೋಕಸಭೆಯಲ್ಲಿ ನಿಮ್ಮ ಇದೇ ಪ್ರಧಾನಿಯವರು ಪ್ರಶಂಸೆ ಮಾಡಲಿಲ್ಲವೆ ? ಈವೊತ್ತು ಏನು ಪರಿಸ್ಥಿತಿ ಬಂದಿದೆ ಎಂದರೆ ಪ್ರಜಾಪ್ರಭುತ್ವದಲ್ಲಿ ಪತ್ರಿಕೆಗಳ ಬಾಯನ್ನು ಬಂದ್ ಮಾಡಿದ್ದೀರಿ ಅಲ್ಲದೆ ಶ್ರೀಮಾನ್ ಜಯಪ್ರಕಾಶ್ ನಾರಾಯಣ್ ಅವರನ್ನು ಅರೆ ಕೊಂದು ಇಟ್ಟಿದ್ದೀರಿ. ಈ ಭಾರತದಲ್ಲಿ ಇಂಥಾ ಒಂದು ಕೆಲಸ ನಡೆದಿದೆ. ಇದು ಭಾರತ. ಮಹಾ ಭಾರತ ನಡೆದದ್ದು ಇಲ್ಲಿ. ಕುರುಕ್ಷೇತ್ರದ ದೇಶ ಇದು. ಈ ಭಾರತ ದೇಶದಲ್ಲಿ ತಪೋನಿಷ್ಠರನ್ನೂ ಮತ್ತು ಋಷಿಗಳನ್ನೂ ಕಣ್ಣೀರು ಹಾಕಿಸಿಕೊಂಡು ಉಳಿದವರು ಯಾರೂ ಇಲ್ಲ. ಶ್ರೀಮಾನ್ ಜಯಪ್ರಕಾಶ್ ನಾರಾಯಣ್ ಅವರು ತಪೋನಿಷ್ಠರು. ಅಂಥಾವರನ್ನು ಕಣ್ಣೀರು ಸುರಿಸಿದ ಯಾರಿಗೂ ಉಳಿವಿಲ್ಲ. ಇದು ಸ್ಪಷ್ಟ, ಇದು ಖಚಿತ ಎಂದು ತಾವು ತಿಳಿದುಕೊಳ್ಳಬೇಕು.

ಇನ್ನು ೦ ಅಂಶದ ಕಾರ್ಯಕ್ರಮದ ಬಗ್ಗೆ ಹೇಳಿದ್ದಾರೆ. ಇದನ್ನು ನಾವು ಮೆಚ್ಚುತ್ತೇವೆ. ಆದರೆ ಅಷ್ಟೇ ಸಾಲದು ನೀವು ಪ್ರಗತಿಗಾಮಿಗಳು ಎಂದು ಹೇಳಿಕೊಳ್ಳುತ್ತಿದ್ದೀರಿ. ಬಡತನದ ಕೈಕೆಳಗೆ ಇರತಕ್ಕಂಥಾ ಶೇಕಡ ೬೦ ಕ್ಕಿಂತ ಹೆಚ್ಚು ಜನರು ಏನು ಇದ್ದಾರೆ ಅವರ ಕೈಗೆ ನಿಲುಕುವ ರೀತಿಯಲ್ಲಿ ಬಿಲಗಳ ನಿಯಂತ್ರಣ ಮಾಡಿ, ಅವರಿಗೇ ಬೇಕಾದಂಥ ಅವಶ್ಯಕ ವಸ್ತುಗಳು ಲಭ್ಯವಾಗಬೇಕು, ಹಾಗೆ ಈಗ ಲಭ್ಯವಾಗುತ್ತಿದೆಯೇ ? ನೀವು ಪ್ರಗತಿಗಾಮಿಗಳು ಎಂದು ಹೇಗೆ ಹೇಳಿಕೊಳ್ಳುತ್ತೀರಿ ? ಇದು ಹೇಳಿದರೆ ವಿರೋಧವೇ ?

ಇನ್ನು ಎರಡನೆಯದಾಗಿ ಹೇಳುವುದಾದರೆ ವ್ಯವಸಾಯದ ಮತ್ತು ಕಾರ್ಖಾನೆಗಳ ಕೈಗಾರಿಕೆಗಳ ಉತ್ಪನ್ನಗಳ ಬೆಲೆಗಳ ಸಮತೋಲನವಾಗಬೇಕು ; ಎಂದು ನಾವು ಹೇಳುತ್ತೇವೆ, ಇದು ತಮಗೆ ರೋಧವೇ ?

ಹಾಗೆಯೇ ತೆಗೆದುಕೊಂಡರೆ ಅವಶ್ಯಕತೆಗನುಗುಣವಾಗಿ ವೇತನ ಮತ್ತು ವರಮಾನದ ಭರವಸೆ ಕಾರ್ಮಿಕರಿಗೆ ಕೊಡುವುದು ಮತ್ತು ಆರ್ಥಿಕ ಅಸಮಾನತೆಯನ್ನು ನಿವಾರಣೆ ಮಾಡುವುದು ೧ : ೧೦ ರ ಪ್ರಮಾಣದಲ್ಲಿ ಅವರಿಗೆ ಅಂತರವನ್ನು ಇಡಿ ಎಂದು ನಾವು ಹೇಳುತ್ತಿದ್ದೇವೆ. ಈ ಮಾತು ಹೇಳಿದವರು ಇಲ್ಲ. ಈ ಕೆಲಸ ಮಾಡಬೇಕಾದರೆ ಅಧಿಕಾರದಲ್ಲಿ ಕೂತಿರುವವರು ಮಾಡಬೇಕು.

ಹಾಗೆಯೇ ತೆಗೆದುಕೊಂಡರೆ ಇನ್ನು ನಮ್ಮ ರಾಜ್ಯದಲ್ಲಿ ಭೂಸುಧಾರಣೆ ಬಂದಿದೆ, ಇನ್ನು ನಮ್ಮ ದೇಶದಲ್ಲಿ ಕೃಷಿ ಕಾರ್ಮಿಕರ ಹಿತರಕ್ಷಣೆ ಆಗಬೇಕು ಮತ್ತು ಸಹಕಾರೀ ವ್ಯವಸಾಯ ಪದ್ಧತಿ ಬರಬೇಕು ಹೋಗಬೇಕು. ಹಾಗೆಯೆ ಗ್ರಾಮಾಂತರ ಪ್ರದೇಶದಲ್ಲಿ ಎಲ್ಲರಿಗೂ ಸಂಪೂರ್ಣವಾಗಿ ಉದ್ಯೋಗ ಪ್ರಾಪ್ತಿಯಾಗಬೇಕು. ಗ್ರಾಮಾಂತರದ ಆರ್ಥಿಕಾ ಅಭಿವೃದ್ಧಿಗೆ ವ್ಯವಸಾಯದ ಕಸುಬಿನಲ್ಲಿ ಸೂಕ್ತ ವೈಜ್ಞಾನಿಕ-ತಾಂತ್ರಿಕ ಸೌಲಭ್ಯ ದೊರಕಿಸಲು ಆದ್ಯ ಗಮನ ಕೊಡಬೇಕು. ಹಾಗೆಯೇ ಜನಶಕ್ತಿಯ ವಿಜ್ಞಾನ ಉಪಯೋಗದ ಕೈಗಾರಿಕಾಕರಣವೂ ಆಗಬೇಕು.

ಅಧ್ಯಕ್ಷರು.—ಅವೆಲ್ಲವನ್ನೂ ಪ್ಲಾನಿಂಗ್ ಕಮೀಷನ್‌ಗೆ ಕಳುಹಿಸೋಣ.

ಶ್ರೀ ಕೋಣಂದೂರು ಲಿಂಗಪ್ಪ.—ಹಾಗಾದರೆ ಈ ೨೦ ಅಂಶದಲ್ಲಿ ಎಲ್ಲ ಎಲ್ಲಿಗೆ ಕಳಿಸಬೇಕು. ಇನ್ನು ಹಾಗೆಯೇ ಹೇಳುವುದಾದರೆ ಪರದೇಶ ಹಾಗೂ ಸ್ವದೇಶಗಳಲ್ಲಿ ಉತ್ಪಾದಿಸುತ್ತಿರುವ ಲಕ್ಸುರಿ ಗೂಡ್ಸ್ ಏನು ಇದೆ, ಆಮದು ಮಾಡಿಕೊಳ್ಳುತ್ತಿರುವ ದುಂದು ವೆಚ್ಚದ ಲಕ್ಸುರಿ ಗೂಡ್ಸ್ ಏನು ಇದೆ, ಆ ಸಾಮಗ್ರಿಗಳನ್ನು ಸಂಪೂರ್ಣವಾಗಿ ತಡೆಹಿಡಿಯಬೇಕು ಹಾಗೆಯೇ ವಿಕೇಂದ್ರೀಕರಣವಾಗಬೇಕು. ಆರ್ಥಿಕ, ಸಾಮಾಜಿಕ, ಶೈಕಣಿಕ ಮತ್ತು ರಾಜಕೀಯ ಇವು ನಾಲ್ಕು ವಿಕೇಂದ್ರೀಕರಣವಾಗಬೇಕು. ಈ ಕಾರ್ಯಕ್ರಮ ಗ್ರಾಮಾಂತರದಲ್ಲಿ, ಜಿಲ್ಲಾ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಮತ್ತು ರಾಷ್ಟ್ರ ಮಟ್ಟದಲ್ಲಿ ಆಗಬೇಕು. ಈ ನಾಲ್ಕು ಮಟ್ಟದಲ್ಲಿರುವ ಸಂಪೂರ್ಣ ಅಧಿಕಾರ ವಿಕೇಂದ್ರೀಕರಣವಾದಾಗಲೀ ನಿಜವಾದ ಆರ್ಥಿಕ ಮತ್ತು ನಿಜವಾದ ಪ್ರಜಾಪ್ರಭುತ್ವ ಬರುತ್ತದೆ. ಆದುದರಿಂದ ಈ ಚತುಸ್ತಂಭ ರಾಷ್ಟ್ರದ ಈ ಆದರ್ಶವನ್ನು ಹೇಳಿದರೆ ತಪ್ಪೇ?

ಇನ್ನು ವಿದ್ಯಾಭ್ಯಾಸದ ಪದ್ಧತಿ ತೆಗೆದುಕೊಂಡರೆ ಇದು ಸಮಗ್ರವಾಗಿ ಬದಲಾವಣೆಯಾಗಬೇಕು. ಇದು ೨೦ ಅಂಶದ ಕಾರ್ಯಕ್ರಮದಲ್ಲಿ ಈಗ ಏನು ಮಾಡುತ್ತಿದ್ದೀರಿ ಎಂದರೆ ವಿದ್ಯಾರ್ಥಿಗಳಿಗೆ ಸ್ಲೇಟು ಪುಸ್ತಕ ಕೊಡುತ್ತಿದ್ದೀರಿ. ಅದು ಸಾಲದು ಬೇರೆ ಸೌಲಭ್ಯಗಳನ್ನೂ ಕೂಡ ಕೊಡಬೇಕು. ಮೂಲಭೂತವಾಗಿ ಶಿಕ್ಷಣ ಪದ್ಧತಿಯನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೇ? ಮೆಕಾಲೆ ಶಿಕ್ಷಣದ ಪದ್ಧತಿಯಿಂದ ಗುಮಾಸ್ತರನ್ನು ತಯಾರು ಮಾಡತಕ್ಕಂಥ ಶಿಕ್ಷಣವಾಗಿದೆ ಆದುದರಿಂದ ಇದರಲ್ಲಿ ಮೂಲಭೂತವಾದ ಬದಲಾವಣೆಯಾಗಬೇಕು. ದೇಶದ ಆದರ್ಶ ಮತ್ತು ಆವಶ್ಯಕತೆಗನುಗುಣವಾದ ವಿದ್ಯಾಭ್ಯಾಸ ಪದ್ಧತಿ ತರಬೇಕು. ಪಶ್ಚಿಮ ಬುದ್ಧಿ ಅಂದರೆ ವೆಸ್ಟರ್ನ್ ಎಜುಕೇಷನ್ ಅದನ್ನು ಸಂಪೂರ್ಣವಾಗಿ ತುಂಡು ಮಾಡಿ. ಈವೊತ್ತು ಭಾರತೀಯರಾದ ನಮಗೆ ಆಧುನಿಕ ಪ್ರಜ್ಞೆಯಿಂದ ವಿದ್ಯಾಭ್ಯಾಸ ಪದ್ಧತಿ ಬರಬೇಕು ಈ ಆಧುನಿಕತೆ ಇಲ್ಲಿಯೇ ಮೈದುಂಬಬೇಕು. ಅಂಥಾ ವಿದ್ಯಾಭ್ಯಾಸ ನಮ್ಮ ಆರ್ಥಿಕ ಪ್ರಗತಿಯ ಯೋಜನೆಗಳಿಗೆ ಪೂರಕವಾಗಿದ್ದು ವಿದ್ಯಾಭ್ಯಾಸದ ಜೀವನ ಮುಗಿದೊಡನೆ ತನ್ನ ಕಾಲಮೇಲೆ ನಿಂತು ಬದುಕುವಂಥಾ ವಿದ್ಯಾಭ್ಯಾಸ ಪದ್ಧತಿ ಬರಬೇಕು ಮತ್ತು ಖಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿಗೆ ತರಬೇಕು ಮತ್ತು ಸಾರ್ವತ್ರಿಕವಾಗಿ ವಯಸ್ಕರ ಶಿಕ್ಷಣಕ್ಕೆ ಆದ್ಯತೆ ಕೊಡಬೇಕು. ಹಾಗೂ ವಿದ್ಯಾಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು ಇವುಗಳ ವ್ಯವಹಾರಗಳಲ್ಲಿ ಸರ್ಕಾರ ಕೈ ಹಾಕುವುದನ್ನು ಕೈ ಬಿಡಬೇಕು. ಅಧ್ಯಾಪಕ-ವಿದ್ಯಾರ್ಥಿಗಳ ನೇರ ಜನತಾಂತ್ರಿಕ ಆದರ್ಶದ ಮೇಲೆ ಇದು ನಡೆಯಬೇಕು.

ಹಾಗೆಯೇ ಸಾರ್ವಜನಿಕ, ರಾಜಕೀಯ ಜೀವನದ ಸ್ವಚ್ಛತೆಗೆ, ಭ್ರಷ್ಟಾಚಾರ ಆರೋಪ ತನಿಖೆಯು ಉಚ್ಚನ್ಯಾಯ ಮಂಡಲಿಗಳಲ್ಲಿ ಆಗಬೇಕು ಹಾಗೂ ಸಂತಾನಂ ಕಮಿಟಿಯ ಶಿಫಾರಸ್ಸುಗಳನ್ನು ಸಂಪೂರ್ಣವಾಗಿ ಜಾರಿಗೆ ತರಬೇಕು. ಹಾಗೆಯೇ ಜಾಯಿಂಟ್ ಪಾರ್ಲಿಮೆಂಟರಿ ಕಮಿಟಿ ಏನು ಇದೆ ಅದು ಕಾಂಗ್ರೆಸ್ ಮತ್ತು ವಿರೋಧಪಕ್ಷಗಳೂ ಸೇರಿ ಚುನಾವಣಾ ಪದ್ಧತಿಯನ್ನು ಬದಲಾವಣೆ ಮಾಡಬೇಕೆಂದು ಸರ್ವಾನುಮತದಿಂದ ತೀರ್ಮಾನ ಮಾಡಿ ಶಿಫಾರಸು ಮಾಡಿದ್ದಾರೆ. ಅದನ್ನು ಸಂಪೂರ್ಣವಾಗಿ ಜಾರಿಗೆ ತರಬೇಕು.

ಹಾಗೆಯೇ ಕಾರ್ಮಿಕರಿಗೆ ತಮ್ಮ ಸಂಘಟನೆ ಮಾಡಿಕೊಳ್ಳಲು ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡಬೇಕು. ಎಲ್ಲರನ್ನೂ, ಎಲ್ಲ ಬಗೆಯ ಗುಲಾಮಗಿರಿಯಿಂದ ಮುಕ್ತರನ್ನಾಗಿ ಮಾಡಬೇಕು. ಹಾಗೆಯೇ ಸಂವಿಧಾನದಲ್ಲಿರುವ ಡೈರೆಕ್ಟೀವ್ ಪ್ರಿನ್ಸಿಪಲ್ಸ್ ಏನು ಇದೆ ಅದನ್ನು ಮೂಲಭೂತ ಹಕ್ಕುಗಳನ್ನಾಗಿ ಮಾಡ

ಬೇಕು. ಹಾಗೂ ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವ ಹಾಗೂ ಸಮಾಜವಾದದ ಮೇಲೆ ಆದರ್ಶದ ಗುರಿ ಸಾಧನೆಯು ಪೋಲಿ ಇವೆಲ್ಲ ರೂಪಗೊಳ್ಳಬೇಕು. ಮತ್ತು ನಮ್ಮ ದೇಶದಲ್ಲಿ ಹರಿಜನ–ಗಿರಿಜನ, ಹಿಂದುಳಿದ ವರ್ಗಗೆ, ಮಹಿಳೆಯರಿಗೆ ಶೇಕಡ ೬೦ ಕ್ಕಿಂತ ಕಡಿಮೆ ಇಲ್ಲದೆ ರಿಸರ್ವೇಷನ್ ಇಟ್ಟು ಸ್ಥಾನಗಳನ್ನೂ ಮೀಸಲಾಗಿಡಬೇಕು. ಅವರಿಗೆ ವಿಶೇಷವಾದ ಅವಕಾಶ ಕಲ್ಪಿಸಿಕೊಡಬೇಕು. ಸಮಾನ ಅವಕಾಶ ಅಲ್ಲಿ ಇವೆಲ್ಲಾ ನಾವು ಹೇಳಿದರೆ ಪ್ರಗತಿವಿರೋಧಿಗಳೇ ? ಇವೆಲ್ಲವನ್ನೂ ಕಳೆದ ೩೦ ವರ್ಷದಿಂದಲೂ ಹೇಳಿಕೊಂಡು ಅದಕ್ಕೆ ಹೋರಾಟ ಮಾಡಿಕೊಂಡು ಬಂದಂಥ ಜನ ನಾವು. ನೀವು ಈಗ ಹೇಳಿದುದೆಲ್ಲವೂ ಸಮಗ್ರ ಬದಲಾವಣೆ ಆಗದಿದ್ದರೂ ಕೂಡ ಈಗ ತಾವು ಹೇಳಿರತಕ್ಕಂಥ ಈ ೨೦ ಅಂಶದ ಕಾರ್ಯಕ್ರಮಗಳಾದರೂ ಆಗಲಿ. ಇಷ್ಟಾದರೂ ಆಗಲಿ ಅಂತ ಈ ಮಾತನ್ನು ಹೇಳಿದಂಥ ಜನರನ್ನು ತಾವ ಪ್ರಗತಿ ವಿರೋಧಿಗಳು ಎಂದು ಹೇಳುತ್ತೀರಾ ? ಅದನ್ನು ತಾವು ವಿಚಾರ ಮಾಡಬೇಕು.

ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹಿಂದುಳಿದ ವರ್ಗಗಳ ಆಯೋಗದ ವರದಿ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದನ್ನು ಕಾರ್ಯಗತ ಮಾಡಲು ಏನು ಕಾರ್ಯಕ್ರಮ ಕೈಕೊಂಡಿದ್ದೀರಿ? ಅದನ್ನು ಕಾರ್ಯಗತ ಮಾಡಲು ಬೇಕಾದರೆ ಒಂದು ಮಂತ್ರಿ ಪದವಿಯನ್ನು ಸೃಷ್ಟಿ ಮಾಡಿ ಮತ್ತು ಅದಕ್ಕೆ ಬೇಕಾದರೆ ಒಂದು ಸಪರೇಟ್ ಡೈರಕ್ಟರೇಟನ್ನು ರಚಿಸಿಮಾಡಿ ಒಟ್ಟಿನಲ್ಲಿ ಅದನ್ನು ತೀವ್ರವಾಗಿ ಕಾರ್ಯರೂಪದಲ್ಲಿ ತರಬೇಕು, ಅದಕ್ಕೆ ನಾವುಗಳು ಅಡ್ಡಿ ಬರುವುದಿಲ್ಲ.

ಮತ್ತೊಂದು ಮುಖ್ಯವಾದ ವಿಚಾರ ಹೇಳಬೇಕೆಂದರೆ, ಯಾರಾದರೂ ಚುನಾಯಿತ ಪ್ರತಿನಿಧಿಯ ತಲೆಯನ್ನು ಬೋಳಿಸಿದರೆ, ಅದು ತಪ್ಪಾಗುತ್ತದೆ, ಆದರೆ ತಮಿಳುನಾಡಿನ ಮಂತ್ರಿಮಂಡಲವನ್ನು ಹೊರಗೆ ಕಳುಹಿಸಿದ್ದು ನ್ಯಾಯವೇ ಎಂದು ಕೇಳುತ್ತೇನೆ, ಅವರು ಬಹುಮತದಲ್ಲಿರಲ್ಲವೇ ? ಅವರ ಮೇಲೆ ಭ್ರಷ್ಟಾಚಾರದ ಆರೋಪವನ್ನು ಹೊರಿಸಿದ್ದೀರಿ. ಅವರು ಕಳೆದ ೯ ವರ್ಷಗಳಿಂದ ಆಡಳಿತ ನಡೆಸಿಕೊಂಡು ಬಂದಿದ್ದರು, ಅವರು ಭ್ರಷ್ಟಾಚಾರ ನಡೆಸಿದ್ದರೆ ಈ ಮೊದಲೇ ಏಕೆ ಅವರ ಮೇಲೆ ಕ್ರಮ ಕೈಕೊಳ್ಳಲಿಲ್ಲ ? ತಾವು ಯಾವಾಗಲೂ ಹಿಂದಿನವರ ಬಗ್ಗೆ ಹೇಳವಾಗ ಯೋಚನೆ ಮಾಡಿ ಹೇಳಬೇಕಾಗುತ್ತದೆ, ಏಕೆಂದರೆ ಪಂಡಿತ್ ಜವಹರ್ ಲಾಲ್ ನೆಹರೂ ಅವರು ೧೮ ವರ್ಷಗಳಕಾಲ ಪ್ರಧಾನಮಂತ್ರಿಗಳಾಗಿದ್ದರು, ಆದಕಾರಣ ನಿಮ್ಮ ಹೆತ್ತ ತಂದೆಗೆ ಮೋಸಮಾಡಲು ಹೋಗಬೇಡಿ, ಇಂದು ತಮಿಳುನಾಡು ಮಂತ್ರಿಮಂಡಲವನ್ನು ಹೊರಗೆ ಕಳುಹಿಸಿದರು, ಇಷ್ಟರಲ್ಲಿಯೇ ಗುಜರಾತಿನ ಮಂತ್ರಿಮಂಡಲಕ್ಕೂ ಅದೇ ಗತಿ ಬರಬಹುದು. ಅದರ ನಂತರ ಕಾಶ್ಮೀರದ ಮಂತ್ರಿಮಂಡಲಕ್ಕೂ ಅದೇ ಗತಿ ಬರಬಹುದು, ಆದರ ನಂತರ ಕಾಶ್ಮೀರದ ಮಂತ್ರಿಮಂಡಲಕ್ಕೂ ಅದೇ ಗತಿ ಬರಬಹುದು, ಶ್ರೀ ಬಹುಗುಣ ಅವರನ್ನು ಅಧಿಕಾರದಿಂದ ಕೆಳಗಿಸಲು ಕಾರಣವೇನಿತ್ತು ?

ಅಧ್ಯಕ್ಷರು.—ರಾಜ್ಯಪಾಲರ ಭಾಷಣದಲ್ಲಿ ಆ ವಿಷಯಗಳನ್ನೆಲ್ಲಾ ಪ್ರಸ್ತಾಪ ಮಾಡಿಲ್ಲ, ಮಾನ್ಯ ಸದಸ್ಯರು ಮುಂದೆ ಹೋಗುತ್ತಿದ್ದಾರೆ ಅದು ಸರಿಯಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಕಳೆದ ಆಗಸ್ಟ್ ೯ನೇ ತಾರೀಖು ಸಹ ಈ ಮಾತನ್ನು ಹೇಳಿದ್ದೆ, ಏನೆಂದರೆ ರಾಜ್ಯಾಂಗದ ೪೨ನೇ ಕಾಲಂನ್ನು ತಿದ್ದುಪಡಿ ಮಾಡಿದ ಸಂದರ್ಭದಲ್ಲಿ ಶ್ರೀಮಂತಿ ಇಂದಿರಾಗಾಂಧಿಯವರ ನಂತರ ಅವರ ಮಗ ಸಂಜಯಗಾಂಧಿಯವರನ್ನೇ ಪ್ರಧಾನಮಂತ್ರಿಯನ್ನಾಗಿ ಮಾಡಲು ಒಂದು ತಿದ್ದುಪಡಿಯನ್ನು ತೆಗೆದುಗೊಂಡು ಬನ್ನಿ ಎಂದು. ಅವರ ನಂತರ ಅವರ ಮಗನಾದ ರಾಹುಲ್‌ಗಾಂಧಿಯನ್ನು ಪ್ರಧಾನಿಯನ್ನಾಗಿ ಮಾಡಲು ಒಂದು ತಿದ್ದುಪಡಿ ತೆಗೆದ ಕೊಂಡು ಬನ್ನಿ ಎಂದು ನಾನು ಅಂದೇ ಹೇಳಿದ್ದೆ. ಈಗ ತುರ್ತುಪರಿಸ್ಥಿತಿ ಜಾರಿಯಲ್ಲಿರುವ ಕಾರಣ ವಿರೋಧ ಪಕ್ಷದವರು ಸಭೆ, ಮೆರವಣಿಗೆ, ಸಮ್ಮೇಳನ ಮುಂತಾದವುಗಳನ್ನು ಶಾಂತಿಯುತವಾಗಿಯೂ ಸಭೆ ನಡೆಸುವುದಕ್ಕೆ ಅವಕಾಶವಿಲ್ಲವಾಗಿದೆ. ಆದರೆ ಮೊನ್ನೆ ಸಂಜಯಗಾಂಧಿ ಅವರು ಬೆಂಗಳೂರಿಗೆ ಬಂದಾಗ, ಅವರು ಯುವಕ ಕಾಂಗ್ರೆಸ್ ಮುಖಂಡರು ಎಂಬ ಕಾರಣದಿಂದ ದೊಡ್ಡದಾಗಿ ಮೆರವಣಿಗೆ ಮಾಡಿದರು, ಪ್ರಧಾನ ಮಂತ್ರಿಯವರಿಗೂ ಮಾಡದಂತಹ ಮೆರವಣಿಗೆಯನ್ನು ಅವರಿಗೆ ಮಾಡಿದರು, ಅಂದರೆ ಪಟ್ಟಭದ್ರ ಹಿತಸಂರಕ್ಷಣೆ ಮಾಡುವುದಕ್ಕೆ ತಾವು ಹೊರಟಿದ್ದೀರಾ ಎಂದು ನಾನು ಕೇಳಬೇಕಾಗಿದೆ ?

ಶ್ರೀ ಎಂ. ಬಿ. ರಾಮಸ್ವಾಮಿ.—ಅವರ ಬಗ್ಗೆ ಜನರಲ್ಲಿ ಅಷ್ಟೊಂದು ವಿಶ್ವಾಸವಿದೆ.

ಶ್ರೀ ಕೋಣಂದೂರುಲಿಂಗಪ್ಪ–ಅಂದಿನ ಮೆರವಣಿಗೆಗೆ ಸರ್ಕಾರದ ಕಾರುಗಳನ್ನು ಉಪಯೋಗವಾಡಿದರು ಹಳ್ಳಿಗಳಿಂದ ಜನರನ್ನು ಕರೆದುಕೊಂಡು ಬಂದರು, ಒಂದೇ ಮನೆತನಕ್ಕೆ ಸೇರಿದವರಿಗೇ ಈ ದೇಶದ ಪ್ರಧಾನಿಪಟ್ಟ ಮೀಸಲಾಗಿಡುವುದು, ಅಂತಹ ಒಂದು ಪರಂಪರೆಯನ್ನು ಅನುಸರಿಸಿಕೊಂಡು ಬರುವುದು ಸರಿಯಲ್ಲವೆಂದು ಹೇಳುತ್ತೇನೆ ಈ ರೀತಿ ಮಾಡುವುದರ ಮೂಲಕ ನಮ್ಮನ್ನು ಗುಲಾಮಗಿರಿಗೆ ನೂಕುವುದು ಸರಿಯಲ್ಲವೆಂದು ಪ್ರಜಾಪ್ರಭುತ್ವದ ಬಗ್ಗೆ ನಂಬಿಕೆ ಇರತಕ್ಕಂಥ ನಾವು ಕಳಕಳಿಯಿಂದ ವಿನಂತಿ ಮಾಡುತ್ತಿದ್ದೇವೆ. ನಮ್ಮ ರಾಜ್ಯದ ಮುಖ್ಯಮಂತ್ರಿಗಳಿಗೆ ಗಂಡುಮಕ್ಕಳು ಏನಾದರೂ ಇದ್ದಿದ್ದರೆ, ಅವರಿಗೆ ಇಷ್ಟರಲ್ಲಿ ಅವರ ವಯಸ್ಸಿನ ಮೊಮ್ಮಕ್ಕಳೂ ಸಹ ಇರುತ್ತಿದ್ದರು. ಅಂತಹವರನ್ನು ಅಷ್ಟೊಂದು ದೊಡ್ಡ ರೀತಿಯಿಂದ ಮೆರವಣಿಗೆ ಮಾಡುವುದು ಸರಿಯೇ ? ಪತ್ರಿಕೆಗಳಲ್ಲಿ ಆ ಚಿತ್ರ ನೋಡಲು ನಾಚಿಕೆಯಾಯಿತು ನನಗೆ.

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಕೊಟ್ಟಿದ ಸಮಯ ಮುಗಿಯಿತು.

ಶ್ರೀ ಕೋಣಂದೂರು ಲಿಂಗಪ್ಪ.– ಕೊನೆಯದಾಗಿ ಒಂದು ವಿಚಾರವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ ಏನೆಂದರೆ ಇದೇ ತಿಂಗಳು ಪ್ರಧಾನ ಮಂತ್ರಿಗಳು ನಮ್ಮ ರಾಜ್ಯಕ್ಕೆ ಭೇಟಿ ಕೊಡುವವರಿದ್ದಾರೆ. ಆ ಸಮಯದಲ್ಲಿ ಈ ರಾಜ್ಯದ ಹಿರಿಯರು ಅಂದರೆ ಮಾನ್ಯ ಪುಟ್ಟಸ್ವಾಮಿಯಂತವರು ಅವರನ್ನು ಭೇಟಿ ಮಾಡಿ ಈಗಿನ ತುರ್ತುಪರಿಸ್ಥಿತಿಯನ್ನು ತೆಗೆದು ಮೊದಲಿನಂತೆ ತಿಳಿಯಾದ ಪರಿಸ್ಥಿತಿಯನ್ನು ತಂದ ಕೊಡಬೇಕೆಂದು ಅವರಲ್ಲಿ ಒತ್ತಾಯ ಮಾಡಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಈ ಬಗ್ಗೆ ಅವರ ಮನಸ್ಸನ್ನು ಒಲಿಸಬೇಕು, ಈಗ ಅವರು ಹುಲಿಯ ಮೇಲೆ ಸವಾರಿ ಮಾಡುತ್ತಿರುವಂತಹ ಪರಿಸ್ಥಿತಿ ಇದೆ ಕೆಳಗೆ ಇಳಿದರೆ ಹುಲಿ ಎಲ್ಲಿ ತಿಂದುಬಿಡುತ್ತದೋ ಎಂಬತಕ್ಕಂಥ ಭಯ ಇದೆ. ಆದಕಾರಣ ತುರ್ತುಪರಿಸ್ಥಿತಿಯನ್ನು ರದ್ದು ಮಾಡುವುದು ಒಳ್ಳೆಯದೆಂದು ಅವರಿಗೆ ತಿಳಿಸಬೇಕು. ತುರ್ತುಪರಿಸ್ಥಿತಿ ಜಾರಿಮಾಡುವ ಸಮಯದಲ್ಲಿ ಈ ರಾಷ್ಟ್ರದಲ್ಲಿ ಏನು ಪರಿಸ್ಥಿತಿ ಇತ್ತೋ ಅದು ಇಂದು ಇಲ್ಲವಾಗಿದೆ ಆದಕಾರಣ ನಾವೆಲ್ಲ ನೆಲದ ಮೇಲೆ ನೆಲೆಯಾಗಿ ನಿಲ್ಲುವಂತಹ ಒಂದು ನವನಿರ್ಮಾಣ ಪರಿಸ್ಥಿತಿಯನ್ನು ಜಾರಿಗೆ ತರುವುದಕ್ಕೆ ಹಿರಿಯರಾದಂಥ ತಾವೆಲ್ಲ ಪ್ರಯತ್ನ ಮಾಡಬೇಕು, ಈ ಬಗ್ಗೆ ಅವರ ಮನಸ್ಸನ್ನು ಒಲಿಸಿಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.– ತಾವು ಈಗ ಮಾನ್ಯ ಜಯಪ್ರಕಾಶ್ ನಾರಾಯಣ್, ಮಾನ್ಯ ನಿಜಲಿಂಗಪ್ಪನವರು, ಮಾನ್ಯ ಮೊರಾರ್ಜಿದೇಸಾಯಿ ಅವರುಗಳ ಪರವಾಗಿ ಮಾತನಾಡುತ್ತಿದ್ದೀರಾ ಹೇಗೆ?

ಶ್ರೀ ಕೋಣಂದೂರು ಲಿಂಗಪ್ಪ.—ಹೌದು, ಅಖಿಲಭಾರತದಲ್ಲಿರತಕ್ಕಂಥ ಎಲ್ಲ ವಿರೋಧಿಪಕ್ಷಗಳ ಪರವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಅದರಲ್ಲಿ ತಪ್ಪೇನಿದೆ ? ಈಗಾಗಲೇ ನಮ್ಮ ಪಕ್ಷದ ಮುಖಂಡರಾದಂಥ ಶ್ರೀ ಎನ್. ಜಿ. ಗೋರೆಯವರು ಒಂದೆರಡು ವಾರಗಳ ಕೆಳಗೆ ಪ್ರಧಾನ ಮಂತ್ರಿಗಳಿಗೆ ಒಂದು ಕಾಗದ ಬರೆದು ಈಗಿನ ಒಂದು ವಾತಾವರಣವನ್ನು ತಿಳಿಗೊಳಿಸಿ ಮೊದಲಿನ ಸ್ಥಿತಿಗೆ ತರಬೇಕೆಂದು ಕೇಳಿಕೊಂಡಿದ್ದಾರೆ, ಈ ಒಂದು ಅಪಾಯದ ಪರಿಸ್ಥಿತಿ ಈ ಒಂದು ಭಯಂಕರವಾದಂಥ ಪರಿಸ್ಥಿತಿ ಹೆಚ್ಚು ಕಾಲ ಇರುವುದು ಯೋಗ್ಯವಾದುದಲ್ಲ, ಪರಿಸ್ಥಿತಿ ಇದೇ ರೀತಿ ಮುಂದುವರೆದರೆ ಮುಂದೆ ಬಹಳ ದೊಡ್ಡ ದುರಂತ ಸಂಭವಿಸುತ್ತದೆ. ಆದಕಾರಣ ಈ ಒಂದು ಪರಿಸ್ಥಿತಿಯನ್ನು ಯಾವ ರೀತಿ ಬದಲಾವಣೆ ಮಾಡಬೇಕು ಎಂಬುದರ ಬಗ್ಗೆ ಎಲ್ಲರೂ ಕುಳಿತು ಚರ್ಚೆಮಾಡಲು ಒಂದು ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಬೇಕೆಂದು ಪತ್ರ ಬರೆದು ತಿಳಿಸಿದ್ದಾರೆ. ಆ ಪತ್ರದ ಕಾಪಿಯನ್ನು ನಮ್ಮ ಅಭಿನವ ಗಾಂಧೀಜಿಯವರಾದಂಥ, ಅಭಿನವ ಬುದ್ಧರಾಗಿರುವ ಮತ್ತು ಲೋಕನಾಯಕರಾದಂಥ ಶ್ರೀಮಾನ್ ಜಯಪ್ರಕಾಶ್ ನಾರಾಯಣ್ ಅವರಿಗೆ ಕಳುಹಿಸಿಕೊಟ್ಟಿದ್ದಾರೆ. ಅವರು ಆ ಒಂದು ಪತ್ರದಲ್ಲಿರುವ ವಿಚಾರಗಳನ್ನು ಸ್ವಾಗತಿಸಿ, ಅದರಂತೆ ಕಾರ್ಯಾಕ್ರಮ ಕೈಕೊಳ್ಳುವುದು ಸೂಕ್ತವಾಗಿದೆ ಎಂದು ಪ್ರಧಾನಮಂತ್ರಿಯವರಿಗೆ ಕಾಗದ ಬರೆದು ತಿಳಿಸಿದ್ದಾರೆ. ಜೊತೆಗೆ ಆಚಾರ್ಯ ವಿನೋಬಾಬಾವೆಯವರು ಸಹ ತಮ್ಮ ಪ್ರತಿನಿಧಿಯಾದ ಶ್ರೀಮನ್ ನಾರಾಯಣ ಅವರನ್ನು ಈ ಬಗ್ಗ ಮಾತನಾಡಲು ದೆಹಲಿಗೆ ಕಳುಹಿಸಿದ್ದಾರೆ. ಅದರ ಬಗ್ಗೆ ಈಗಾಗಲೇ ಮಾತುಕತೆಗಳು ನಡೆಯುತ್ತಿವೆ. ಅದಕ್ಕೆ ಪೂರಕವಾಗಿ ಆಡಳಿತ ಪಕ್ಷದಲ್ಲಿರತಕ್ಕಂಥ ಹಿರಿಯರು ಸಹ ಪ್ರಧಾನ ಮಂತ್ರಿಗಳು ಇಲ್ಲಿಗೆ ಬಂದಾಗ ಅದರ ಬಗ್ಗೆ ಮಾತನಾಡಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಈ ದೇಶದ ಸ್ವಾತಂತ್ರ್ಯ ಉಳಿಯಬೇಕಾದರೆ, ಮತ್ತು ಪ್ರಜಾಪ್ರಭುತ್ವದ ಒಂದು ಉನ್ನತ ಮೌಲ್ಯಗಳ ರಕ್ಷಣೆ ಆಗಬೇಕಾದರೆ ಈಗಿರುವ ಪರಿಸ್ಥಿತಿ ಹೋಗಬೇಕು ಆದರೆ ಈ ಬಗ್ಗೆ ಅವರ ಬಳಿ ಹೋಗಿ ಮಾತನಾಡಲು

ಎಷ್ಟು ಜನರಿಗೆ ಧೈರ್ಯವಿದೆ ಎಂಬುದು ನನಗೆ ತಿಳಿಯುತ್ತಿಲ್ಲ. ಈ ಕಾಂಗ್ರೆಸ್ ಮುಖಂಡರಿಗೂ ಮತ್ತು ಪ್ರಧಾನಮಂತ್ರಿಯವರಿಗೂ ಈ ಮಧ್ಯೆ ಇರತಕ್ಕಂಥ ಅಂತರ ಎಷ್ಟು ಎಂಬುದು ನನಗೆ ಗೊತ್ತಿದೆ. ಅವರ ಜೊತೆಗೆ ವಿರೋಧ ಪಕ್ಷದ ಮುಖಂಡರು ಈಗ ಜೈಲಿನಲ್ಲಿರುವುದರಿಂದ ಅವರ ಜೊತೆಯಲ್ಲಿಹೋಗಿ ಮಾತನಾಡುವವರು ಯಾರು ಎಂಬ ಪ್ರಶ್ನೆ ಬರುತ್ತದೆ, ಕಾಂಗ್ರೆಸ್ ಮುಖಂಡರಿಗೂ ಮತ್ತು ಪ್ರಧಾನ ಮಂತ್ರಿಯವರಿಗೂ ನಡುವೆ ಇರತಕ್ಕಂಥ ಒಂದು ಅಂತರ ಏನಿದೆ, ಆ ಒಂದು ಅಂತರದ ಕಣಿವೆಯೊಳಗೆ ಈ ರಾಷ್ಟ್ರವನ್ನು ಬೇರೆ ಒಂದು ರಾಷ್ಟ್ರದ ಗುಲಾಮಗಿರಿಗೆ ಒಪ್ಪಿಸುವ ಜನರು ಕೆಲವರು ಇರುವುದರಿಂದ ಅದಕ್ಕೆ ಅವಕಾಶ ಕೊಡಬಾರದೆಂದು ಹೇಳುತ್ತೇನೆ.

3-00 P.M.

ಶ್ರೀಮತಿ ಇಂದಿರಾಗಾಂಧಿಯವರ ಅಂದರೆ ಪ್ರಧಾನಿಯವರ ಸುತ್ತಮುತ್ತಲಿರುವ ಜನರು ಏನಿದ್ದಾರೆ ಅವರನ್ನು ತಪ್ಪು ಮಾರ್ಗಕ್ಕೆ ಎಳೆದು ಈ ರಾಷ್ಟ್ರವನ್ನು ಮತ್ತೊಂದು ರಾಷ್ಟ್ರದ ಗುಲಾಮರನ್ನಾಗಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈ ವಿಮರ್ಶೆನೆಗೆ ನಮ್ಮ ಪ್ರಧಾನಿಯವರು ಒಳಗಾಗಿದ್ದಾರೆ. ಈಗ ಪ್ರಧಾನಿಯವರೇ ಬೆಂಗಳೂರಿಗೆ ಬರುವವರಿದ್ದಾರೆ ಈ ಸಂಧರ್ಭವನ್ನು ಉಪಯೋಗಿಸಿಕೊಂಡು ಎಲ್ಲಾ ಹಿರಿಯರು ಅವರು ಜಯಪ್ರಕಾಶ್ ನಾರಾಯಣ್‌ರವರ ಜೊತೆಯಲ್ಲಿ ಮಾತನಾಡಲಿಕ್ಕೆ ಅವರ ಮನಸ್ಸು ಒಲಿಸಬೇಕೆಂದು ತಮ್ಮೆಲ್ಲರನ್ನು ಕೇಳಿಕೊಳ್ಳುತ್ತೇನೆ. ಇನ್ನು ಒಂದು ಮಾತನ್ನು ಹೇಳುವುದಾದರೆ ಪ್ರಧಾನಿಯವರ ಹತ್ತಿರ ನಮಗೆ ಒಂದು ಅವಕಾಶವನ್ನು ಕೊಡಿಸಿದರೆ ವಿರೋಧ ಪಕ್ಷದ ಎಲ್ಲಾ ಸದಸ್ಯರು ಕೂಡ ಹೋಗಿ ಪ್ರಧಾನಿಯವರನ್ನು ಕಂಡು ಮಾತನಾಡುವುದಕ್ಕೆ ನಾವು ತಯಾರಿದ್ದೇವೆ. ಮಾನ್ಯ ಅಧ್ಯಕ್ಷರೇ, ಈ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ತ್ಯಾಗಮಾಡಿದ ಮಹಾತ್ಮಾ ಗಾಂಧೀಜಿಯವರು, ರಾಮಮನೋಹರಲೋಹಿಯ್ಯ ವಲ್ಲಭಭಾಯಿ ಪಟೇಲ್, ಸುಭಾಷ್‌ಚಂದ್ರಬೋಸರು ಇನ್ನು ಅನೇಕ ಗಣ್ಯವ್ಯಕ್ತಿಗಳು ತಂದು ಕೊಟ್ಟಂಥ ಈ ಸ್ವಾತಂತ್ರ್ಯವನ್ನು ನಾವು ಕಳೆದುಕೊಳ್ಳುವುದು ಸರಿಯಲ್ಲ. ಎಷ್ಟೋ ಜನರ ಬಲಿದಾನದಿಂದ ಸಂಪಾದಿಸಿದ ಈ ಪ್ರಜಾಪ್ರಭುತ್ವ ಸ್ವಾತಂತ್ರ್ಯವನ್ನು ಉಳಿಸಲಿಕ್ಕೆ ಮತ್ತು ಬೆಳೆಸಲಿಕ್ಕೆ ಒಳ್ಳೆಯ ವಾತಾವರಣವನ್ನು ನಿರ್ಮಾಣಮಾಡಿ ಎಂದು ಈಗ ಏನು ಒಂದು ಈ ಕೆಟ್ಟ ವಾತಾವರಣ ಇದೆ ಅದನ್ನು ಪರಿಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅದು ನಿದಾನವಾದರೆ ಅಂದರೆ ಇನ್ನು ಮೂರು ತಿಂಗಳು ಬಿಟ್ಟರೆ ದೊಡ್ಡ ಅನಾಹುತವಾಗುತ್ತದೆ ದೇಶಕ್ಕೆ ದೊಡ್ಡ ಅಪಾಯ ಕಾದಿದೆಯೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಈಗ ಏನು ಪ್ರಧಾನಿಯವರ ಸುತ್ತಮುತ್ತಲಿರುವ ಜನ ಹೇಗೆ ಇದ್ದಾರೆಂದರೆ ಮಾಸ್ಕೋದಲ್ಲಿ ಮಳೆ ಬಂದರೆ ಮಲ್ಲೇಶ್ವರದಲ್ಲಿ ಕೊಡೆ ಹಿಡಿಯುವಂತೆ ಇದ್ದಾರೆಂದು ಹೇಳಿ ದೇಶದ ಭಕ್ತಿಯಿಂದ ಮತ್ತು ಪ್ರಾಮಾಣಿಕತೆಯಿಂದ ಹಾಗೂ ಕಳಕಳಿಯಿಂದ ತಮ್ಮ ಮೂಲಕ ಸರ್ವ ಹಿರಿಯರನ್ನು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ,

† ಶ್ರೀ ಮಹೇಂದ್ರ ಕುಮಾರ್ ಕಲ್ಲಪ್ಪ (ಹುಲಸೂರು).—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯಪಾಲರು ಮಾಡಿದ ಭಾಷಣವನ್ನು ಸ್ವಾಗತಿಸುತ್ತಾ ನನ್ನ ಕೆಲವು ವಿಚಾರಗಳನ್ನು ಸರ್ಕಾರದ ಎದುರಿಗೆ ಇಡುತ್ತೇನೆ. ಇಲ್ಲಿಯವರೆಗೆ ಅನೇಕ ಹಿರಿಯರು ಮಾತನಾಡಿದರು ನಾನು ತಿಳಿಸುವುದು ಏನು ಎಂದರೆ ನಮ್ಮ ಜಿಲ್ಲೆಯಲ್ಲಿ ಹಿಂದೆ ಏನು ಬರಗಾಲ ಬಂದಿತ್ತು ಆ ಸಮಯದಲ್ಲಿ ನಮ್ಮ ಸರ್ಕಾರದವರು ಹಾಗೂ ನಮ್ಮ ಮುಖ್ಯಮಂತ್ರಿಗಳಾದ ಶ್ರೀಮಾನ್ ದೇವರಾಜ್ ಅರಸ್‌ರವರು ಮಾಡಿದ ಉಪಕಾರವನ್ನು ನಮ್ಮ ಜಿಲ್ಲೆಯವತಿಯಿಂದ ಸ್ವಾಗತಿಸುತ್ತಾ, ನನ್ನ ಧನ್ಯವಾದಗಳನ್ನು ಸಲ್ಲಿಸಿ ಏನು ಮಾಡಿದ್ದಾರೋ ನಾವು ಎಂದೂ ಮರೆಯುವಂತಿಲ್ಲ ಅದಕ್ಕೆ ಈಗ ಒಂದು ವಿಷಯವನ್ನು ತಿಳಿಸುವುದು ಏನು ಎಂದರೆ ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಮಳೆ ಬಂತು ಆದರೆ ಯಾವ ಫಸಲು ಸರಿಯಾಗಿ ಕೈಗೆ ಬರಲಿಲ್ಲ. ಜನರಿಗೆ ಜೀವನಕ್ಕೆ ಬಹಳ ತೊಂದರೆಯಾಗಿ ಬದುಕುವುದಕ್ಕೆ ಸಾಧ್ಯವಿಲ್ಲವಾಗಿದೆ. ಇನ್ನು ಬರಗಾಲ ಕೆಲಸ ಇದ್ದು ಅದು ಇನ್ನು ಪರಿಹಾರವಾಗಿಲ್ಲ. ಅನ್ನ ಸಿಕ್ಕುವುದೇ ಬಹಳ ತೊಂದರೆಯಾಗಿದೆ ಇದರ ಸಲುವಾಗಿ ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ನಮ್ಮ ಜಿಲ್ಲೆಯಲ್ಲಿ ಏನು ರಿವಾರಿ ಮಾಡುವುದಿದೆ ಅದನ್ನು ಸದ್ಯದ ಪರಿಸ್ಥಿತಿಯಲ್ಲಿ ವಸೂಲು ಮಾಡದೆ ಇರುವಂತೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕೆಲವು ಕಡೆ ಕಬ್ಬಿನ ಬೆಳೆ ಇರುವ ಕಡೆ ವಸೂಲಿ ಮಾಡಲಿ ನಾನುಬೇಡವೆಂದು ಹೇಳುವುದಿಲ್ಲ. ಆದರೆ ಸಣ್ಣಪುಟ್ಟ ರೈತರು ಮತ್ತು ರೈತ ಕೂಲಿಗರು ಇವರ ಹತ್ತಿರ ವಸೂಲಿ ಕ್ರಮವನ್ನು ತಡೆಹಿಡಿಯಬೇಕೆಂದು ಕೇಳಿಕೊಳ್ಳುತ್ತೇನೆ. ಇದೇ ರೀತಿ ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ಕೂಡ ಕೆಲವು ಕಡೆ ರಿಯಾಯಿತಿ ತೋರಿಸಿದ್ದಾರೆಂದು ಕೇಳಿದ್ದೇನೆ ಅದೇ ರಿಯಾಯಿತಿಯನ್ನು ನಮಗೂ ತೋರಿಸಬೇಕೆಂದು ಕೇಳಿ

ಕೊಳ್ಳುತ್ತೇನೆ ಇನ್ನು ನನ್ನ ಕ್ಷೇತ್ರದ ಹುಲಸೂರುಹಾಗೂ ಇನ್ನು ಕೆಲವು ಕಡೆ ನಗರ, ಸೈಗಾಂ ಊರುಗಳಲ್ಲಿ ಕೆಲವು ಬ್ರಿಡ್ಜ್‌ಗಳನ್ನು ಕಟ್ಟಬೇಕೆಂದು ಪಿ.ಡಬ್ಲ್ಯು.ಡಿ ಮಂತ್ರಿಗಳನ್ನು ಕೇಳಿಕೊಂಡಿದ್ದೆ. ಆ ಕೆಲಸ ಆಗಿಲ್ಲ ಆದುದರಿಂದ ಅದು ಅವಶ್ಯವಾಗಿ ಮಾಡಬೇಕೆಂದು ಆದರಿಂದ ಬಹಳ ಜನರಿಗೆ ತೊಂದರೆಯಾಗಿದೆಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ದಯಮಾಡಿ ನಮ್ಮ ಸರ್ಕಾರ ದೊಡ್ಡ ಮನಸ್ಸುಮಾಡಿ ಇದನ್ನು ಮಾಡಿಕೊಟ್ಟರೆ ದೊಡ್ಡ ಉಪಕಾರ ಮಾಡಿದಂತಾಗುತ್ತದೆ. ಎರಡನೆಯದು ಏನು ಎಂದರೆ ಪೀಪಲ್ ಹೌಸಿಂಗ್ ಸ್ಕೀಂ ಏನು ಇದೆ ಮನೆಗಳನ್ನು ಕಟ್ಟುತ್ತಾರೆ ಅವರಿಗೆ ಮುಂಗಡವಾಗಿ ೫ ನೂರು ರೂಪಾಯಿಗಳನ್ನು ಮೊದಲೆ ಅವರು ಸ್ವಂತವಾಗಿ ಖರ್ಚು ಮಾಡಬೇಕೆಂದು ಆಮೇಲೆ ಒಂದು ಆರ್ಡರ್ ಬಂದಿದೆ ಅದರಲ್ಲಿ ೫೦೦ ರೂಪಾಯಿ ಸೋಸಿಯಲ್ ವೆಲ್‌ಫೇರ್ ಇಲಾಖೆಯವರು ಕೊಡುತ್ತಾರೆಂದು ಹೇಳಿದರು ಅವರು ಇನ್ನು ಕೊಟ್ಟಿಲ್ಲ. ಎಷ್ಟೋ ಕಡೆ ಮನೆ ಅರ್ಧ ಅರ್ಧವಾಗಿ ಹಾಗೆ ಉಳಿದಿವೆ, ಆದ್ದರಿಂದ ಸರ್ಕಾರ ಬೇಗನೆ ವಿಚಾರಮಾಡಿ ೫ ನೂರು ರೂಪಾಯಿ ಕೊಟ್ಟು ಆಮೇಲೆ ೨ ಸಾವಿರ ಕೊಡುವಂತೆ ಅಧಿಕಾರಿಗಳಿಗೆ ತಿಳಿಸಬೇಕೆಂದು ಸರ್ಕಾರದವಲ್ಲಿ ಪ್ರಾರ್ಥನೆ ಮಾಡಿಕೊಂಡು ಇಷ್ಟು ಹೇಳಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ಪಿ. ಹಗರೆ (ಚಿಕ್ಕೋಡಿ).—ಮಾನ್ಯ ಅಧ್ಯಕ್ಷರೇ. ಇವತ್ತಿನ ದಿವಸ ನಮ್ಮ ರಾಜ್ಯಪಾಲರು ಕಳೆದ ಎರಡನೇ ತಾರೀಖಿನ ದಿವಸ ಮಾಡಿದ ಭಾಷಣಕ್ಕಾಗಿ ಮಾನ್ಯ ಪುಟ್ಟಸ್ವಾಮಿಯವರು ತಂದಂತ ಅಭಿನಂದನೆ ಸಲ್ಲಿಸುವ ನಿರ್ಣಯವನ್ನು, ಬೆಂಬಲಿಸಿ ನನ್ನ ಎರಡು ಮಾತುಗಳನ್ನು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ಮೊದಲು ಎಲ್ಲಕ್ಕಿಂತಲೂ ಬೇರೆ ಬೇರೆ ವಿಷಯಗಳನ್ನು ತೆಗೆದುಕೊಳ್ಳದೆ ನಮ್ಮ ವಿರೋಧಪಕ್ಷದ ಮಾನ್ಯ ಸದಸ್ಯರು ಮಾಡಿದ ಟೀಕೆಗೆ ನಾನು ಉತ್ತರ ಕೊಡಲು ಇಷ್ಟಪಡುತ್ತೇನೆ. ವಿರೋಧಪಕ್ಷದ ಮಾನ್ಯ ಸದಸ್ಯರು ನವು ತುರ್ತುಪರಿಸ್ಥಿತಿ ವಿಷಯದಲ್ಲಿ ವ್ಯಕ್ತಿ ಸ್ವಾತಂತ್ರ್ಯ ಹರಣವಾಗುತ್ತದೆ, ದೇಶದ ಸ್ವಾತಂತ್ರ್ಯ ಹಾಳಾಗಿ ಹೋಗಿದೆ ಮತ್ತು ಯಾವ ಸಮಾಧಾನ ಮತ್ತು ಶಾಂತಿ ರಾಜ್ಯದಲ್ಲಿ ಇಲ್ಲವಾಗಿವೆ ಎಂದು ಮಾತನಾಡಿದ್ದಾರೆ. ವ್ಯಕ್ತಿಯ ಸ್ವಾತಂತ್ರ್ಯ ಎಂದರೆ ಏನು ಅರ್ಥ ಮಾಡುತ್ತಾರೆ ಎಂದು ನನಗೆ ತಿಳಿಯದಾಗಿದೆ ವ್ಯಕ್ತಿ ಸ್ವಾತಂತ್ರ್ಯ ಎಂದರೆ ಸ್ತ್ರೀಯರು ಮತ್ತು ಗಂಡಸರು ಮನಸೋ ಇಚ್ಛೆ ಬೀದಿಯಲ್ಲಿ ಕುಣಿದಾಡಬೇಕೇ ಅಥವಾ ಯಾರು ಯಾವಾಗ ಬೇಕಾದರೂ ಏನು ಬೇಕಾದರೂ ಮಾತನಾಡಬಹುದು, ಏನು ಮನಸ್ಸಿಗೆ ಬರುತ್ತದೆ ಅದನ್ನು ಮಾಡಬಹುದು ಎನ್ನುವುದೇ ವ್ಯಕ್ತಿಯ ಸ್ವಾತಂತ್ರ್ಯವೇ? ಪ್ರಜಾಪ್ರಭುತ್ವದ ಕಾರ್ಯಕಲಾಪಗಳು ನಡೆಯಬೇಕಾದರೂ ಕೆಲವು ವಿಧಿನಿಯಮಗಳು ಇವೆ. ಅದರ ಪ್ರಕಾರ ನಡೆಯಬೇಕಾಗುತ್ತದೆ. ಈಗ ಈ ಒಂದು ಸಭೆ ನಡೆಯಬೇಕಾದರೆ ಅದರ ಘನತೆ ಗೌರವವನ್ನು ನಾವು ಕಾಪಾಡಿಕೊಂಡು ಹೋಗಬೇಕು ಇಲ್ಲವೆ ಹೋದರೆ ಅಧ್ಯಕ್ಷರು ಕಾನೂನು ರೀತ್ಯ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈಗ ನಮ್ಮ ದೇಶಕ್ಕೆ ಒಂದು ಸಂವಿಧಾನವನ್ನು ಮಹಾತ್ಮ ಗಾಂಧಿಯವರು ಮತ್ತು ಅನೇಕ ಗಣ್ಯ ವ್ಯಕ್ತಿಗಳು ಹಾಕಿಕೊಟ್ಟಿದ್ದಾರೆ, ಅದರ ರೀತ್ಯ ನಮ್ಮಲ್ಲಿ ಒಂದು ಪಾರ್ಲಿಮೆಂಟರಿ ಪದ್ಧತಿ ಇದೆ. ಅದನ್ನು ನಾವು ಒಪ್ಪಿಕೊಂಡಿದ್ದೇವೆ, ಅದಕ್ಕೆ ಅನುಸರಿಸಿ ನಾವು ಎಲ್ಲರೂ ನಡೆದುಕೊಂಡು ಹೋಗಬೇಕು. ಅದೇ ರೀತಿ ನಮ್ಮ ಪ್ರಧಾನಿ ಇಂದಿರಾಗಾಂಧಿಯವರ ನೇತೃತ್ವದಲ್ಲಿ ಯಾವ ಕಾಲಕ್ಕೂ ಯಾವ ಸರ್ಕಾರ ಮಾಡದ್ದನು ನಮ್ಮ ಸರ್ಕಾರ ಮಾಡಿದೆ. ಇದು ತಮಗೆಲ್ಲಾ ಗೊತ್ತೇ ಇರುವ ವಿಚಾರ.

ನಮ್ಮ ರಾಷ್ಟ್ರದಲ್ಲಿರುವ ದಾರಿದ್ರ್ಯವನ್ನು ಬೇರೆ ಬಿಡಿಸಬೇಕು. ನಾವು ಸ್ವಾತಂತ್ರ್ಯ ಬಂದ ಕೂಡಲೇ ಮೊದಲಿನಿಂದಲೂ ಘೋಷಣೆಗಳನ್ನು ಮಾಡಿಕೊಂಡು ಬಂದಿದ್ದೇನೆ. ಆದರೂ ಸಹ ಅದರೂ ಸಹ ಹರಿಜನರಿಗೆ, ಗಿರಿಜನರಿಗೆ, ಹಿಂದುಳಿದವರಿಗೆ ಮತ್ತು ಇತರ ವರ್ಗದವರಿಗೆ ಅದರಲ್ಲಿಯೂ ಬಡವರಿಗೆ ಇದರ ಸಲುವಾಗಿ ಅನೇಕ ಉಪಕಾರಗಳನ್ನು ಇನ್ನೂ ಮಾಡಬೇಕು. ಸ್ವಾತಂತ್ರ್ಯ ಸಿಕ್ಕಿದನಂತರ ಕಾಂಗ್ರೆಸ್ ಅನೇಕ ಘೋಷಣೆಗಳನ್ನು ಮಾಡಿದೆ. ಇದುವರೆಗೂ ಆ ರೀತಿಯಾಗಿ ನಾನಾ ರೀತಿಯಲ್ಲಿ ಘೋಷಣೆಗಳನ್ನು ಮಾಡಿಕೊಂಡು ಬಂದರೂ ಕೂಡ ಹರಿಜನ, ಗಿರಿಜನ ಹಾಗೂ ಬಡವರ ಬಗ್ಗೆ ಸಾಕಷ್ಟು ಕಾರ್ಯಕ್ರಮಗಳನ್ನು ಇನ್ನೂ ಮಾಡಿಲ್ಲವೆಂದು ಹೇಳಿದರೆ ಅದೇನೂ ತಪ್ಪಾಗಲಾರದು. ನಮ್ಮ ಸಂವಿಧಾನದಲ್ಲಿ ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಪ್ರಕಾರ ಅವರಿಗೆ ಹೆಚ್ಚಿನ ಅನುಕೂಲತೆಗಳನ್ನು ಮಾಡಬೇಕೆಂದು ಸೂಚನೆ ಕೊಟ್ಟಿದ್ದಾರೆ. ಅವರ ಕಡೆಗೆ ಸಾಕಷ್ಟು ಲಕ್ಷ್ಯ ಕೊಟ್ಟಿಲ್ಲ. ನಮ್ಮ ರಾಷ್ಟ್ರದ ಪ್ರಧಾನಿ ಇಂದಿರಾಜಿಯವರು ನಮ್ಮ ಸಂವಿಧಾನದಲ್ಲಿ ಡೈರೆಕ್ಟಿವ್ ಪ್ರಿನ್ಸಿಪಾಲ್ಸ್ ಪ್ರಕಾರ ರಾಜ್ಯಕ್ಕೆ ಆದೇಶವನ್ನು ಕೊಟ್ಟು ಅದರ ಪ್ರಕಾರ ಎಲ್ಲಾ ಕಾರ್ಯಕ್ರಮ

ಗಳನ್ನು ಕಾರ್ಯಗತ ಮಾಡಬೇಕೆಂದು ಹೇಳಿದ್ದಾರೆ. ಆದರೆ ಆ ರೀತಿ ಕಾರ್ಯಗತ ಮಾಡುವ ಕಾಲಕ್ಕೆ ವಿರೋಧಪಕ್ಷದ ಕೆಲವು ನಾಯಕರು ಕೂಡ ಅವರಿಗೇನೋ ಅಘಾತವಾಗಿದೆಯೆಂದು ಅವರು ಸಂವಿಧಾನದ ಪ್ರಜಾಸತ್ತೆಯನ್ನು ಮುರಿಯುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅಂದಮೇಲೆ ಅವರಿಗೆ ಕಾಂಗ್ರೆಸ್ ಸರ್ಕಾರವೇ ಬೇಡವಾಗಿರಬೇಕು. ಅದನ್ನು ಹೇಗಾದರೂ ಮಾಡಿ ಬದಲಾವಣೆ ಮಾಡಬೇಕೆಂಬುದೇ ಅವರ ಗುರಿಯಾಗಿದೆ. ಅದಗೆ ಇದಕ್ಕೆ ತಕ್ಕಂತೆ ಸಂವಿಧಾನವಿದೆ. ಬೇಕಾದಂಥ ಕಾರಣಗಳೂ ಇವೆ. ಸಂವಿದಾನದ ನೀತಿಯನ್ನು ಕಾಂಗ್ರೆಸ್ ಸರ್ಕಾರ ಬದಲಾವಣೆ ಮಾಡುವುದಕ್ಕೆ ಯಾವಾಗಲೂ ಅವಕಾಶ ಕೊಡುತ್ತದೆಂಬ ಬಗ್ಗೆ ಯಾರಿಗೂ ಸಂಶಯ ಬೇಕಾಗಿಲ್ಲ. ನಮ್ಮ ಇಂದಿರಾಜಿಯವರ ನೇತೃತ್ವದಲ್ಲಿ ಸಂವಿಧಾನದ ನೀತಿ ನಿಯಮಗಳನ್ನು ಕಡ್ಡಾಯವಾಗಿ ನಮ್ಮ ಸರ್ಕಾರದವರು ಜಾರಿಗೆ ತರುತ್ತಾರೆಂದು ನಾನು ನಂಬಿದ್ದೇನೆ. ಮಾನ್ಯ ಶ್ರೀ ಲಿಂಗಪ್ಪನವರು ಮಾನ್ಯ ಶ್ರೀ ಜಯಪ್ರಕಾಶ್ ನಾರಾಯಣ್ ಅವರನ್ನು ಕೊಂಡಾಡಿದರು. ನಾನು ಅವರನ್ನು ಬಹಳ ಆದರದಿಂದ ಪುರಸ್ಕಾರ ಮಾಡುತ್ತೇನೆ. ಅವರ ಭಾಷಣ ಮತ್ತು ಲೇಖನಗಳನ್ನು ನೋಡಿದ ಮೇಲೆ ನನಗೆ ಬಹಳವಾಗಿ ಸ್ಫೂರ್ತಿ ಬಂದಿದೆ. ಮಾನ್ಯ ಶ್ರೀ ಜಯಪ್ರಕಾಶ್ ನಾರಾಯಣ್ ಆವರು ಎಂಥಹವರು ಎಂಬುದು ನನಗೆ ಗೊತ್ತು. ಕಾಂಗ್ರೆಸ್ ತೆಗೆಯಬೇಕು, ಇಂದಿರಾಜಿಯವರು ಕೆಳಗೆ ಇಳಿಯಬೇಕು ಎಂಬ ಬಗ್ಗೆ ಮಾನ್ಯ ಶ್ರೀ ಜಯಪ್ರಕಾಶ್ ನಾರಾಯಣ್ ಆವರು ಏನಾದರೂ ಅಭಿಪ್ರಾಯ ಪಟ್ಟಿದ್ದೋ ಆದರೆ, ಅವರು ನಿಜವಾಗಿಯೂ ಪ್ರಜಾವಾದಿ ಆಗಿದ್ದಾರೆಂದು ನಾನು ಒಪ್ಪುವುದಿಲ್ಲ. ಪಾರ್ಲಿಮೆಂಟಿನ ಅಭಿಪ್ರಾಯವೂ ನನ್ನ ಅಭಿಪ್ರಾಯದ ಹಾಗೆಯೇ ಇದೆ. ಈಗ ಕಾಂಗ್ರೆಸ್ ಸರ್ಕಾರ ಬೇಡ, ಇಂದಿರಾಜಿಯವರನ್ನು ಕೆಳಗೆ ಇಳಿಸಬೇಕೆಂದು ಹೇಳುವುದು ಯಾವ ರೀತಿ ಪ್ರಜಾಪ್ರಭುತ್ವವಾಗುತ್ತದೆ ? ಇಂದಿರಾ ಗಾಂಧಿಯವರು ಬಡವರ ಕಲ್ಯಾಣಕ್ಕಾಗಿ ಏನೇನೊ ಕಾರ್ಯಕ್ರಮಗಳನ್ನು ಮಾಡಬೇಕೆಂದು ಕೈಹಾಕುತ್ತಿರುವಾಗ ಕೆಲವು ಜನರಿಗೆ ಆದರಲ್ಲಯೂ ಕೆಲವು ಪಕ್ಷದವರಿಗೆ ಇದು ಸರಿಹೋಗಲಲ್ಲ. ಆದರೂ ಅದನ್ನು ನಮ್ಮ ಸಂವಿಧಾನಕಾರರು ಸ್ವೀಕರಿಸಿದ್ದಾರೆ ನನಗನ್ನಿಸುತ್ತದೆ, ಮಾನ್ಯ ವಿರೋಧಪಕ್ಷದವರಿಗೆ ಸುಮಾರು 2 200 ವರ್ಷಗಳ ಹಿಂದಿದ್ದಂಥ ಪ್ಲೇಟೋ ಸರ್ಕಾರದಲ್ಲಿ ಆಗಿನ ಕಾಲದಲ್ಲಿ ಪ್ರಜಾಸತ್ತಾತ್ಮಕ ರಾಜ್ಯಸರ್ಕಾರ ಕೆಲವೇ ಜನರ ಕೈಯಲ್ಲಿಡುತ್ತಿತ್ತು. ಆಗ ಅಧಿಕಾರವನ್ನು ಸುಮಾರು ಅವರೇ 18-20 ವರ್ಷಗಳ ಕಾಲ ತಮ್ಮ ಕೈಯಲ್ಲಿಯೇ ಇಟ್ಟುಕೊಂಡಿದ್ದರು. ಅಂತಹ ಒಂದು ರಾಜಕಾರಣ ಮಾಡುವುದು ನಮ್ಮ ವಿರೋಧ ಪಕ್ಷದವರಿಗೆ ಬೇಕಾಗಿದೆ. ಆಗ ಇವರೇ ಸಂಪೂರ್ಣ ಅಧಿಕಾರವನ್ನು ಹೊಂದಬಹುದಾಗಿತ್ತು. ಆಂದಮೇಲೆ ಈಗ ಇವರಿಗೆ ಈಗಿನ ಒಂದು ಅಧಿಕಾರ ಬೇಡವಾಗಿದೆ. ಈಗಿನ ಪ್ರಜಾಸತ್ತೆ ಬೇಡ, ಹಿಂದಿನ ಪ್ರಜಾಸತ್ತೆ ಬೇಕು ಎಂದು ಹೇಳುವ ಹಾಗೆ ಇವರ ಅಭಿಪ್ರಾಯನಾಗಿದೆಯೆಂದು ನಾನು ತಿಳಿಯುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ :—ಖಂಡಿತವಾಗಿ ಆ ರೀತಿ ಇಲ್ಲ. ಹಳೆಯ ಪ್ರಜಾಸತ್ತೆ ಬೇಕಿಲ್ಲ. ಆದರೆ ಒಂದು ಮನೆತನದ ಪ್ರಜಾಸತ್ತೆಯನ್ನು ನಾವು ಒಪ್ಪುವುದಿಲ್ಲ.

ಶ್ರೀ ಪಿ. ಪಿ, ಹಗರೆ ಇಂದಿರಾಜಿಯವರು ರಾಜೀನಾಮೆ ಕೊಡಬೇಕೆಂದು ಹೇಳುವುದು ಇದು ಎಂಥಹಪ್ರಜಾಪ್ರಭುತ್ವ! ಮುಂದೆ ಪಾರ್ಲಿಮೆಂಟ್ ಚುನಾವಣೆಯಾದಾಗ ಆ ಕಾಲಕ್ಕೆ ಪ್ರಜಾತ್ತಾತ್ಮಕ ರೀತಿಯಲ್ಲಿ ಇಂದಿರಾ ಗಾಂಧಿಯವರ ಸರ್ಕಾರವನ್ನು ಉರುಳಿಸಿ. ಆಗ ನಿಮ್ಮ ಶಕ್ತಿ, ತಾಕತ್ತು ಏನೆಂಬದು ಗೊತ್ತಾಗುತ್ತದೆ. ನಮ್ಮ ಸಂವಿದಾನದ ಮೂಲಕ ಏನೋ ಶಕ್ತಿ ಇದೆಯೆಂದು ನೀವು ಬೇರೆ ರೀತಿಯಲ್ಲಿ ಇವರನ್ನು ಉರುಳಿಸಬೇಕೆಂದು ಹೇಳಿದರೆ ಅದು ಖಂಡಿತವಾಗಿ ಅಗುವುದಿಲ್ಲ ನಿಮಗೆ ಬೇರೆ ಮಾರ್ಗ ಇಲ್ಲವೆಂದು ಈ ರೀತಿ ವಿನಾ ಕಾರಣ ಸರ್ಕಾರದ ಮೇಲೆ ಟೀಕೆ, ದೋಷಾರೋಪಣೆ ಮಾಡುವುದು ಸರಿಯಲ್ಲ. ಅದಕ್ಕಾಗಿಯೇ ಪ್ರಜಾಸತ್ತೆಯ ಉಳಿವಿಗಾಗಿ ಇಂದಿರಾಜಿ ಆವರು ಇಂತಹ 20 ಅಂಶಗಳ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ. ನಮ್ಮ ಹಿಂದೂಸ್ಥಾನದಲ್ಲಿ ಆಗಿರತಕ್ಕ ಒಂದು ದೊಡ್ಡ ಡೆಮಾಕ್ರಸಿ ಜಗತ್ತಿನಲ್ಲಿ ಇನ್ನೆಲ್ಲಿಯೂ ಇಲ್ಲ. ಪ್ರಜಾಸತ್ತೆಯನ್ನು ಉಳಿಸುವುದಕ್ಕೋಸ್ಕರ ತುರ್ತು ಪರಿಸ್ಥಿತಿಯನ್ನು ಜಾರಿ ಮಾಡಿದ್ದಾರೆ. ಅದರ ಪ್ರಕಾರ ಈಗಾಗಲೇ ಎಲ್ಲಾ ಕಾರ್ಯಕ್ರಮಗಳು ನಡೆದಿದೆ. ಮಾನ್ಯ ಶ್ರೀ ಜಯಪ್ರಕಾಶ್ ನಾರಾಯಣ್ ಅವರ ವಿಚಾರವನ್ನು ನಾನು ಸಂಪೂರ್ಣವಾಗಿ ತಿಳಿದುಕೊಂಡಿದ್ದೇನೆ. ನೆಹರೂ ಅವರನ್ನು ಸಹ ತಿಳಿದಿ

ದ್ದೇನೆ. ನಾನು ಮೊದಲು ಹೇಳಿದ ಪ್ರಕಾರ ಮಾನ್ಯ ಶ್ರೀ ಜಯಪ್ರಕಾಶ್ ನಾರಾಯಣ್ ಅವರ ಬಗ್ಗೆ ನನಗೆ ಹೆಚ್ಚಿನ ಆದರವಿದೆ ಹಿಂದೂಸ್ಥಾನದ ಇತಿಹಾಸದಲ್ಲಿ ಒಂದು ಕ್ರಾಂತಿಕಾರಕವಾದ ಬದಲಾವಣೆ ಆಗಬೇಕಾಗಿತ್ತು. ಹಿಂದೂಸ್ಥಾನದಲ್ಲಿ ಶ್ರೀಮಂತ, ಬಡವ ಎಂಬ ಬಗ್ಗೆ ಭೇದಭಾವ ವ್ಯತ್ಯಾಸ ಇದೆ; ಇದನ್ನು ತೆಗೆಯಬೇಕಾದರೆ ಕ್ರಾಂತಿಕಾರಕ ಬದಲಾವಣೆ ಅಥವಾ ಕಾನೂನು ಗಳು ಆಗಬೇಕಾಗಿತ್ತು. ಅದಕ್ಕಾಗಿಯೇ ಶ್ರೀಮತಿ ಇಂದಿರಾ ಗಾಂಧೀಜಿಯವರು ಕೈ ಹಾಕಿದ್ದಾರೆ. ಯಾವ ಸರ್ಕಾರದವರೂ ಮಾಡದೇ ಇರತಕ್ಕ ಕಾರ್ಯಕ್ರಮವನ್ನು ನಮ್ಮ ಸರ್ಕಾರದವರು ಮಾಡುತ್ತಿದ್ದಾರೆ. ಬಡತನ, ದಾರಿದ್ರ್ಯವನ್ನು ಹೋಗಲಾಡಿಸಲು ಹೆಚ್ಚಿಗೆ ಪ್ರಯತ್ನ ಮಾಡುತ್ತಿ ದ್ದಾರೆ. ಹಿಂದೂ ಸಮಾಜದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ಬದಲಾವಣೆಗಳನ್ನು ಮಾಡು ವುದಕ್ಕೆ ಪ್ರಯತ್ನಮಾಡುತ್ತಿದ್ದಾರೆ. ಈಗ ಹಿಂದೂಸ್ಥಾನದ ಇತಿಹಾಸದಲ್ಲಿ ಪ್ರಧಾನಿ ಇಂದಿರಾ ಜಿಯವರು ಅನೇಕ ಕ್ರಾಂತಿಕಾರವಾದ ಬದಲಾವಣೆಗಳನ್ನು ಮಾಡುತ್ತಾ ಇರುವುದರಿಂದ ಅವರ ಆಡಳಿತದ ಅವಧಿಯನ್ನು ಸುವರ್ಣಾಕ್ಷರದಲ್ಲಿ ಬರೆದು ಇಡಬೇಕು. ಈ ಒಂದು ಅವಧಿಯನ್ನು ನಾವು ಸಾಮಾನ್ಯವೆಂದು ಯಾರೂ ತಿಳಿದುಕೊಳ್ಳಬಾರದು. ನಿಜವಾಗಿಯೂ ಶ್ರೀಮತಿ ಇಂದಿರಾಜಿಯವರು ಬಡವರ ಉದ್ಧಾರಮಾಡುತ್ತಿದ್ದಾರೆ. ಈ ದೇಶದ ಏಳಿಗೆ ನಿಜವಾಗಿಯೂ ಆಗಬೇಕಾದರೆ ಸೇಕಡ 40 ರಷ್ಟು ಜನ ಏನು ಬಡತನದಲ್ಲಿದ್ದಾರ ಅವರೆಲ್ಲರ ಏಳಿಗೆ ಆದಹೊರತು ದೇಶ ಪ್ರಗತಿಯಾಗುವುದಿಲ್ಲ. ಆದರೆ ವಿರೋಧಪಕ್ಷದವರು ಹಿಂದಿನ ಎರಡು ಸಾವಿರ ವರ್ಷಗಳಲ್ಲಿದ್ದಂತೆ ಆಳ್ವಿಕೆ ಮಾಡಬೇಕೆಂದು ಹೇಳುತ್ತಿದ್ದಾರೆ. ಈ ದೇಶದಲ್ಲಿ ಬಡವರಿಗೆ ಅದು ಸಾಧ್ಯವಿಲ್ಲ. ಈ ದೇಶದಲ್ಲಿ ಬಡಜನರಿಗೆ ಹೆಚ್ಚಿನ ಅನುಕೂಲಗಳನ್ನು ಮಾಡಿಕೊಡಬೇಕು. ನಿಜವಾಗಿಯೂ ಈ ದೇಶದಲ್ಲಿ ಬಡವರಿಗೆ ರಾಜಕೀಯ ನ್ಯಾಯ, ಸಾಮಾಜಿಕನ್ಯಾಯ, ಹಾಗೂ ಆರ್ಥಿಕ ನ್ಯಾಯ ದೊರಕಿಸಿಕೊಡಬೇಕಾದರೆ ಶ್ರೀಮತಿ ಇಂದಿರಾಗಾಂಧೀಜಿಯವರ 20 ಅಂಶ ಗಳ ಕಾರ್ಯಕ್ರಮವೇನಿದೆಯೋ ಅವೆಲ್ಲವೂ ಪೂರ್ಣವಾಗಿ ಕಾರ್ಯಗತವಾಗಬೇಕು. ಆ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರದವರೂ ಪೂರ್ಣವಾಗಿ ಜಾರಿಗೆ ಕೊಡ ಬೇಕು. ಸೇಕಡಾ 10 ಅಥವಾ 20ರಷ್ಟು ಅವುಗಳಲ್ಲಿ ಜಾರಿಗೆ ಬಂದರೆ ಏನೂ ಸಾಲದು, ಪೂರ್ತಿಯಾಗಿ ಅವು ಕೂಡಲೇ ಜಾರಿಗೆ ಬರಬೇಕು. ಸಂವಿಧಾನದಲ್ಲಿ ಯಾವ ರೀತಿ ಯಾಗಿ ಪ್ರಾವಿಷನ್ ಇವೆಯೋ ಆದರ ಪ್ರಕಾರ ಡೆಮಾಕ್ರಸಿಕ್ ತತ್ವಗಳನ್ನು ವಿಚಾರಮಾಡಿ ಪ್ರಧಾನಿಯವರು ಈ ಇಪ್ಪತ್ತು ಅಂಶಗಳ ಕಾರ್ಯಕ್ರಮವನ್ನು ಈಗ ಜಾರಿಗೆ ಕೊಟ್ಟಿದ್ದಾರೆ. ಮುಂದೆ ಪಾರ್ಲಿಮೆಂಟ್ ಅಥವಾ ಅಸೆಂಬ್ಲಿ ಎಲೆಕ್ಷನ್ ಆಗಬೇಕು. ಅವರ ಅವದಿ 5 ವರ್ಷಗಳು ಈ 5 ವರ್ಷಗಳಲ್ಲಿ ಸರಿಯಾದ ಕೆಲಸ ಮಾಡಿದ್ದರೆ ಆಗ ಅವರನ್ನು ಆರಿಸಿ, ಸರ್ಕಾರದಲ್ಲಿರತಕ್ಕ ಸಂವಿಧಾನ ಮಾತನ್ನು ಬಿಟ್ಟು ವಿದ್ಯಾರ್ಥಿಗಳಿಗೆ ಬೇರೆ ಏನೇನೋ ಹೇಳುವುದಕ್ಕೆ ಹೋಗಬೇಡಿ. ಕೂಲಿಗಾರರಿಗೂ ನೀವು ಕೂಲಿಗೆ ಹೋಗಬೇಡಿ, ಕಾರ್ಮಿಕರಿಗೆ ನೀವು ಕೆಲಸ ಮಾಡಬೇಡಿ ಎಂಬು ದಾಗಿ ವಿರೋಧಪಕ್ಷದವರು ಹೇಳುವುದು ನ್ಯಾಯವೇ ? ನಾವು ಆ ರೀತಿ ಮಾಡುವುದು ಯೋಗ್ಯವಲ್ಲ. ಆದರೆ ಮಹಾತ್ಮ ಗಾಂಧೀಜಿಯವರು ಸತ್ಯಾಗ್ರಹ ಮಾಡಿದರು, ಮತ್ತೆ ಏನೇನೋ ಮಾಡಿದರೆಂದು, ವಿರೋಧಪಕ್ಷದವರಾದ ನೀವೂ ಸಹ ಮಹಾತ್ಮ ಗಾಂಧೀಜಿಯವರು ಮಾಡಿ ದಂತೆ ಮಾಡುತ್ತೇನೆಂದು ಹೇಳಿದರೆ ಹೇಗೆ ?

ಮಹಾತ್ಮ ಗಾಂಧೀಜಿಯವರು ಚಳುವಳಿ ಮಾಡಿದಾಗ ಆಗಿನ ಪರಿಸ್ಥಿತಿಯೇ ಬೇರೆ ಇತ್ತು ಈಗಿನ ಪರಿಸ್ಥಿತಿಯೇ ಬೇರೆ ಇದೆ. ಈಗ ಪ್ರಜಾಪ್ರಭುತ್ವವಿದೆ, ನಮ್ಮಲ್ಲಿ ಸಂವಿಧಾನವಿದೆ, ಆದಕ್ಕೆ ಅನುಸಾರವಾಗಿ ನಾವು ನಡೆದುಕೊಂಡು ಹೋಗಬೇಕು. ಆದಕ್ಕೆ ಯಾರೂ ಅಡ್ಡಿ ಯನ್ನುಂಟು ಮಾಡುವುದಕ್ಕೆ ಆಗುವುದಿಲ್ಲ. ನಿಮ್ಮಲ್ಲಿ ಶಕ್ತಿ ಇದ್ದಿದ್ದರೆ ಎಲೆಕ್ಷನ್‌ನಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರ ಸರ್ಕಾರವನ್ನು ಉರುಳಿಸಬಹುದಾಗಿತ್ತು. ಆದರೆ ನಿಮ್ಮಲ್ಲಿ ಆ ಶಕ್ತಿ ಇಲ್ಲ. ನ್ಯಾಯಮಾರ್ಗವನ್ನು ಬಿಟ್ಟು ಅನೈತಿಕ ಮಾರ್ಗದಲ್ಲಿ, ಗುಂಡಾಗಿರಿ ಮಾಡಿ ಅವರನ್ನು ಹೊಡೆದು ಬಿಡಬೇಕೆಂದು ಮಾಡಿದ್ದೀರಿ.

ಶ್ರೀ ಕೊಣಂದೂರು ಲಿಂಗಪ್ಪ :—ನಿಮ್ಮ ಕಾಂಗ್ರೆಸ್ಸಿನವರನ್ನೇ ಜೈಲಿಗೆ ಹಾಕಿದ್ದೀರಿ ಇದಕ್ಕೆ ಏನು ಹೇಳುತ್ತೀರಿ ?

ಶ್ರೀ ಪಿ. ಪಿ. ಹಗರೆ ;— ಇವತ್ತು ಶ್ರೀಮತಿ ಇಂದಿರಾಗಾಂಧಿಯವರ 20 ಅಂಶದ ಕಾರ್ಯಕ್ರಮದಲ್ಲಿ ಬಡಜನತೆಗೆ ಪೂರ್ಣ ನಂಬಿಕೆ ಇದೆ. ಆಸಕ್ತಿ ಇದೆ. ಹರಿಜನರ ಗಿರಿಜನರ ಕಲ್ಯಾಣ ಇದು ಅಷ್ಟು ಸುಲಭವಾಗಿ ಸಾಧಿಸತಕ್ಕಂಥದ್ದು ಅಲ್ಲ. ಇದು ಹಿಮಾಲಯ ಪರ್ವತದಷ್ಟು ಅಗಾಧವಾಗಿದೆ, ಇದನ್ನು ಒಮ್ಮೆಲೆ ನಾವು ಮಾಡುತ್ತೇವೆಂದು ಆಶಿಸುವುದೂ ಸರಿಯಲ್ಲ. ಶ್ರೀಮತಿ ಇಂದಿರಾಗಾಂಧಿಯವರು ಯಾರೂ ಮಾಡಲು ಆಗದೆ ಇರತಕ್ಕಂಥ ಕಾರ್ಯವನ್ನು ಮಾಡಲು ಮುನ್ನಡೆದಿದ್ದಾರೆ. ಹಗಲೂ ರಾತ್ರಿ ಅದಕ್ಕಾಗಿ ಶ್ರಮಿಸುತ್ತಿದ್ದಾರೆ. ಅವರ ಕಾರ್ಯಕ್ರಮದಲ್ಲಿ ನಾವು ನಂಬಿಕೆ ಇಡಬೇಕು ಅದರಿಂದ ದೇಶದ ಕಲ್ಯಾಣವಿದೆ. ಪರ ರಾಷ್ಟ್ರಗಳು ದಾಳಿ ಮಾಡುವ ಕಾಲದಲ್ಲಿ ವಿರೋಧ ಪಕ್ಷದವರು ಸಂಪೂರ್ಣ ಗುಂಡಾಗಿರಿ ಸ್ಟ್ರೈಕ್ ಮಾಡಲು ಶುರು ಮಾಡಿದರು ಅದನ್ನು ಈಗ ತಡೆಗಟ್ಟದಿದ್ದರೆ ನಮ್ಮ ದೇಶದಲ್ಲಿ ಖಂಡಿತವಾಗಿಯೂ ಅನಾಹುತವಾಗುತ್ತಿತ್ತು. ಮುಂದೆ ಅದರಿಂದ ದೇಶದಲ್ಲಿ ಎಷ್ಟು ಅಕಲ್ಯಾಣ, ಎಷ್ಟು ಹಾಹಾಕಾರ ಉಂಟಾಗುತ್ತಿತ್ತು ಎನ್ನುವುದನ್ನು ನಮ್ಮ ವಿರೋಧ ಪಕ್ಷದವರು ಯೋಚನೆ ಮಾಡಲಿಲ್ಲ. ಬರೀ ಶ್ರೀ ಜಯ ಪ್ರಕಾಶ್ ನಾರಾಯಣ್‌ರವರನ್ನು ಹೊಗಳುತ್ತಾ ಹೋದರೆ ಏನು ಪ್ರಯೋಜನ ?

ಶ್ರೀ ಕೆಣಂದೂರು ಲಿಂಗಪ್ಪ ;— ನೀವು ಶ್ರೀಮತಿ ಇಂದಿರಾಗಾಂಧಿಯವರನ್ನು ಹೊಗಳುತ್ತಿದ್ದೀರಲ್ಲಾ.

ಶ್ರೀ ಪಿ. ಪಿ. ಹಗರೆ ;— ಅವರ ಕಾರ್ಯಕ್ರಮಗಳು ಇದ್ದಾಗ, ಶ್ರೀ ಜಯಪ್ರಕಾಶ್ ನಾರಾಯಣರವರ ಮಾತುಗಳನ್ನು ನಾನು ಸ್ವಲ್ಪ ಕೇಳಿದ ಕೂಡಲೆ ನನ್ನ ಮಿತ್ರರ ಮುಂದೆ ಮಾತನಾಡಿದೆ, ಆಗ ಇನ್ನೂ ತುರ್ತು ಪರಿಸ್ಥಿತಿ ಘೋಷಣೆ ಮಾಡಿರಲಿಲ್ಲ. ಆಗ ಶ್ರೀ ಜಯಪ್ರಕಾಶ್ ನಾರಾಯಣ್‌ರವರು ಎಲ್ಲೆಲ್ಲಿ ಮಾತನಾಡಿದ್ದರು ಅಲ್ಲಿ ಅವರು ಸೈನಿಕರನ್ನು ಉದ್ದೇಶಿಸಿ ಅವರಲ್ಲಿ ಪ್ರಚೋದನೆ ಉಂಟು ಮಾಡುತ್ತಿದ್ದರು. ಆ ಸೈನಿಕರಿಗೆ '' ನ್ಯಾಯವನ್ನು ನೋಡಿ, ಆರ್ಡರ್ ಸರಿಯಾಗಿದ್ದರೆ ಪಾಲಿಸಿ ಇಲ್ಲದಿದ್ದರೆ ಬೇಡ'' ಎಂದು ಹೇಳಿದ್ದಾರೆ. ಮತ್ತೆ ಸರ್ಕಾರಿ ನೌಕರರನ್ನು. ಕಾರ್ಮಿಕರನ್ನು ಸರ್ಕಾರದ ವಿರುದ್ಧ ಹೋರಾಡಲು ಉತ್ತೇಜನ ನೀಡುತ್ತಿದ್ದರು. ಇಷ್ಟೆಲ್ಲಾ ಇವರು ಫ್ರೀಯಾಗಿ ಮಾತನಾಡುತ್ತಿದ್ದರೂ ಏತಕ್ಕೆ ಇವರನ್ನು ಹೀಗೆ ಬಿಟ್ಟಿದ್ದಾರೆ? ಏತಕ್ಕೆ ಅವರನ್ನು ಅರೆಸ್ಟ್ ಮಾಡಬಾರದೆಂದು ? ನನ್ನ ಮಿತ್ರರೊಂದಿಗೆ ಆಗ ನಾನು ಮಾತನಾಡುತ್ತಿದ್ದೆ. ನಾನು ಆರ್ಮಿಯಲ್ಲಿ ಇದ್ದವನು. ಅಲ್ಲಿ ಏನಾಗುತ್ತದೆಂದರೆ ಮೇಲಿನ ಅಧಿಕಾರಿಗಳು ಏನು ಹುಕುಂನ್ನು ಕೊಡುತ್ತಾರೋ ಅದನ್ನು ಅವನು ಪಾಲಿಸಲೇಬೇಕಾಗುತ್ತದೆ. ಆಗ ಯಾವುದು ನ್ಯಾಯ ಅನ್ಯಾಯ, ಹುಕುಂ ಸರಿಯಾಗಿದೆಯೋ ಇಲ್ಲವೋ ಎಂದು ನೋಡಿಕೊಳ್ಳುತ್ತಾ ಕುಳಿತರೆ ಶತ್ರುಗಳು ಧಾಳಿ ಮಾಡಿ ಒಳಕ್ಕೆ ನುಗ್ಗುತ್ತಾರೆ, ಅವರು ಅಟ್ಯಾಕ್ ಮಾಡುತ್ತಾರೆ. ಆರ್ಮಿಗಳ ಕರ್ತವ್ಯ ಏನಿದ್ದರೂ ಮೇಲಾಧಿಕಾರಿಗಳ ಹುಕುಂಮನ್ನು ಪಾಲಿಸತಕ್ಕದ್ದು ಅಷ್ಟೇ.

ಶ್ರೀ ಕೊಣಂದೂರು ಲಿಂಗಪ್ಪ .— ನಮ್ಮ ದೇಶದಲ್ಲಿ ಪ್ರಜೆಗಳ ಮೇಲೆ ಇಲ್ಲೀಗಲ್ ಆಗಿ ಆರ್ಡರ್ಸ್‌ಗಳು ಆಗುತ್ತಿದೆ. ಅಂಥ ಆರ್ಡರ್ಸ್‌ಗಳನ್ನು ಸರಿಯಾಗಿ ನೋಡಿ ಎಂದು ಹೇಳಿದ್ದೇ ವಿನಹ ಶತ್ರುಗಳನ್ನು ದಾಳಿ ಮಾಡಿಸುತ್ತಿರುವಾಗ ಆರ್ಡರ್ ಸರಿಯಾಗಿದೆಯೋ ಇಲ್ಲವೋ ಎಂದು ನೋಡಿ ಎಂದು ಅವರು ಹೇಳಿರಲಿಲ್ಲ

ಶ್ರೀ ಪಿ. ಪಿ. ಹಗರೆ — ಇದು ಪ್ರಜಾಪ್ರಭುತ್ವ ಸರ್ಕಾರವೇನು ? ಪ್ರಜಾಪ್ರಭುತ್ವ ಸರ್ಕಾರದ ಬಗ್ಗೆ ನಾನು ಓದಿದ್ದೇನೆ, ನಾನು ಸ್ವಲ್ಪ ಅದರ ಬಗ್ಗೆ ತಿಳಿದುಕೊಂಡಿದ್ದೇನೆ. ಇವತ್ತು ಶ್ರೀಮತಿ ಇಂದಿರಾಗಾಂಧಿಯವರ ನಾಯಕತ್ವದಲ್ಲಿ ನಮ್ಮ ದೇಶ ಪ್ರಗತಿ ಪಥದಲ್ಲಿ ಮುನ್ನಡೆದಿದೆ. ಇಡೀ ಜಗತ್ತಿನಲ್ಲೇ ಅವರು ಉತ್ತಮವಾದ ಹೆಸರನ್ನು ಪಡೆಯುತ್ತಿದ್ದಾರೆ. ಅಂಥವರಿಗೆ ನೀವು ರಾಜಕಾರಣದಿಂದ ಅಡ್ಡಿ ಆತಂಕಗಳನ್ನು ಉಂಟು ಮಾಡಿ. ಆತಂಕವನ್ನು ಉಂಟು ಮಾಡಬೇಡಿ ಅವರಿಗೆ ತೊಂದರೆಯನ್ನು ಉಂಟು ಮಾಡಬೇಡಿ. ನಿಮ್ಮಲ್ಲಿ ಶಕ್ತಿ ಇದ್ದರೆ ಧೈರ್ಯವಿದ್ದರೆ ಚುನಾವಣಾ ಪ್ರಣಾಳಿಕೆಯಲ್ಲಿ ನಿಮ್ಮ ಕಾರ್ಯಕ್ರಮಗಳನ್ನು ಇಟ್ಟು ನಮ್ಮ ಸರ್ಕಾರದವರು ಬೇಕಾದರೆ ಉರುಳಿಸುವುದಕ್ಕೆ ಪ್ರಯತ್ನ ಮಾಡಿ ಆದರೆ ಅನೈತಿಕ ಮಾರ್ಗವನ್ನು ಮಾತ್ರ ಅನುಸರಿಸಬೇಡಿ ಎಂದು ಕೇಳಿಕೊಳ್ಳುತ್ತೇನೆ. ಆದರೆ ಇವತ್ತಿನ ದಿವಸ ಪ್ರಜಾಪ್ರಭುತ್ವದ ಹೆಸರಿನಲ್ಲಿ ಪ್ರಜಾಪ್ರಭುತ್ವವನ್ನು ಬಿಟ್ಟು ಬೇರೆ ಮಾರ್ಗದಲ್ಲಿ ಹೋಗಬೇಡಿ ಎಂದು ಪ್ರಾರ್ಥನೆ ಮಾಡುತ್ತೇನೆ. ಇಲ್ಲದ ಮಾರ್ಗವನ್ನು ಅನುಸರಿಸಿ ಸರ್ಕಾರವನ್ನು ಉರುಳಿಸುವುದಕ್ಕೆ ಪ್ರಯತ್ನ ಮಾಡಬೇಡಿ ಎಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು 20 ಅಂಶದ ಕಾರ್ಯಕ್ರಮದ ಬಗ್ಗೆ ಹೇಳುವುದಾದರೆ, ನಮ್ಮ ಹಿಂದೂಸ್ಥಾನದಲ್ಲಿ ಇಂದು ಒಂದು ಸುವರ್ಣಕಾಲ, ಬಂಗಾರದ ಕಾಲ ಬಂದಿದೆ ಎಂದು ಹೇಳದರೆ ತಪ್ಪಾಗಲಾರದು ಈ 20 ಅಂಶಗಳ ಕಾರ್ಯಕ್ರಮವೇನಿದೆ ಇದು ಬಡವರ ಉದ್ಧಾರ ಮಾಡುವಂಥದ್ದು, ಕಲ್ಯಾಣ ಮಾಡುವಂಥದ್ದು. ಆದರೆ ಅದು ಅಷ್ಟು ಸುಲಭವಾಗ ಸಾಧಿಸುವಂಥದ್ದು. ಎಂದು ಯಾರೂ ಭಾವಿಸಬೇಡಿ. ಇದು ಬಹಳ ದೊಡ್ಡದಾದ ಪ್ರಶ್ನೆ. ಇದನ್ನು ಬಿಡಿಸಬೇಕಾದರೆ ಬಹಳ ಅವಕಾಶ ಬೇಕಾಗುತ್ತದೆ. ಇದನ್ನು ಬಿಡಿಸುವುದಕ್ಕೆ ಶ್ರೀಮತಿ ಇಂದಿರಾ ಗಾಂಧಿಯವರಿಗೆ ನಾವು ಸಂಪೂರ್ಣ ಸಹಾಯ ಬೆಂಬಲವನ್ನು ನೀಡಬೇಕಾಗಿದೆ.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು) ಸ್ವಾಮಿ 20 ಅಂಶಗಳ ಕಾರ್ಯಕ್ರಮ ತಾವು ಬೇರೆ ಕಡೆ ತೆಗೆದುಕೊಂಡರೆ ಅದರಿಂದ ಏನೂ ಉಪಯೋಗವಾಗುವುದಿಲ್ಲ. ನನಗೆ ತಿಳಿದ ಪ್ರಕಾರ ನಾನು ನೋಡಿದ ಪ್ರಕಾರ ಗ್ರಾಮಾಂತರ ಮಟ್ಟದಲ್ಲಿ ಈ 20 ಅಂಶಗಳ ಕಾರ್ಯಕ್ರಮ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲವೆಂದು ನನ್ನ ಭಾವನೆ. ಈಗ ಗ್ರಾಮಗಳಲ್ಲಿ ವಿದ್ಯುಚ್ಛಕ್ತಿಯ ಪೂರೈಕೆಯ ಸ್ಕೀಂ ಆಗಲೀ ಅಥವಾ ನೀರಿನ ಪೂರೈಕೆಯಾಗಲೀ ಹರಿಜನರ ಬಸ್ತಿಯನ್ನು ಬಿಟ್ಟು ಬಾಕಿ ಕಡೆ ಕೆಲಸವಾಗುತ್ತಿದೆ. ಇವತ್ತು ಸರಕಾರದವರು ಯಾವುದೇ ಸ್ಕೀಂನ್ನು ತೆಗೆದುಕೊಳ್ಳಲ ಹರಿಜನರ ಕೇರಿಗೆ ಹೋಗಬೇಕು ಆ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯ ನನ್ನ ಚಿಕ್ಕೋಡಿ ಕ್ಷೇತ್ರದಲ್ಲಿ ಸರಿಯಾದ ವಾಹನ ಸಂಪರ್ಕವಿಲ್ಲ. ಬೆಳಗಾಂ ಜಿಲ್ಲೆಯಲ್ಲಾ ವಾಹನ ಸೌಕರ್ಯದಲ್ಲ ಬಹಳ ಹಿಂದುಳಿದಿದೆ. ಅಲ್ಲಿ ಸರಿಯಾದ ಬಸ್‌ಗಳ ಸೌಕರ್ಯವಿಲ್ಲ ಇದಕ್ಕೆ ಕಾರಣ ಅಲ್ಲಿ ಸರಿಯಾದ ರಸ್ತೆಗಳು ಇಲ್ಲದಿರುವುದು. ನಾನು ಇದರ ಬಗ್ಗೆ ಮಾನ್ಯ ಪಿ. ಡಬ್ಲ್ಯು. ಡಿ. ಮಂತ್ರಿಗಳಿಗೆ ರೆಪ್ರಜೆಂಟೇಷನ್ ಕೊಟ್ಟಿದ್ದೇನೆ. ನಮ್ಮ ದುರ್ದೈವ ಒಂದು ಪಟ್ಟಿ ತಯಾರು ಮಾಡಿದ್ದಾರೆ ಅದರೊಳಗೂ ಯಾವುದೇ ವಿಧವಾಂಥ ಪಿ. ಡಬ್ಲ್ಯು. ಡಿ. ರಸ್ತೆಗಳನ್ನು ನಮ್ಮ ಭಾಗದಲ್ಲಿ ತೆಗೆದುಕೊಳ್ಳು ಹಾಗೆ ಇಲ್ಲ. ಟಿ. ಡಿ. ಬಿ ರಸ್ತೆಗಳನ್ನೆಲ್ಲಾ ತಾವೇ ವಹಿಸಿಕೊಂಡು ಅಲ್ಲಿ ಬಸ್ಸುಗಳು ಓಡಾಡುವ ಹಾಗೆ ವ್ಯವಸ್ಥೆ ಮಾಡಿ ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ಒಂದು ಸಲಹೆ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಇವತ್ತಿನ ದಿವಸ ಶ್ರೀಮತಿ ಇಂದಿರಾಗಾಂಧಿಯವರ ಲೀಡರ್ ಶಿಪ್‌ನಲ್ಲಿ ನಮ್ಮ ದೇಶ ಉತ್ತಮ ಮಾರ್ಗದಲ್ಲ ನಡೆಯುತ್ತಿದೆ. ನಮ್ಮ ಹಿಂದೂಸ್ಥಾನದಲ್ಲಿ ಪ್ರಗತಿ ಸಾಗಿಸಬೇಕಾದರೆ ಇಂಥ ಸರ್ಕಾರ ಇನ್ನು 10-20 ವರ್ಷಗಳ ಕಾಲ ಮುಂದುವರಿಯಬೇಕು ಎಂದು ನನಗನ್ನಿಸುತ್ತದೆ. ನಮ್ಮ ವಿರೋಧ ಪಕ್ಷದವರಿಗೆ ದೇವರು ಒಳ್ಳೆಯ ಬುದ್ಧಿ ಕೊಡಲಿ, ಪ್ರಜಾಸತ್ತಾತ್ಮಕವಲ್ಲದ ರೀತಿಯಲ್ಲಿ ವರ್ತನೆ ಮಾಡಲಿಕ್ಕೆ ಹೋಗಬಾರದೆಂದು ವಿನಂತಿ ಮಾಡಿಕೊಂಡು ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣ ಮುಗಿಸುತ್ತೇನೆ.

3-30 P.M.

† ಶ್ರೀ ಅನವಾಳದ ನಂಜಪ್ಪ (ಅರಸೀಕೆರೆ).—ಸನ್ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಬಗ್ಗೆ ವಂದನಾರ್ಪಣೆಯನ್ನು ಸೂಚಿಸುವ ಬಗ್ಗೆ ನಾನು ಸಂಪೂರ್ಣವಾಗಿ ವಿರೋಧ ಮಾಡುತ್ತಾ ಈ ಕೆಳಗಿನ ಅಂಶಗಳ ಬಗ್ಗೆ ಮಾತನಾಡಲಿಕ್ಕೆ ಇಷ್ಟಪಡುತ್ತೇನೆ. ಈ ಹಿಂದೆ ಹಿಂದಿನ ರಾಜ್ಯಪಾಲರು ಭಾಷಣ ಮಾಡಿದ ಸಂಧರ್ಭದಲ್ಲಿ ದೇಶದ ಒಳಿತಾಗಿ ಬದಲಾವಣೆಯಾಗುತ್ತದೆ ಎನ್ನುವ ಮಾತನ್ನು ಅವರು ಹೇಳಿದರು ಅದು ನನಗಾದರೂ ಕೂಡ ಸಂತೋಷವಾಯಿತು. ನಿಜವಾಗಿಯೂ ರಾಜ್ಯಪಾಲರು ಭಾಷಣ ಮಾಡಿದಂತಹ ೧೯೭೭ನೇ ಇಸವಿ ಬಹಳ ಒಳ್ಳೆಯ ಇಸವಿಯಾಗುತ್ತದೆ, ಸುಭಿಕ್ಷವಾದ ಇಸವಿಯಾಗುತ್ತದೆ ಎನ್ನುವ ದೃಷ್ಟಿಯಿಂದ ಆಸೆಯನ್ನು ಇಟ್ಟುಕೊಂಡಿದ್ದೆ. ಆದರೆ ಒಳ್ಳೆಯದಾಗುವುದಕ್ಕೆ ಬದಲಾಗಿ ಇವೊತ್ತು ದೇಶದಲ್ಲಿ ಏನಾಗಿದೆ ಎಂದರೆ ದೇಶದ ಸ್ವಾತಂತ್ರ ಪ್ರೇಮಿಗಳಿಗೆ, ಸ್ವಾತಂತ್ರವನ್ನು ದೇಶಕ್ಕೆ ಒದಗಿಸಿಕೊಟ್ಟಂತಹ ಸ್ವಾತಂತ್ರ ಹೋರಾಟಗಾರರಿಗೆ ಇವೊತ್ತು ದುಃಖದ ಒಂದು ಸ್ಥಿತಿ ಸಂಭವಿಸಿದೆ. ಅಲ್ಲದೇ ಯಾವ ಒಂದು ವರ್ಗವೂ ಕೂಡ ಇವೊತ್ತು ಸಂತೋಷದಿಂದ ಇಲ್ಲ, ರೈತರು,

ವರ್ತಕರು, ಕೈಗಾರಿಕೋದ್ಯಮಿಗಳು, ಅದರಲ್ಲೂ ಕೂಡ ಅಧಿಕಾರವರ್ಗದವರೂ ಎಲ್ಲರೂ ಒಂದು ವಿಧವಾದ ಭಯ ಭೀತಿಯಲ್ಲಿ ತೊಡಗಿದ್ದಾರೆ. ಹಿಂದೆ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಪತ್ರಿಕೆಯವರು ಸಲ್ಲಿಸಿದಂತಹ ಸೇವೆ ನಿಜವಾಗಿಯೂ ಕೂಡ ಈ ಸಂದರ್ಭದಲ್ಲಿ ನಾವು ಸ್ಮರಿಸದೇ ಹೋದರೆ ತಪ್ಪಾಗುತ್ತದೆ. ಸ್ವಾತಂತ್ರ ಹೋರಾಟ ಪ್ರಾರಂಭವಾದಾಗ ನಾನು ಒಂದು ಹಳ್ಳಿಯಿಂದ ಆಗತಾನೇ ನಗರಕ್ಕೆ ಬಂದೆ, ನಂತರ ಪತ್ರಿಕೆಗಳನ್ನು ಓದತಕ್ಕ ಅಭ್ಯಾಸ ಇಟ್ಟುಕೊಂಡಿದ್ದು ಆಗಲೇ ಎಂದು ಹೇಳುತ್ತೇನೆ. ಆಗ ಸ್ವತಂತ್ರ ಕರ್ನಾಟಕ ಎನ್ನತಕ್ಕ ಪತ್ರಿಕೆಯನ್ನು ತಾತಾ ತಿರುಮಲಾಚಾರ್ ಎಂಬುವವರು ಹೊರಡಿಸುತ್ತಿದ್ದರು ಅದನ್ನು ಓದುತ್ತಿದ್ದ ನನಗೆ ಸ್ವಾತಂತ್ರ್ಯದ ಪ್ರೇಮ ದೇಶಾಭಿಮಾನ ಮೂಡಿತು. ಆ ಒಂದು ದೃಷ್ಟಿಯಿಂದ ನಾನು ಈ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದೆ, ಅಲ್ಲದೇ ನನ್ನ ಹಾಗೆ ಅನೇಕ ಜನರು ಆ ಒಂದು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದರು. ನಂತರ ನಾವು ಸ್ವಾತಂತ್ರ್ಯವನ್ನು ಗಳಿಸಿದೆವು. ಅದಕ್ಕೆ ಮೂಲ ಕಾರಣ ನಮ್ಮ ಪತ್ರಿಕೆಯವರ ಪ್ರಚಾರವೇ ಮೂಲ ಕಾರಣ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಈಗ ಏನಾಗಿದೆ ಎಂದರೆ ದೇಶದಲ್ಲಿ ಭಯ, ಭೀತಿ ಹುಟ್ಟಿಸಿರತಕ್ಕ ಈ ಸಂದರ್ಭದಲ್ಲಿ, ದೇಶಕ್ಕೆ ಜ್ಞಾನವನ್ನು, ದೇಶಕ್ಕೆ ಒಳ್ಳೆಯ ತಿಳುವಳಿಕೆಯನ್ನು ಕೊಡತಕ್ಕ ಪತ್ರಿಕೆಯ ಪ್ರಚಾರಕ್ಕೆ ನಿರ್ಬಂಧ ಹಾಕಿರುವುದು ಪತ್ರಿಕೆಯ ಸ್ವಾತಂತ್ರ ಹರಣವಾಗಿದೆ ಇದು ಪ್ರಜಾಪ್ರಭುತ್ವ ತತ್ವವೇ ಎಂದು ಕೇಳುತ್ತೇನೆ. ಈಗ ನಮ್ಮ ಸ್ವತಂತ್ರ ರಾಷ್ಟ್ರದಲ್ಲಿ ಪತ್ರಿಕಾ ಸ್ವಾತಂತ್ರ ಹರಣವಾಗಿರುವುದನ್ನು ನೋಡಿದರೆ ವ್ಯಥೆಯಾಗುತ್ತದೆ. ಒಂದೊಂದು ಸಾರಿ ನಾವು ಸ್ವತಂತ್ರರಾಗಿದ್ದೇವೆಯೋ ಎನ್ನುವ ಅನುಮಾನ ಬರುತ್ತದೆ. ಅದರಲ್ಲೂ ಕೂಡ ಜೂನ್ ತಿಂಗಳಲ್ಲಿ ದೇಶದಲ್ಲಿ ಆಪತ್‌ಸ್ಥಿತಿ ಘೋಷಣೆಯಾದ ನಂತರ ಒಂದು ಕತ್ತಲು ಕವಿದಂತಾಗಿದೆ. ಇವೊತ್ತಿನ ದಿವಸ ಅನೇಕ ದೇಶಾಭಿಮಾನಿಗಳು, ದೇಶದ ಸ್ವಾತಂತ್ರ್ಯ ಹೋರಾಟಗಾರರು, ದೇಶದ ಅಭಿವೃದ್ಧಿಗೆ ದುಡಿದಂತಹವರು ಜೈಲಿನಲ್ಲಿ ಕುಳಿತಿದ್ದಾರೆ. ಇದು ಆಗಬಾರದು ಎಂದು ಹೇಳುತ್ತೇನೆ. ನಾವು ಯಾವ ಉದ್ದೇಶದಿಂದ ಸ್ವಾತಂತ್ರ್ಯವನ್ನು ಗಳಿಸಿಕೊಂಡೆವು ಅದನ್ನು ನೋಡಬೇಕಾಗುತ್ತದೆ. ಆ ದಿವಸ ದೇಶದಲ್ಲಿರತಕ್ಕ ಸಾಧನ ಸಂಪತ್ತುಗಳು ಸಂಪೂರ್ಣವಾಗಿ ಹಂಚತಕ್ಕದ್ದಾಗಬೇಕು, ದೇಶದಲ್ಲಿ ಶ್ರೀಮಂತ, ಬಡತನದ ವ್ಯತ್ಯಾಸ ಹೋಗಬೇಕು, ದೇಶ ಸರ್ವತೋಮುಖವಾಗಿ ಅಭಿವೃದ್ಧಿಗೆ ಬರಬೇಕು ಎನ್ನತಕ್ಕ ಆಸೆಯನ್ನು ಇಟ್ಟುಕೊಂಡು ಸ್ವಾತಂತ್ರ್ಯವನ್ನು ಗಳಿಸಿಕೊಂಡೆವು. ಈಗ ಏನಾಗಿದೆ ಎಂದರೆ ದೇಶದಲ್ಲಿ ಯಾರಿಗೂ ಯಾವ ವಿಧವಾದ ಸ್ವಾತಂತ್ರ್ಯ ಇಲ್ಲದೇ ಒಂದು ವಿಧವಾದ ಸರ್ವಾಧಿಕಾರ ನಡೆಯುತ್ತಿದೆ. ಇದು ನಿಜವಾಗಿಯೂ ಖಂಡನಾರ್ಹವಾದುದು ಇದರ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ದೇಶದಲ್ಲಿ ಪ್ರತಿಯೊಬ್ಬ ಜನರಲ್ಲಿ ಭಯ ಭೀತಿ ಈ ಆಪತ್ ಸ್ಥಿತಿ ಘೋಷಣೆಯಾದನಂತರ ಹುಟ್ಟಿದ. ಈ ಒಂದು ಘೋಷಣೆಯಾದನಂತರ ೨೦ ಅಂಶಗಳ ಕಾರ್ಯಕ್ರಮದ ಘೋಷಣೆಯಾಗಿದೆ, ಇದರ ಬಗ್ಗೆ ನನ್ನ ಸ್ನೇಹಿತರು ಅನೇಕರು ಇದು ಹೊಸದಾಗಿ ಬಂದಿದೆ ಎಂದು ಹೇಳಿದರು, ಅಲ್ಲದೇ ಇದು ನಮ್ಮ ಪ್ರಧಾನ ಮಂತ್ರಿಗಳ ಕರುಣ ಕೃಪಾಕಟಾಕ್ಷದಿಂದ ಇಳಿದಿದೆ ಎಂದು ಹೇಳುತ್ತಾರೆ ಇದನ್ನು ನಾನು ಖಂಡಿತವಾಗಿ ಒಪ್ಪುವುದಿಲ್ಲ. ದೇಶ ಸ್ವಾತಂತ್ರ ಪಡೆದ ಮೇಲೆ ದೇಶದ ಅಭಿವೃದ್ಧಿ ಬಗ್ಗೆ ತೆಗೆದುಕೊಂಡ ಕಾರ್ಯಕ್ರಮಗಳು ಈ ೨೦ ಅಂಶಗಳಲ್ಲಿ ಅಡಕವಾಗಿವೆ, ಈ ೨೦ ಅಂಶಗಳಲ್ಲಿರತಕ್ಕ ಕಾರ್ಯಕ್ರಮಗಳು ಮೊದಲಿನಿಂದಲೂ ಇವೆ, ಆದರೆ ಈಗ ಒಂದು ಹೊಸದಾದ ಹೆಸರನ್ನು ಕೊಟ್ಟು ಬೆಳಗ್ಗೆಯಿಂದ ಸಾಯಂಕಾಲದವರೆಗೆ ಪ್ರಚಾರ ಆಗುತ್ತಿದೆ, ಒಂದೊಂದು ಕಡೆ ಒಂದೊಂದು ಸಾರಿ ೫-೬ ಜನ ಮಂತ್ರಿಗಳು ಬಂದು ಪ್ರಚಾರ ಮಾಡುತ್ತಿರುತ್ತಾರೆ, ಈ ಬಗ್ಗೆ ನನಗೆ ತಿಳಿಯುವುದೇನೆಂದರೆ ಇವರು ಈ ೨೦ ಅಂಶಗಳ ಕಾರ್ಯಕ್ರಮವನ್ನು ಪ್ರಚಾರ ಮಾಡಬೇಕಾದರೆ ಎಷ್ಟು ಹಣ ಖರ್ಚಾಗುತ್ತದೆ ಅದನ್ನು ನೋಡಿದರೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಇವೊತ್ತಿನ ದಿವಸ ತಾಲ್ಲೂಕ್ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ಖಾಸಗಿ ಮಂಡಲಿಗಳಲ್ಲಿ ಇದರ ಬಗ್ಗೆ ಸಾಕಷ್ಟು ಪ್ರಚಾರದ ಕೆಲಸ ಮಾಡುವುದಕ್ಕೆ ಅವಕಾಶ ಇದ್ದರೂ ಕೂಡ ೫-೬ ಜನ ಸಚಿವರು ಭಾಗವಹಿಸುತ್ತಿರುತ್ತಾರೆ. ಇದರಲ್ಲಿ ಅರ್ಥ ಇಲ್ಲ ಎಂದು ಹೇಳುತ್ತೇನೆ. ಇದನ್ನು ನೋಡಿದರೆ ಜನರ ಮನಸ್ಸನ್ನು ಬೇರೆ ಕಡೆಗೆ ತಿರುಗಿಸುವುದಕ್ಕೆ ಹೂಡಿರುವ ತಂತ್ರ ಎಂದು ಹೇಳಬೇಕಾಗುತ್ತದೆ. ಈಗ ದೇಶದಲ್ಲಿರತಕ್ಕ ಭ್ರಷ್ಟಾಚಾರ, ರಾಜಕೀಯ ಅಸ್ಥಿರತೆ ತೀರದಿರುವ ಜನರ ಮನಸ್ಸನ್ನು ಬೇರೆ ಕಡೆಗೆ ತಿರುಗಿಸುವುದಕ್ಕೆ ಹೂಡಿರುವ ಮಹಾತಂತ್ರ ಎಂದು ಹೇಳಬಯಸುತ್ತೇನೆ. ಈ ೨೦ ಅಂಶಗಳಲ್ಲಿರತಕ್ಕ ಕಾರ್ಯಕ್ರಮದ ಬಗ್ಗೆ ನಾನು ಸಂತೋಷಪಡುತ್ತೇನೆ. ಈ ಸಂದರ್ಭದಲ್ಲಿ ಬೆಲೆಗಳು ಏರಿದೆ ಮತ್ತು ಅಧಿಕ ಉತ್ಪಾದನೆ ಬಗ್ಗೆ ನಮ್ಮ ರಾಜ್ಯಪಾಲರು ಪ್ರಸ್ತಾಪ ಮಾಡಿದ್ದಾರೆ. ಸ್ವಾಭಾವಿಕವಾಗಿ ಜೂನ್ ತಿಂಗಳಿಂದೀಚೆಗೆ ಅಂದರೆ ಘೋಷಣೆಯಾದನಂತರ ಬೆಲೆಗಳು ಇಳಿದಿಲ್ಲ.

೧೯೭೪–೭೫ರ ಸಾಲಿನಲ್ಲಿ ಒಳ್ಳೆಯ ಮಳೆ ಬೆಳೆಯಾದುದರಿಂದ ಉತ್ಪಾದನೆ ಜಾಸ್ತಿಯಾಯಿತೇ ಹೊರತು, ಜೂನ್ ತಿಂಗಳಲ್ಲಿ ಘೋಷಣೆಯಾದಾಗಿನಿಂದ ಉತ್ಪಾದನೆಯಾಗಿಲ್ಲ ಎಂದು ಹೇಳುತ್ತೇನೆ. ಈ ಬಗ್ಗೆ ಹೇಳುವುದಾದರೆ ಉತ್ಪಾದನೆ ಮಾಡತಕ್ಕ ಒಬ್ಬ ರೈತ ಯಾರು ಇರುತ್ತಾನೆ ಅವನಿಗೆ ಇದು ಒಂದು ಶಾಪವಾಗಿ ಪರಿಣಮಿಸಿದೆ. ಅವನು ಅಧಿಕ ಉತ್ಪಾದನೆ ಮಾಡಿದುದರ ಪಾಪದ ಫಲ ಎನ್ನುವ ಹಾಗೆ ಆಗಿದೆ. ಏಕೆಂದರೆ ಗೊಬ್ಬರದ ಬೆಲೆ ಜಾಸ್ತಿಯಾಯಿತು. ಎಲ್ಲದಕ್ಕಿಂತ ಮುಖ್ಯವಾಗಿ ನೀರಿನ ಕಂದಾಯ ಒಂದಕ್ಕೆ ಎರಡರಷ್ಟು ಹೆಚ್ಚಿಸಿದ್ದಾರೆ. ಇದರಿಂದ ಏನಾಗುತ್ತದೆ ಎಂದರೆ ಅವನು ಎಷ್ಟು ಉತ್ಪಾದನೆ ಮಾಡಿದರೂ ಕೂಡ ರೈತನ ಸೊಂಟ ಮುರಿದು ಹೋಗುವ ಸ್ಥಿತಿಗೆ ಬರುತ್ತದೆ ಆ ಬಗ್ಗೆ ಸರ್ಕಾರದವರು ಯೋಚನೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಭೂ ಸುಧಾರಣೆ ಬಗ್ಗೆ ತೆಗೆದುಕೊಂಡರೆ, ಈ ಬಗ್ಗೆ ನಾವೆಲ್ಲರೂ ಭೂ ಸುಧಾರಣೆ ಆಗಲೇಬೇಕು ಎಂದು ವಾದ ಮಾಡತಕ್ಕವರು ಆದರೆ ಇದರಲ್ಲಿ ಒಂದು ದುಃಖವಾದ ಸಂಗತಿ ಏನೆಂದರೆ, ವಿಧವೆಯರ ಅಂಗವಿಕಲರ ಸ್ಥಿತಿ ನೋಡಿದರೆ ಶೋಚನೀಯವಾಗುತ್ತದೆ, ವಿಧವೆಯರು ಅವಳ ಪತಿ ತೀರಿದ ಮೇಲೆ ಒಂದು ಅಥವಾ ಎರಡು ಎಕರೆ ಜಮೀನು ಇಟ್ಟುಕೊಂಡು ಜೀವನ ಮಾಡುತ್ತಿದ್ದರೆ ಆ ಜಮೀನನ್ನು ಕಿತ್ತುಕೊಳ್ಳುತ್ತಿದ್ದಾರೆ. ಹಾಗೆ ಗ್ರಾಮಾಂತರ ಪ್ರದೇಶಗಳಲ್ಲಿ ಭೂ ಸುಧಾರಣೆ ಬಗ್ಗೆ ನೋಡಿದರೆ ಒಬ್ಬರ ಜಮೀನನ್ನು ಇನ್ನೊಬ್ಬರಿಗೆ ಬರೆಯುವ ಹಾಗೆ ಆಗಿದೆ. ಈ ಘಟನೆ ನಡೆಯುವಾಗ ನಮ್ಮ ರೆವಿನ್ಯೂ ಮಂತ್ರಿಗಳ ಶಿಷ್ಯರು ಏನು ಇದ್ದಾರೆ ಅವರು ಇದರಲ್ಲಿ ನುರಿತಿದ್ದಾರೆ ಈ ಭೂ ನ್ಯಾಯಮಂಡಲಿಯಿಂದ ಇವೊತ್ತಿನ ದಿವಸ ಬಹಳ ಜನ ದುಃಖಕ್ಕೆ ಒಳಗಾಗಿದ್ದಾರೆ. ಈ ಬಗ್ಗೆ ಸರ್ಕಾರದವರು ಒಂದು ಒಳ್ಳೆಯ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ ಸಾಧ್ಯವಾದರೆ ಸಂಬಂಧಪಟ್ಟವರ ಮೇಲೆ ಉಗ್ರವಾದ ಕ್ರಮಗಳನ್ನು ತೆಗೆದುಕೊಂಡು ಬಡವರಿಗೆ ಸಹಾಯ ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು, ನಿವೇಶನ ಹಂಚಿಕೆ ವಿಚಾರದಲ್ಲಿ ಹೇಳಿದ್ದಾರೆ. ಸುಮಾರು ೭ ಲಕ್ಷ ಜನ ನಿವೇಶನರಹಿತರಾಗಿ ಇದ್ದಾರೆ ಎಂದೂ ಅದರಲ್ಲಿ ಈಗಾಗಲೇ ೫ ಲಕ್ಷ ಜನರಿಗೆ ನಿವೇಶನಗಳನ್ನು ಹಂಚಿದ್ದೇವೆ ಎಂದೂ ಹೇಳಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಅಷ್ಟಾಗಿ ನಿವೇಶನಗಳ ಸಮಸ್ಯೆ ಇರಲಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಯಾರೂ ನಿವೇಶನವಿಲ್ಲದೆ ಮರಗಿಡಗಳ ಕೆಳಗೆ ವಾಸ ಮಾಡುತ್ತಾ ಇರಲಿಲ್ಲ ಅದು ಎಲ್ಲರಿಗೂ ತಿಳಿದಿರತಕ್ಕದ್ದೇ ಆದರೂ ನಿವೇಶನರಹಿತರಿಗೆ ನಿವೇಶನ ಹಂಚುವ ಈ ಯೋಜನೆಯನ್ನು ನಾನು ಸ್ವಾಗತಿಸುತ್ತೇನೆ. ಆದರೆ, ಕೇವಲ ನಿವೇಶನ ಹಂಚುವುದರಿಂದಲೇ ಏನೂ ಪರಿಹಾರವಾಗುವುದಿಲ್ಲ, ಅವರಿಗೆ ಮನೆಗಳನ್ನು ಕಟ್ಟಿಕೊಡತಕ್ಕ ಯೋಜನೆಯನ್ನು ಹಾಕಿಕೊಂಡು, ಆ ಯೋಜನೆಯನ್ವಯ ಮನೆಗಳನ್ನು ಕಟ್ಟಿಸಿಕೊಟ್ಟರೆ, ಸರ್ಕಾರದ ಯತ್ನ ಸಾರ್ಥಕವಾಗುತ್ತದೆ ಎಂದು ಹೇಳಬಯಸುತ್ತೇನೆ.

ಇನ್ನು, ಅರಣ್ಯ ಇಲಾಖೆಯ ಉತ್ಪಾದನೆ ಮತ್ತು ಅರಣ್ಯವನ್ನು ಅಭಿವೃದ್ಧಿಪಡಿಸುವುದರ ಬಗ್ಗೆ ಹೇಳಿದ್ದಾರೆ. ಆದರೆ, ಅರಣ್ಯ ಬಾಬಿಗಾಗಿ ಪ್ರತಿವರ್ಷವೂ ಬಡ್ಜೆಟ್ಟಿನಲ್ಲಿ ತೆಗೆದಿಟ್ಟ ಹಣ, ಮತ್ತು ಖರ್ಚಾಗಿರತಕ್ಕ ಹಣದೊಂದಿಗೆ, ಆಗಿರತಕ್ಕ ಅಭಿವೃದ್ಧಿಯ ಗತಿಯನ್ನು ಲೆಕ್ಕ ಹಾಕಿ ನೋಡಿದರೆ, ಆಗಿರುವ ಅಭಿವೃದ್ಧಿ ಸಾಲದು ಎಂಬುದು ವೇದ್ಯವಾಗುತ್ತದೆ. ಇದನ್ನು ನೋಡಿದರೆ, ಅರಣ್ಯ ಇಲಾಖೆಯಲ್ಲಿ ಕೆಲಸಕಾರ್ಯಗಳು ತೃಪ್ತಿಕರವಾಗಿ ನಡೆದಿಲ್ಲ ಎಂಬುದು ತಿಳಿದು ಬರುತ್ತದೆ. ಇನ್ನು ಸರ್ಕಾರದವರಿಗೆ ನಾನು ಒಂದು ಸೂಚನೆ ಕೊಡುವುದು ಏನೆಂದರೆ —ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರದ ಅರಣ್ಯ ಇಲಾಖೆಯಲ್ಲಿನ ಅಧಿಕಾರಿಗಳು ಬಹಳ ಸ್ವೇಚ್ಛಾವೃತ್ತಿಯಿಂದ ವರ್ತಿಸುತ್ತಾ, ಗ್ರಾಮಾಂತರ ಪ್ರದೇಶದ ಜನಗಳಿಗೆ ಬಹಳ ಹಿಂಸೆಯನ್ನು ಕೊಡುತ್ತಿದ್ದಾರೆ. ಒಬ್ಬ ಗ್ರಾಮದ ರೈತ, ತನ್ನ ಜಮೀನಿನಲ್ಲಿ ತಾನು ನೆಟ್ಟು, ಬೆಳೆಸಿದ ಮರವನ್ನು ಕಡಿದು, ಅವನಿಗೆ ಬೇಕಾದಂಥ ಉಪಕರಣಗಳನ್ನು ಮಾಡಿಕೊಳ್ಳಬೇಕಾದ ಸಂದರ್ಭದಲ್ಲಿ, ಈ ಅಧಿಕಾರಿಗಳು, ಅವರ ಅಪ್ಪಣೆ ಇಲ್ಲದೆ ಮರವನ್ನು ಕಡಿದು ಸಾಗಿಸಿದ್ದೀಯಾ ಎಂದು ಆ ರೈತನ ಮೇಲೆ ಕ್ರಿಮಿನಲ್ ಮತ್ತು ಸಿವಿಲ್ ಕೇಸುಗಳನ್ನು ಹಾಕಿ, ಕಿರುಕುಳ ಕೊಡುತ್ತಿದ್ದಾರೆ. ರೈತ, ತನ್ನ ಜಮೀನಿನಲ್ಲಿ ಸ್ವತಃ ತಾನೇ ನಿಂತು ಮರವನ್ನು ನೆಟ್ಟು ಬೆಳಸಿ, ಅದನ್ನು ಮನೆ ಕಟ್ಟುವ ಸಲುವಾಗಿ ಕಡಿದು ಉಪಯೋಗಿಸುವ ಸಂದರ್ಭದಲ್ಲಿ, ಅರಣ್ಯ ಇಲಾಖೆಯ ಅಧಿಕಾರಿಗಳು ಆತನಿಗೆ ಕಿರುಕುಳ ಕೊಡತಕ್ಕದ್ದು ಒಳ್ಳೆಯದಲ್ಲ. ಆದರೆ, ಮರ ಕಡಿದ ನಂತರ ಅದನ್ನು ಸಾಗಿಸುವುದಕ್ಕೆ ಇಲಾಖೆಯವರಿಗೆ ಅರ್ಜಿ ಕೊಟ್ಟರೆ, ಪರ್ಮಿಟ್ ಕೊಡುವ ಕಾರಣಕ್ಕಾಗಿ ೫೦೦–೧೦೦೦ ರೂಪಾಯಿಗಳ ಪ್ರತಿಫಲವನ್ನು ಅಲ್ಲಿನವರು ಅಪೇಕ್ಷೆ ಮಾಡುತ್ತಿದ್ದಾರೆ. ಇದು ಸರ್ವೇಸಾಧಾರಣವಾದ ವಿಷಯವಾಗಿದೆ. ಆದುದರಿಂದ, ಇದಕ್ಕೆ ಸಂಬಂಧಪಟ್ಟವರು ಗ್ರಾಮಾಂತರ ಪ್ರದೇಶಗಳಲ್ಲಿರುವ ರೈತರಿಗೆ ಆಗುತ್ತಿರುವ ಕಿರುಕುಳವನ್ನು ತಪ್ಪಿಸುವುದಕ್ಕೆ ಏನಾದರೂ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡಬಯಸುತ್ತೇನೆ.

ಇನ್ನು, ವಿದ್ಯಾಭ್ಯಾಸ ವಿಚಾರವನ್ನು ತೆಗೆದುಕೊಂಡರೆ, ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಿ ಜಾರಿಯಲ್ಲಿದೆ. ಕಡ್ಡಾಯ ಶಿಕ್ಷಣವು ಫಲಕಾರಿಯಾಗಬೇಕಾದರೆ, ಎಲ್ಲ ಕಡೆಗಳಲ್ಲೂ ಪಾಠಶಾಲೆಗಳ ಕಟ್ಟಡಗಳು ಇರುವುದು ಅತ್ಯಾವಶ್ಯಕ. ಮಾನ್ಯ ವಿದ್ಯಾ ಮಂತ್ರಿಗಳು ಈಗತಾನೇ ಹೇಳಿದರು, ಗ್ರಾಮಗಳಲ್ಲಿ ಒಂದು ಪಾಠಶಾಲೆಯನ್ನು ಕಟ್ಟಿಸಲು ತಾಲ್ಲೂಕು ಬೋರ್ಡಿನವರು ೨,೫೦೦ ರೂಗಳನ್ನು ಕೊಡುವುದಕ್ಕೆ ಸಿದ್ಧರಿದ್ದರೆ, ಉಳಿದ ಮೊಬಲಗನ್ನು ಸಂಬಂಧಪಟ್ಟ ಪಂಚಾಯತಿಯವರು ಅಥವಾ ಗ್ರಾಮಸ್ಥರು ಹಾಕಿಕೊಳ್ಳಬೇಕು ಎಂದು. ಆದರೆ, ವಾಸ್ತವವಾಗಿ ಪಂಚಾಯತಿಗಳಾಗಲೀ, ಗ್ರಾಮಸ್ಥರಾಗಲೀ ವಂತಿಗೆ ಕೊಡತಕ್ಕ ಶಕ್ತಿಯನ್ನು ಕಳೆದುಕೊಂಡಿದ್ದಾರೆ. ಇದಕ್ಕೆ ಕಾರಣವಿಷ್ಟೆ: ರೈತರು ಬೆಳೆದ ಬೆಳೆ ಮಾರಲಿಕ್ಕೆ ಹೋದಾಗ ಧಾರಣೆ ಕಡಮೆ ಇರುತ್ತದೆ: ಮತ್ತೆ ಅವನು ಧಾನ್ಯ ಕೊಳ್ಳಲಿಕ್ಕೆ ಹೋದಾಗ ಧಾರಣೆ ಜಾಸ್ತಿ ಇರುತ್ತದೆ. ಹೀಗೆ ಆತನ ಆರ್ಥಿಕ ಪರಿಸ್ಥಿತಿ ಕಷ್ಟದಾಯಕವಾಗಿರುವುದರಿಂದ, ಆತನು ಯಾವ ವಂತಿಗೆಯನ್ನು ಕೊಡುವುದಕ್ಕೂ ಸಾಧ್ಯವಿರುವುದಿಲ್ಲ. ಇವತ್ತಿನ ದಿವಸ ಒಂದೊಂದು ಗ್ರಾಮದಲ್ಲಿ ನೂರಕ್ಕೆ ನಾಲ್ಕು ಜನ ಸ್ವಲ್ಪಮಟ್ಟಿಗೆ ಶ್ರೀಮಂತರು ಅವರವರ ಅನ್ನ ಬಟ್ಟೆಗೆ ಅನುಕೂಲವಾಗುವಷ್ಟು ಶ್ರೀಮಂತರಿರುತ್ತಾರೆ. ಆದರೆ, ಸುಮಾರು ನೂರಕ್ಕೆ ೭೦–೮೦ ಜನ ಕಡು ಬಡವರಾಗಿರುತ್ತಾರೆ. ಅವರಿಗೆ ವಂತಿಗೆ ಕೊಡಲು ಸಾಧ್ಯವೇ ಇರುವುದಿಲ್ಲ ಆದುದರಿಂದ ಪ್ರಾಥಮಿಕ ವಿದ್ಯಾಭ್ಯಾಸವನ್ನು ನಮ್ಮ ನಾಡಿನ ಮಕ್ಕಳಿಗೆ ಸುಲಭವಾಗಿ ಮತ್ತು ಉಚಿತವಾಗಿ ಕೊಡತಕ್ಕ ಏರ್ಪಾಡು ಆಗದಿದ್ದರೆ, ನಮಗಿರುವ ಸ್ವಾತಂತ್ರ್ಯದ ಫಲ ದೊರೆಯುವುದಿಲ್ಲ, ಅಷ್ಟೆ. ಆದುದರಿಂದ, ಕೊನೆಯ ಪಕ್ಷ, ಪ್ರಾಥಮಿಕ ಪಾಠಶಾಲೆಗಳಿಗಾದರೂ ತಾಲ್ಲೂಕು ಬೋರ್ಡ್, ಪಂಚಾಯತಿ ಮತ್ತು ಗ್ರಾಮಸ್ಥರಿಂದ ವಂತಿಗೆಯನ್ನು ಕೇಳದೆ, ಸರ್ಕಾರದವರೇ ಕಟ್ಟಿಸಿಕೊಡುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ನಮ್ರವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ಹಾಗೇನಾದರೂ ಸರ್ಕಾರದವರೂ ಮಾಡದಿದ್ದರೆ, ವಿದ್ಯಾಭ್ಯಾಸದ ಪ್ರಚಾರವೇ ಆಗುವುದಿಲ್ಲ ವಿದ್ಯಾವಂತರ ಸಂಖ್ಯೆ ಕಡಮೆಯಾಗುತ್ತದೆ, ಮತ್ತು ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಟ್ಟಂಥಾಗುವುದಿಲ್ಲ.

ಇನ್ನು ಎಲ್ಲಕ್ಕಿಂತ ಮುಖ್ಯವಾಗಿ ಕುಟುಂಬ ಯೋಜನೆ. ಇದರ ಬಗ್ಗೆ ಪ್ರಚಾರ ನಡೆಯುತ್ತಿದೆಯೇ ಹೊರತು ತೀವ್ರ ತರವಾದ ಕೆಲಸವಾಗುತ್ತಾ ಇಲ್ಲ. ನಮ್ಮ ದೇಶದಲ್ಲಿ ಜನಸಂಖ್ಯೆ ದಿನೇ ದಿನೇ ಜಾಸ್ತಿಯಾಗುತ್ತಿರುವುದು ಸರ್ವವಿದಿತವಾಗಿದೆ. ಆದುದರಿಂದ, ಜನಸಂಖ್ಯೆಯನ್ನು ಆದಷ್ಟು ಕಡಮೆ ಮಾಡತಕ್ಕದು ಅತ್ಯಂತ ಮುಖ್ಯವಾದುದು. ಆದುದರಿಂದ, ಇದಕ್ಕೆ ಸಂಬಂಧಪಟ್ಟಂತೆ ಒಂದು ಕಾನೂನು ಮಾಡಿ, ಕಡ್ಡಾಯವಾಗಿ ಅದನ್ನು ಅಳವಡಿಸುವುದಕ್ಕೆ ಸೂಕ್ತ ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಸಲಹೆ ಮಾಡಬಯಸುತ್ತೇನೆ.

ಇನ್ನು ಸಧ್ಯದ ಆಡಳಿತ ಸ್ಥಿತಿಯನ್ನು ನೋಡಿದರೆ ನಮಗೇ ಶೋಚನೀಯವಾಗುತ್ತದೆ. ನಮ್ಮ ರಾಷ್ಟ್ರದ ಪ್ರತಿಯೊಂದು ರಾಜ್ಯ ಸರ್ಕಾರದವರೂ ಕೂಡ ಪ್ರತಿಯೊಂದು ವಿಷಯಕ್ಕೆ ದೆಹಲಿ ಕಡೆಗೆ ನೋಡುವ, ದೆಹಲಿಯಿಂದ ಬಂದಂಥ ಸಲಹೆ ಮೇರೆಗೆ ನಡೆದುಕೊಳ್ಳತಕ್ಕ ಪರಿಪಾಠವಿರುವುದು ಒಳ್ಳೆಯದಲ್ಲ. ಇದನ್ನು ನೋಡಿದರೆ ನಮ್ಮ ರಾಜ್ಯ ಸರ್ಕಾರಗಳು ಪೋಸ್ಟ್ ಆಫೀಸ್ ಮತ್ತು ಸಬ್ ಡಿವಿಜನ್ ಆಫೀಸ್‌ಗಳು ಇದ್ದಹಾಗೆ ಆಡಳಿತ ನಡೆಸುತ್ತಿವೆ ಎಂದು ನನಗನ್ನಿಸುತ್ತದೆ. ಆದುದರಿಂದ, ರಾಜ್ಯ ಸರ್ಕಾರಗಳವರು ಸ್ವತಂತ್ರವಾಗಿ ಆಡಳಿತ ನಡೆಸುವುದು ಸೂಕ್ತ ಎಂದು ಹೇಳಬಯಸುತ್ತೇನೆ.

ಇನ್ನು ಕಾಮಗಾರಿಗಳ ಬಗ್ಗೆ ಹೇಳುವುದಾದರೆ, ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆ ಸಾರಿಗೆ ಸಂಪರ್ಕ ಸ್ವಲ್ಪವೂ ಕೂಡ ಸುಧಾರಿಸಿಲ್ಲ. ಆದರೆ ಬಡ್ಜೆಟ್ಟಿನಲ್ಲಿ ಮಾತ್ರ ಕೋಟಿಗಟ್ಟಲೆ ಹಣವನ್ನು ನೋಡಿ ಸಂತೋಷಪಡುತ್ತಿದ್ದೇವೆ. ಆದರೆ, ಹತ್ತು ವರ್ಷಗಳ ಹಿಂದೆ ರಸ್ತೆಗಳ ಸ್ಥಿತಿ ಏನಿತ್ತು ಈಗಲೂ ಹಾಗೆಯೇ ಇದೆ ಮನುಷ್ಯ ಇರಲಿ, ಜಾನುವಾರುಗಳೂ ಕೂಡ ತಿರುಗಾಡುವುದಕ್ಕೆ ಯೋಗ್ಯವಾಗಿಲ್ಲ ಈ ದೃಷ್ಟಿಯಿಂದ ರಸ್ತೆ ಮತ್ತು ಸಾರಿಗೆ ಸಂಪರ್ಕವನ್ನು ಕೂಡ ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಸರ್ಕಾರಕ್ಕೆ ಸಲಹೆ ಮಾಡಬಯಸುತ್ತೇನೆ.

ಇನ್ನು, ದೇಶದ ಮುಂದಿರುವ ೨೦ ಅಂಶದ ಕಾರ್ಯಕ್ರಮಗಳ ಬಗ್ಗೆ ಬರೀ ಪ್ರಚಾರಕ್ಕೆ ಕಾಲವನ್ನು ಉಪಯೋಗಿಸುವುದಕ್ಕೆ ಬದಲಾಗಿ, ಅವುಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಏನು ಕಾರ್ಯ ಮಾಡಬೇಕು, ಅದನ್ನು ಮಾಡಬೇಕೆಂದು ಹೇಳುತ್ತೇನೆ

ಇನ್ನೊಂದು ಮುಖ್ಯವಾದ ವಿಚಾರವೇನೆಂದರೆ ನಮ್ಮ ರಾಜ್ಯದ ಸಚಿವರುಗಳು ಪ್ರವಾಸದ ಬಗ್ಗೆ ಮಾಡತಕ್ಕ ಖರ್ಚನ್ನು ಲೆಕ್ಕ ಹಾಕಿ ನೋಡಿದರೆ ನಾವು ತಲೆತಗ್ಗಿಸಬೇಕಾಗುತ್ತದೆ. ಒಂದು ಸಮಾರಂಭಕ್ಕೆ ಒಟ್ಟೊಟ್ಟಿಗೆ ೩-೪ ಜನ ಮಂತ್ರಿಗಳು ಹೋಗುವುದು ಬಿಟ್ಟು, ಸಂಬಂಧಪಟ್ಟವರೇ ಹೋಗಿ, ತನ್ಮೂಲಕ ಸರ್ಕಾರಕ್ಕೆ ಹಣ ಉಳಿಸಿಕೊಡಬೇಕೆಂದು ಸರ್ಕಾರಕ್ಕೆ ತಿಳಿಯಬಯಸುತ್ತೇನೆ. ಮಂತ್ರಿಗಳು ತಾಲ್ಲೂಕು ಕೇಂದ್ರಗಳಿಗೆ ಭೇಟಿ ಕೊಟ್ಟಾಗ, ಅಲ್ಲಿನ ಸಾರ್ವಜನಿಕರ ಕಷ್ಟಸುಖಗಳನ್ನು ಕೇಳಿ, ಅವರಿಂದ ಅಹವಾಲು ಗಳನ್ನು ಪಡೆದು ಅದಕ್ಕೆ ಪರಿಹಾರ ಮಾಡಿಕೊಡುವ ಪರಿಪಾಠ ಇಟ್ಟುಕೊಳ್ಳಬೇಕು. ಆದರೆ, ಇವತ್ತಿನ ದಿವಸ ಮಂತ್ರಿಗಳು ಏನು ಮಾಡುತ್ತಿದ್ದಾರೆ ಎಂದರೆ ತಾಲೂಕು ಅಥವಾ ಜಿಲ್ಲಾ ಕೇಂದ್ರಕ್ಕೆ ಪ್ರವಾಸ ಬಂದಾಗ, ಅಲ್ಲಿನ ಖಾಸಗಿ ಶ್ರೀಮಂತರ ಮನೆಗಳಲ್ಲಿ ಬಿಡಾರ ಮಾಡುತ್ತಾರೆ, ಅಲ್ಲೇ ಇಳಿದುಕೊಳ್ಳುತ್ತಾರೆ. ಸಾರ್ವಜನಿಕರಿಗಾಗಿ, ಶಾಸಕರಾದ ನಾವು, ಅವರಿರುವಲ್ಲಿಗೇ ಹೋಗಿ ಅಹವಾಲನ್ನು ತಿಳಿಸಬೇಕು ಎಂದರೆ, ಅದು ನಾಚಿಕೆಯಾಗುತ್ತದೆ. ಆದುದರಿಂದ, ಈ ಪದ್ಧತಿಯನ್ನು ತಪ್ಪಿಸಿ, ಮಂತ್ರಿಗಳು ತಮ್ಮ ಪ್ರವಾಸ ಕಾಲದಲ್ಲಿ ಸಾರ್ವಜನಿಕರ ಕಷ್ಟ ಸುಖಗಳನ್ನು ಕೇಳಿ ಅದಕ್ಕೆ ಪರಿಹಾರ ಮಾಡಿಕೊಡಬೇಕೆಂದು ಹೇಳಿ, ಇಷ್ಟು ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಬಿ. ರಾಮಸ್ವಾಮಿ (ಆನೇಕಲ್).—ಸನ್ಮಾನ್ಯ ಅಧ್ಯಕ್ಷರೇ, ನೂತನ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸತಕ್ಕ ಮತ್ತು ಹಿರಿಯ ಸದಸ್ಯರಾದ ಮಾನ್ಯ ಶ್ರೀ ಪುಟ್ಟಸ್ವಾಮಿಯವರು ತಂದಂತಹ ವಂದನಾ ನಿರ್ಣಯಕ್ಕೆ ನಾನು ಬೆಂಬಲಿಸುತ್ತಾ, ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಈಗಾಗಲೇ ನಿನ್ನೆ ಮಾತನಾಡಿದ ನನ್ನ ಸ್ನೇಹಿತರು ಹಾಗೂ ವಿರೋಧಪಕ್ಷದ ಕೆಲವು ಸದಸ್ಯರು ೨೦ ಅಂಶಗಳ ಕಾರ್ಯಕ್ರಮದ ಬಗ್ಗೆ ಅನೇಕ ರೀತಿಯಲ್ಲಿ ಟೀಕೆ ಟಿಪ್ಪಣಿಗಳನ್ನು ಮಾಡಿದರು. ಮಾನ್ಯ ಅನಿವಾಳನಂಜಪ್ಪ ನವರು ಈಗತಾನೇ ೨೦ ಅಂಶಗಳ ಕಾರ್ಯಕ್ರಮ ಕೇವಲ ಪ್ರಚಾರದಲ್ಲಿದೆ ಎಂದು ಹೇಳಿದರು. ನನಗಂತೂ ಬಹಳ ಶಂಕೆ ಆಯಿತು, ಹಿರಿಯರು ಹಾಗೂ ಕಾಂಗ್ರೆಸ್ಸಿನ ಹಿರಿಯ ಮುಖಂಡರಾಗಿರತಕ್ಕವರು ವಿರೋಧಪಕ್ಷದ ಸದಸ್ಯರಾಗಿರತಕ್ಕಂತವರು ಏತಕ್ಕೋಸ್ಕರ ಈ ರೀತಿ ಹೇಳಿದರೋ ಗೊತ್ತಿಲ್ಲ. ೨೦ ಅಂಶಗಳ ಕಾರ್ಯಕ್ರಮ ಬಂದಿರತಕ್ಕದ್ದು ಈ ದೇಶದ ಎಲ್ಲಾ ಬಡವರ, ದೀನದಲಿತರ ಹಾಗೂ ಅಲ್ಪ ಸಂಖ್ಯಾತರ ವರಪ್ರಸಾದವಾಗಿದೆಯೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸುಮಾರು ೨೦-೩೦ ವರ್ಷಗಳ ಕಾಲ ಕತ್ತಲಿನಲ್ಲಿ ಇದ್ದಂತ ಜನ, ನೊಂದಂತ ಜನ, ಹಾಗೂ ಪ್ರಜಾ-ಪ್ರಭುತ್ವದ ಸವಿಯನ್ನೇ ಕಾಣದಂತ ಜನಕ್ಕೆ ನಮ್ಮ ರಾಷ್ಟ್ರದ ನಾಯಕಿ ಪ್ರಧಾನಮಂತ್ರಿಯವರು ಕೊಟ್ಟಿರತಕ್ಕ ಉಡುಗೊರೆ ಇದು, ಆದ್ದರಿಂದ ಅವರನ್ನು ನಾವು ಸ್ಮರಣೆ ಮಾಡತಕ್ಕದ್ದು ನಮ್ಮ ಆದ್ಯಕರ್ತವ್ಯ. ಪ್ರಜಾಸತ್ತೆ, ಪ್ರಜಾಪ್ರಭುತ್ವ, ಜಾತ್ಯತೀತ ರಾಷ್ಟ್ರ ಹಾಗೂ ಸಮಾಜವಾದದ ಬಗ್ಗೆ ಅಚಲವಾದ ನಂಬಿಕೆ ಇಟ್ಟಿರತಕ್ಕ ಕೆಲವು ಸೋದರರು ಮಾತನಾಡುತ್ತಾ ೨೦ ಅಂಶಗಳ ಕಾರ್ಯಕ್ರಮವನ್ನು ಪ್ರಚಾರ ಮಾಡಬಾರದು ಎಂದು ಹೇಳಿದಾಗ ನನ್ನ ಮನಸ್ಸಿಗೆ ಸ್ವಲ್ಪ ನೋವಾಯಿತು. ಸಂವಿಧಾನವನ್ನು ತಿದ್ದುಪಡಿ ಮಾಡಬಾರದು ಎಂದು ಅನೇಕ ಜನ ಹೇಳಿದರು. ಸಂವಿಧಾನ ಕೆಲವೇ ಜನಕ್ಕೆ, ಶ್ರೀಮಂತವರ್ಗದವರಿಗೆ ರಚನೆ ಮಾಡಿದಹಾಗೆ ಇದೆ. ಬಡವರಿಗೋಸ್ಕರ, ದೀನದಲಿತರಿಗೋಸ್ಕರ, ರೈತರಿಗೋಸ್ಕರ ಈ ಒಂದು ಸಂವಿಧಾ-ನವನ್ನು ತಿದ್ದುಪಡಿ ಮಾಡುವುದರಲ್ಲಿ ಯಾವ ಅಭ್ಯಂತರವೂ ಇಲ್ಲ. ೧೯೫೨-೫೭ನೇ ಇಸವಿಯ ಪರಿಪಾಠ ಈಗ ಇಲ್ಲ. ತುರ್ತುಪರಿಸ್ಥಿತಿ ಘೋಷಣೆಯಾದ ಮೇಲೆ ಕಳೆದ ೨೦ ೩೦ ವರ್ಷಗಳಿಂದ ಆಗದೇ ಇದ್ದಂತ ಕೆಲಸವನ್ನು ನಮ್ಮ ಸರ್ಕಾರದ ದಕ್ಷಮಂತ್ರಿಗಳು ಮಾಡಿರುವುದನ್ನು ಗ್ರಾಮಾಂತರ ಪ್ರದೇಶದಲ್ಲಿ ಕಾಣಬಹುದು. ಹಿಂದೆ ಇದ್ದಂತ ವೀರೇಂದ್ರ ಪಾಟೀಲರ ಸರ್ಕಾರವಾಗಲೀ ನಿಜಲಿಂಗಪ್ಪನವರ ಸರ್ಕಾರ-ವಾಗಲೀ ಅವರ ಕಾಲದಲ್ಲಿ ಆಗದೇ ನಿಂತಿದ್ದ ಕೆಲಸಕಾರ್ಯಗಳು ಈಗ ಕಾರ್ಯರೂಪಕ್ಕೆ ಬಂದಿದೆ. ಅಲ್ಲದೆ ಇದರಿಂದ ಬಡವರಿಗೆ ಅನುಕೂಲವಾಗಿದೆಯೆಂದು ಹೇಳಿದರೆ ಅತಿಶಯೋಕ್ತಿ ಆಗಬಾರದು. ರಾಷ್ಟ್ರದ ನಾಯಕಿಯಾದ ಒಬ್ಬ ಮಹಾ ಮಹಿಳೆ ಬಡತನ ನಿವಾರಣೆ ಮತ್ತು ಬಡವರ ಕಲ್ಯಾಣಕ್ಕೋಸ್ಕರ ಕಂಕಣ ಬದ್ಧರಾಗಿದ್ದಾರೆ, ನಾವು ಅದಕ್ಕೆ ಪುಷ್ಟಿ ಕೊಡುವುದು ನಮ್ಮ ಆದ್ಯಕರ್ತವ್ಯ, ವಿನೋಭಾಭಾವೆಯವರು ಮೊನ್ನೆ ಒಂದು ಮಾತು ಹೇಳಿದರು. ವಿರೋಧಪಕ್ಷದವರು ಹಾಗೂ ಜನನಾಯಕರು ಆಡಳಿತದಲ್ಲಿರತಕ್ಕ ಪಕ್ಷಕ್ಕೆ ಉತ್ತಮವಾದ ಸಲಹೆಗಳನ್ನೂ, ಯೋಗ್ಯವಾದ ಸಲಹೆಗಳನ್ನೂ, ಕೊಡಬೇಕಾದುದು ಅವರ ಕರ್ತವ್ಯ. ಅದನ್ನು ಸ್ವೀಕಾರ ಮಾಡತಕ್ಕದ್ದು ಅಧಿಕಾರದಲ್ಲಿರುವವರ ಕರ್ತವ್ಯ ಎಂದು ಹೇಳಿದ್ದಾರೆ. ಜಯಪ್ರಕಾಶನಾರಾಯಣರ ಬಗ್ಗೆ ಅನೇಕ ಪುಸ್ತಕಗಳನ್ನು 'ಓದಿದ್ದೇನೆ, ಅವರ ಬಗ್ಗೆ ಒಳ್ಳೆಯ ವಿಶ್ವಾಸವೂ ಇದೆ. ಆದರೆ ಅವರ ಚಳುವಳಿಯನ್ನು ಎಲ್ಲಾ ರಂಗದಲ್ಲೂ ತಂದೊಡ್ಡಿದರು, ಕಳೆದ ೨೦ ೩೦ ವರ್ಷಗಳಿಂದ ಜಯಪ್ರಕಾಶನಾರಾಯಣರು 'ಏನು ಮಾಡುತ್ತಿದ್ದಾರೆಂದು ನಾನು ಪ್ರಶ್ನೆ ಮಾಡುತ್ತೇನೆ? ಕೈಗಾರಿಕಾ ಕ್ಷೇತ್ರ

ದಲ್ಲಿ, ವಿದ್ಯಾಕ್ಷೇತ್ರದಲ್ಲಿ, ರೈತರ ಕ್ಷೇತ್ರದಲ್ಲಿ ಚಳುವಳಿಯನ್ನು ತಂದು ಪ್ರಜಾತಂತ್ರಕ್ಕೆ ಕೊಡಲಿಪೆಟ್ಟು ತರುವ ಮಟ್ಟಿಗೆ ಬಂದರು. ಅನೇಕ ಜನ ಪಟ್ಟಭದ್ರಾಹಿತಾಶಕ್ತಿಗಳ, ದರೋಡೆಕಾರರು, ಕಾಳಸಂತೆಕೋರರು ಒಳಗೂಡಿ; ತಂಡೋಪತಂಡವಾಗಿ ಚಳುವಳಿಯನ್ನು ಮಾಡಿದಾಗ, ಅನೇಕ ಜನ ಅವರನ್ನು ಸ್ವಾಗತ ಮಾಡದೇ, ಧಿಕ್ಕಾರ ಮಾಡಿರುವುದನ್ನು ನಾನು ನೋಡಿದ್ದೇನೆ. ಜೆ. ಪಿ. ಚಳುವಳಿ ಇಲ್ಲಿಗೆ ಬಂದಾಗ, ನಮ್ಮಲ್ಲಿರತಕ್ಕ ಕಲವು ಮುಖಂಡರುಗಳು, ಮಾಜಿ ಮಂತ್ರಿಗಳು, ಅಧಿಕಾರವರ್ಗದವರು ನ್ಯಾಯಾಧೀಶರುಗಳು ಅವರ ಚಳುವಳಿಯಲ್ಲಿ ಭಾಗವಹಿಸಿ ಕೋಟ್ಯಾಂತರ ರೂಪಾಯಿಗಳನ್ನು ಕಲೆಕ್ಷನ್ ಮಾಡಿ ಅವರಿಗೆ ಒಪ್ಪಿಸಿದ್ದನ್ನು ಕಣ್ಣಾರೆ ನೋಡಿದ್ದೇನೆ.

ಲ್ಯಾಂಡರೀಫಾರ್ಮ್ಸ್ ಬಗ್ಗೆ ಹೇಳುವುದಾದರೆ, ಈಗಾಗಲೇ ಅನೇಕ ಜನ ಬಡವರು ಡಿಕ್ಲೆರೇಷನ್ ಮಾಡಿಕೊಂಡು ಭೂ ಒಡೆಯರಾಗಿದಾ ರೆ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ೬೦ ಭಾಗ, ಬಡವರು ತುರ್ತು ಪರಿಸ್ಥಿತಿ ಹೀಗೆಯೇ ಮುಂದುವರಿಯಲಿ ಎಂದು ಹೇಳುತ್ತಿದ್ದಾರೆ. ತುರ್ತು ಪರಿಸ್ಥಿತಿ ಬೇಕಿಲ್ಲ ಎನ್ನುವವರು ಯಾರೆಂದರೆ, ಸರ್ಕಾರದ ಬೊಕ್ಕಸವನ್ನು ತಿಂದಂತಹ ಜನ, ಸೊಸೈಟಿಗಳಲ್ಲಿ ದುಡ್ಡು ತಿಂದಂತಹ ಜನ, ಕೆರೆಗಳನ್ನು ಮತ್ತು ಗದ್ದೆಗಳನ್ನು ಮಾಡಿಕೊಂಡಿರತಕ್ಕಂಥ ಜನ. ಇವರು ನೇರವಾಗಿ ಸರ್ಕಾರವನ್ನು ಟೀಕೆ ಮಾಡತಕ್ಕದ್ದು ಸಹಜ.

ಮೊನ್ನೆ ತಾನೇ ನಮ್ಮ ಸರ್ಕಾರದವರು ತೋಟಿ ತಳವಾರರು, ನೀರಗಂಟಿ ಯವರಿಗೆ ಜಮೀನನ್ನು, ಸುಮಾರು ೧೫ ವರ್ಷಗಳಿಂದ ಯಾರು ಯಾರು ಮಾಡಿದ್ದಾರೆ ಅವರಿಗೆ ಕೊಡಬೇಕೆಂದು ಮಾಡಿದ್ದಾರೆ; ಇದು ತುಂಬ ಶ್ಲಾಘನೀಯವಾದ ವಿಚಾರ. ತೋಟಿ ತಳವಾರರು ಪರಭಾರೆ ಮಾಡಿರತಕ್ಕ ಜಮೀನನ್ನು ಸರ್ಕಾರ ವಹಿಸಿಕೊಂಡು ಅಂತಹವರಿಗೆ ಕೊಡಬೇಕೆಂದು ಸೂಚನೆ ಮಾಡುತ್ತೇನೆ. ಜೊತೆಗೆ ಎಲ್ಲೆಲ್ಲಿ ಸರ್ಕಾರಿ ಜಮೀನು, ಗೋಮಾಳ ಇದೆ, ಯಾರು ಯಾರು ಹೊತ್ತುವರಿ ಮಾಡಿದ್ದಾರೆ, ಅಂದರೆ ಜಮೀನ್ದಾರರಿಂದ ಬಿಡಿಸಿ ಬಡವರಿಗೆ ಕೊಡುವ 'ಏರ್ಪಾಡು ಮಾಡಬೇಕೆಂದು ಈ ಮೂಲಕ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

4-00 P. M.

ನಾವು ಯಾವುದಕ್ಕೂ ಹಿಂದೆ ಬಿದ್ದಿಲ್ಲ. ಜಮೀನುಗಳನ್ನು ಕೆಲವೇ ಜನ ಆಕ್ರಮಣ ಮಾಡಿಕೊಂಡು ಅನುಭವಿಸಿರುವುದನ್ನು ನಾವು ನೋಡಿದ್ದೇವೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಅದರಲ್ಲೂ ಪ್ರಧಾನಿ ಇಂದಿರಾ ಗಾಂಧಿಯವರ ಆದರ್ಶದ ಮೇರೆಗೆ ಎಲ್ಲಾ ಕಡೆಯೂ ಹರಿಜನ ಮತ್ತು ಗಿರಿಜನರಿಗೆ ಶೇಕಡ ೫೦ ಭಾಗದಷ್ಟು ಮೀಸಲಾಗಿಟ್ಟಿದ್ದಾರೆ. ಅಲ್ಲದೆ ದೇಶದಲ್ಲಿ ಸ್ವರಾಜ್ಯಕ್ಕೆ ಹೋರಾಡಿದಂಥ ಪೊಲಿಟಿಕಲ್ ಸಫರರ್ಸ್‌ಗೆ, ಸ್ವರಾಜ್ಯ ಹೋರಾಟಗಾರರಿಗೆ ಈ ಎಲ್ಲರಿಗೂ ತಮ್ಮ ಪಾಲು ಸಿಗಬೇಕು ಎಂದ ಸರ್ಕಾರದ ಆದೇಶ ಇದೆ.

ಇನ್ನು ಈ ೨೦ ಅಂಶದ ಕಾರ್ಯಕ್ರಮದ ಬಗ್ಗೆ ಹೇಳುವುದಾದರೆ ನಮ್ಮ ಸರ್ಕಾರ ಈ ಜೀತ ಪದ್ಧತಿಯನ್ನು ರದ್ದು ಮಾಡಿದೆ. ಇದು ವಂಶಪಾರಂಪರ್ಯದಿಂದಲೂ, ಅನೇಕ ಶತಮಾನಗಳಿಂದಲೂ ನಡೆದುಕೊಂಡು ಬಂದಿತ್ತು. ಇದರಿಂದ ಬಹಳ ಜನ, ಇದರಲ್ಲಿ ನೊಂದಂಥ ಜನ ಬಹಳ ಸಂತೋಷಕ್ಕೆ ಒಳಗಾಗಿದ್ದಾರೆ. ಇದು ನನಗೆ ಬಹಳ ಆನಂದವಾಗಿದೆ. ಈ ಜೀತ ಪದ್ಧತಿಯಿಂದ ಅನೇಕರು ಸಾರ್ವಜನಿಕವಾಗಿ ತೋಪು ಬೆಳೆಸಿಕೊಂಡು ಅವರ ಮನೆ ಮರಗಳನ್ನು ಬೆಳೆಸಿಕೊಂಡು ವಂಶಪಾರ್ಯಂಪರವಾಗಿ ಬಾಳಿದ್ದನ್ನು ನಾನು ನೋಡಿದ್ದೇನೆ. ಇದೇ ಬೆಂಗಳೂರು ಜಿಲ್ಲೆಯಲ್ಲಿ ೧೨ ಸಾವಿರ ಜನರು ಜೀತಪದ್ಧತಿಯಲ್ಲಿರುವುದನ್ನು ಪತ್ತೆ ಮಾಡಿದ್ದಾರೆ. ಅನೇಕ ಕೂಲಿಗಾರರಿಗೆ ವಿಮೋಚನೆ ಮಾಡಿದ್ದಾರೆ. ಅಂಥಾ ಬಡವರಿಗೆ ಸಮಾಜದಲ್ಲಿ ಜಾಗವೂ ಸಿಕ್ಕದೇ ಬೇಕಾದಷ್ಟ ತೊಂದರೆಗಳನ್ನು ಕೊಡುತ್ತಿದ್ದರು. ಅಂಥಾ ಬಾಂಡೆಡ್ ಲೇಬರನ್ನು ಇಂದು ವಿಮುಕ್ತರನ್ನಾಗಿ ಮಾಡಿದ್ದಾರೆ. ನಾನು ಈ ವಿಚಾರದಲ್ಲಿ ಹೇಳುವುದು ಇಷ್ಟೆ. ಈಗ ಯಾರು ಯಾರನ್ನು ಜೀತದಿಂದ ವಿಮುಕ್ತಿರನ್ನಾಗಿ ಮಾಡಿದ್ದೀರಿ ಅವರಿಗೆ ತಕ್ಷಣವಾಗಿ ಎಲ್ಲಾ ಬ್ಯಾಂಕುಗಳಲ್ಲೂ ಸಾಲ ಕೊಡಿಸಿ ರೀಹ್ಯಾಬಿಲಿಟೇಷನ್ ಮಾಡಿಸಿ. ಆ ಪ್ರಜೆಗಳನ್ನು, ಆ ರೈತರನ್ನು ಹಿಂದಕ್ಕೆ ತುಳಿಯದೆ ಅವರಿಗೆ ಬೇಕಾದಂಥ ಸೌಕರ್ಯಗಳನ್ನು ಕಲ್ಪಿಸಿಕೊಡುವುದು ಒಳ್ಳೆಯದು. ಈ ವಿಚಾರವನ್ನು ಸರ್ಕಾರ ಜಾಗ್ರತೆಯಾಗಿ ಯೋಚನೆ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ

ಇನ್ನು ಋಣ ಪರಿಹಾರದ ಬಗ್ಗೆ ಹೇಳುವುದಾದರೆ ೨೪೦೦. ರೂಪಾಯಿ ವಾರ್ಷಿಕ ವರಮಾನ ಬರತಕ್ಕವರಿಗೆ ಅವರು ಸಾಲ ಪಡೆದಿರತಕ್ಕಂಥಾದ್ದನ್ನು ರದ್ದು ಮಾಡಿರುವುದು ಶ್ಲಾಘನೀಯ, ಇದು ಹರಿಜನ-ಗಿರಿಜನರಿಗೆ ಮತ್ತು ರೈತರಿಗೆ ಅಷ್ಟೇ ಅಲ್ಲ, ಎಲ್ಲಾ ಜನರಿಗೂ ಇದು ಅನ್ವಯಿಸತಕ್ಕಂಥಾದ್ದು ಹೃದಯಂಗಮವೇ ಸರಿ. ಹಿಂದೆ ಇರತಕ್ಕಂಥ ಸರ್ಕಾರ ಇಂಥಾದ್ದನ್ನು ಬುದುಮಾಡುವುದಕ್ಕೆ ಅವಕಾಶ ಸಿಗಲಿಲ್ಲವೇ? ನಮ್ಮ ಪ್ರಧಾನಿಯವರ ಆಡಳಿತ ೧೦ ವರ್ಷ ಮುಗಿದು ೧೧ ವರ್ಷಕ್ಕೆ ಕಾಲಿಟ್ಟ ಸಂದರ್ಭದಲ್ಲಿ ಅನೇಕ ಕೆಲಸಗಳನ್ನು ಕಾರ್ಯಗತ ಗೊಳಿಸುವ ಸಂದರ್ಭದಲ್ಲಿ ಅನೇಕ ಕಷ್ಟಕಾರ್ಪಣ್ಯಗಳು, ಎಡರುತೊಡರುಗಳು, ಕ್ಷಾಮಡಾಮರಗಳನ್ನು, ಕಂಡಿರತಕ್ಕಂಥಾದ್ದು ಇದೇ ಮೊದಲನೆಯದು ಎಂದು ನಾನು ಹೇಳುತ್ತೇನೆ ಜೊತೆಗೆ ಈ ಋಣಪರಿಹಾರದಲ್ಲಿ ಯಾರು ಯಾರು ಈ ಬಡವರಲ್ಲಿ ಹೈಪಾಥಿಕೇಷನ್ ಡೀಡ್ಸ್ ಮಾಡಿಸಿಕೊಂಡಿದ್ದಾರೆ, ಅವರ ಹತ್ತಿರ ಯಾರು ಮಾರ್ಟ್‌ಗೇಜ್ ಮಾಡಿಸಿಕೊಂಡಿದ್ದಾರೆ ಅದನ್ನು ಇದುವರೆಗೆ ಯಾವ ಸರ್ಕಾರವು ರದ್ದು ಮಾಡಲಿಲ್ಲ. ನಮ್ಮ ಸರ್ಕಾರ ಧೈರ್ಯವಾಗಿ ಈ ಕೆಲಸ ಮಾಡಿದದನ್ನು ಶ್ಲಾಘನೀಯ ಮಾಡಬೇಕು. ಈ ಬಗ್ಗೆ ಈಗ ನನ್ನ ಪ್ರಾರ್ಥನೆ ಇಷ್ಟು. ಗ್ರಾಮಾಂತರ ಪ್ರದೇಶದಲ್ಲಿ ಈ ಮಸೂದೆ ಬಂದ ಮೇಲೆ ಏನು ಮಾಡುತ್ತಿದ್ದಾರೆ ಎಂದರೆ ಆ ಬಡವರನ್ನು ಶೋಷಣೆ ಮಾಡಿ ಆದಷ್ಟು ಜಾಗ್ರತೆ ನೀವು ಹಣಕೊಡಬೇಕು ಎಂದು ತಗಾದೆ ಮಾಡಿ ಇದನ್ನು ಎದುರಿಸುವ ಭೀತಿ ಮಾಡಿದ್ದಾರೆ. ಈ ೨೦ ಅಂಶದ ಕಾರ್ಯಕ್ರಮದಿಂದ ಈ ಬಾಂಡೆಡ್ ಲೇಬರ್ ಮತ್ತು ಋಣ ಪರಿಹಾರ ಕಾಯಿದೆ ಏನು ತಂದಿದ್ದೀರೋ ಇದರ ಬಗ್ಗೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಮತ್ತು ಪೋಲೀಸ್ ಡಿಪಾರ್ಟ್‌ಮೆಂಟಿನವರು ಹೊಂದಾಣಿಕೆ ಮಾಡಿಕೊಂಡು ಇದನ್ನು ಎದುರಿಸದೇ ಹೋದರೆ ಈ ಕಾರ್ಯಕ್ರಮ ಯಶಸ್ವಿಯಾಗಲಾರದು ಎಂದು ನಾನು ನಂಬಿದ್ದೇನೆ. ಸರ್ಕಾರದಲ್ಲಿ ನನ್ನ ಪ್ರಾರ್ಥನೆ ಇಷ್ಟು. ಈ ಋಣ ಪರಿಹಾರ ಮತ್ತು ಜೀತದ ಬಗ್ಗೆ ಒಂದು ಮಸೂದೆ ತಂದು ಅದರ ಬಗ್ಗೆ ಒಂದು ತಿದ್ದುಪಡಿ ತಂದು ಈ ಬಡವರಿಗೆ, ಇದರಲ್ಲಿ ನೊಂದಂಥ ಜನರಿಗೆ ಒಂದು ಅನುಕೂಲವಾಗುವ ಹಾಗೆ ಅವರಿಗೆ ರಕ್ಷಣೆ ಕೊಡಬೇಕು ಎಂದು ನಾನು ಸರ್ಕಾರವನ್ನು ಕೇಳುತ್ತೇನೆ, ಜೊತೆಗೆ ೯೪ (ಎ) ಪ್ರಕಾರ ಎನ್‌ಕ್ರೋಚ್‌ಮೆಂಟ್ ಆಗಿರುವ ಸರ್ಕಾರದ ಗೋಮಾಳವನ್ನು ಯಾರು ಉಪಯೋಗ ಮಾಡಿಕೊಂಡಿದ್ದಾರೋ, ಯಾರು ಆಕ್ರಮಣ ಮಾಡಿಕೊಂಡಿದ್ದಾರೋ ಅವರು ತಕ್ಷಣ ಬಿಡಿಸಿ ಹಂಚಬೇಕು ಅಂತ ಮಾಡಿರುವುದು ಬಹಳ ಶ್ಲಾಘನೀಯವಾದ ಕೆಲಸ. ಇನ್ನೂ ಆಸಕ್ತ ವಿಷಯಗಳನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಬಹಳ ಸುಂದರವಾಗಿ ಚಿತ್ರಿಸಿದ್ದಾರೆ. ಅಲ್ಲದೆ, ಈ ನೂತನ ರಾಜ್ಯಪಾಲರು ನಮ್ಮ ಕರ್ನಾಟಕ ರಾಜ್ಯದಲ್ಲಿ ಸಾಧಿಸಿರತಕ್ಕಂಥ ಅನೇಕ ವಿಷಯಗಳನ್ನು ಹೇಳಿದ್ದಾರೆ. ಇದು ಬಹಳ ಆನಂದದ ವಿಷಯ.

ಇದು ಲ್ಯಾಂಡ ರೀಫಾರಂಸ್ ಬಗೆ ಹೇಳುವುದಾದರೆ ಇದು ಬಹಳ ಮುಖ್ಯವಾದುದು ಅಲ್ಲದೆ ಇದಕ್ಕೋಸ್ಕರ ಒಬ್ಬರು ಮಂತ್ರಿಗಳನ್ನು ಶ್ರೀಮಾನ್ ಸುಬ್ಬಯ್ಯ ಶೆಟ್ಟರನ್ನು ನೇಮಿಸಿರತಕ್ಕಂಥಾದ್ದು ಬಹಳ ಆನಂದದ ವಿಷಯ.

ಇನ್ನು ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಸೊಸೈಟಿಗಳ ಬಗ್ಗೆ ಒಂದೆರಡು ಮಾತು ಹೇಳುತ್ತೇನೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಬೆಂಗಳೂರಿನಲ್ಲಿ ೧೪೫ ಸೊಸೈಟಿಗಳು ಇದೆ ಇದರಲ್ಲಿ ೬-೭ ಸೊಸೈಟಿಗಳೂ ಕೂಡ ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಈ ಸೊಸೈಟಿಗಳು ಬಡವರನ್ನು ಶೋಷಣೆ ಮಾಡಿ, ಬಡವರ ರಕ್ತ ಹೀರಿ ಸರ್ಕಾರದ ಮೇಲೆ ಮಂತ್ರಿಗಳ ಮೇಲೆ ಟೀಕೆ ಮಾಡತಕ್ಕಂಥಾ ಜನ ಇದ್ದಾರೆ ಎಂದು ಪುಟ್ಟಸ್ವಾಮಯ್ಯನವರು ಹೇಳಿದರು. ಶ್ರೀಮಾನ ಸುಬ್ಬಯ್ಯಶೆಟ್ಟರು ಬಹಳ ದಕ್ಷತೆಯಿಂದ ಇದರ ಬಗ್ಗೆ ಕೆಲಸ ಮಾಡುತ್ತಾರೆ. ಅಲ್ಲದೆ ಅವರಿಗೆ ದೀನ ದಲಿತರ ಬಗ್ಗೆ, ಬಡವರ ಬಗ್ಗೆ ಯಾವಾಗಲೂ ಚಿಂತನೆ ಇದೆ. ಅವರು ಇದರಲ್ಲಿ ಯಶಸ್ವಿಯಾಗುತ್ತಾರೆ ಎನ್ನುವ ನಂಬಿಕೆ ನನಗೆ ಇದೆ. ಅವರು ರಾಜಕೀಯ ರಂಗಕ್ಕೂ ಸೇರಿ ಈ ಸಮಾಜವಾದದ ಬಗ್ಗೆ ಅವರ ಸರ್ವಸೋತ್ಮುಖವಾದ ಬೆಳವಣಿಗೆ ಬಗ್ಗೆ ಕೆಲಸ ಮಾಡುತ್ತಿದ್ದಾರೆ. ಅಲ್ಲದೆ ನಾವೂ ಕೂಡ ಅವರ ಬಗ್ಗೆ ಚಿಂತನೆ ಮಾಡುವುದು ನಮ್ಮ ಕರ್ತವ್ಯ ಅದರಲ್ಲೂ ಕೂಡ ಹರಿಜನ ಶಾಸಕರಾದ ನಾವೂ ಕೂಡ ಅವರ ಬಗ್ಗೆ ಅಂದರೆ ಹರಿಜನ-ಗಿರಿಜನರ ಬಗ್ಗೆ ದೀನದಲಿತರ ಬಗ್ಗೆ ಚಿಂತನೆ ಮಾಡಿ ಅವರನ್ನು ಮುಂದಕ್ಕೆ ತರಬೇಕಾದುದು ನಮ್ಮ ಕರ್ತವ್ಯ; ಎಂದು ಹೇಳುತ್ತೇನೆ. ಜೊತೆಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇನ್ನೂ ಅನೇಕ ವಿಷಯಗಳನ್ನು ತಂದಿದ್ದಾರೆ. ಈ ಸಹಕಾರ ಸಂಘದ ವಿಷಯದಲ್ಲಿ ಇನ್ನೂ ಒಂದು ವಿಚಾರ ಹೇಳುವುದಾದರೆ ಅನೇಕ ಸಹಕಾರ ಸಂಘಗಳು ಸಮರ್ಪಕವಾಗಿ ಕೆಲಸ ಮಾಡುತ್ತಾ ಇಲ್ಲ; ಈ ಬಗ್ಗೆ ಅನೇಕ ಸಲ ಅರಿಕೆ ಮಾಡಿಕೊಂಡಿದ್ದೇನೆ. ಸರ್ಕಾರವನ್ನು ಮಂತ್ರಿಗಳನ್ನೂ ಟೀಕೆ ಮಾಡತಕ್ಕಂಥಾ ಜನ ಪಿ. ಎಲ್. ಡಿ ಬ್ಯಾಂಕಿನಲ್ಲಿ ಸೇರಿಕೊಂಡಿದ್ದಾರೆ. ಆನೇಕಲ್ ತಾಲ್ಲೂಕಿನ

ಪಿ. ಎಲ್. ಡಿ. ಬ್ಯಾಂಕಿನಲ್ಲಿ ೨ ಲಕ್ಷ ರೂಪಾಯಿಯನ್ನು ದುರುಪಯೋಗ ಮಾಡಿದ್ದರೆ. ಅವರು ಆ ಬೋರ್ಡ್ ಆಫ್ ಮ್ಯಾನೇಜಮೆಂಟನಲ್ಲಿ ಇದ್ದಾರೆ. ಅಲ್ಲಿಯ ಅಧ್ಯಕ್ಷರು ಕಾರ್ಯದರ್ಶಿಗಳ ಮೇಲೆ ಅಲ್ಲಿ ರತಕ್ಕಂತ ಬೋರ್ಡ್ ಆಫ್ ಮ್ಯಾನೇಜಮೆಂಟಿನವರ ಮೇಲೆ ಇದುವರೆಗೆ ಯಾವ ನೋಟೀಸನ್ನೂ ಜಾರಿ ಮಾಡಿಲ್ಲ ಮೇಲಾಗಿ ಅವರ ಯಾವ ಮನೆಯೂ ಜಪ್ತಿಯಾಗಿಲ್ಲ. ಆದರೆ ಒಬ್ಬ ಬಡಬೋರೇಗೌಡ ಬ್ಯಾಂಕ ನಲ್ಲಿ ಸಾಲತೆಗೆದುಕೊಂಡು ಅವನು ಅದನ್ನು ಕಟ್ಟಲು ನಿಲ್ಲಿಸಿಬಿಟ್ಟರೆ ಅವನಿಗೆ ನೋಟಿಸು ಕೊಡುತ್ತಾರೆ. ಅವನ ಮನೆಗೆ ಬಂದು ಜಪ್ತಿ ಮಾಡುತ್ತಾರೆ. ಈ ರೀತಿ ಮಾಡುವದು ಯೋಗ್ಯವಾದುದಲ್ಲ. ಮಾನ್ಯ ಸಹಕಾರ ಸಚಿವರು ಇಲ್ಲಿ ಇದ್ದಾರೆ. ಆದುದರಿಂದ ನಾನು ಅವರಲ್ಲಿ ಕೇಳಿಕೊಳ್ಳುವುದು ಇಷ್ಟ ಈ ರೀತಿ ಯಾದಂಥ ದುರುಪಯೋಗ ಯಾವ ಪಿ. ಎಲ್. ಡಿ. ಬ್ಯಾಕಿಂನಲ್ಲಿ ನಡೆದಿದೆ ಅದರ ಬಗ್ಗೆ ತನಿಖೆ ಮಾಡ ಬೇಕು ಎಂದು ಹೇಳುತ್ತೇನೆ.

ಇನ್ನು ರೇಷ್ಮೆ ಬೆಳೆಗಾರರ ಬಗ್ಗೆ ಒಂದು ವಿಚಾರ ಹೇಳುತ್ತೇನೆ. ಈ ರೇಷೆ ಬೆಳೆಗಾರರ ಸಂಖ್ಯೆ ಏನು ಇದೆ ಅವರು ಆನೇಕಲ್ ತಾಲ್ಲೂಕ ಸರ್ಜಾಪುರ ಹೋಬಳಿಯಲ್ಲಿ ೧೨ ಪ್ರೈಮರಿ ಸೊಸೈಟಿಗಳನ್ನು ತೆರೆ ದಿದ್ದಾರೆ. ಅಲ್ಲಿ ದೇನಾ ಬ್ಯಾಂಕ ಒಂದು ೩ ವರ್ಷದ ಕೆಳಗೆ ಸ್ಥಾಪನೆಯಾಯಿತು. ಅವರು ಏನು ಮಾಡಿ ದರು ಎಂದರೆ ರೈತರ ಬಗ್ಗೆ ಅಪ್ಲಿಕೇಷನ್ ತರಿಸಿಕೊಂಡು ಅವರಿಗೆ ಸಾಲ ಕೊಡುವುದಕ್ಕೆ ೩೮ ಲಕ್ಷ ರೂಪಾ ಯಿನಷ್ಟು ರಿಕಾರ್ಡ್ ಬಿಲ್ಟ್ಅಪ್ ಆಗಿದೆ. ಆದರೆ ಇದುವರಿಗೂ ಯಾರಿಗೂ ಸಾಲ ಸಿಕ್ಕಿಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳು ಯೋಚನೆ ಮಾಡಿ ಜಾಗ್ರತೆಯಾಗಿ ಅವರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ನಾನು ತಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಶ್ರೀಮಾನ ಆರ್. ಡಿ. ಕಿತ್ತೂರರವರು ಈ ಸಭೆಯಲ್ಲಿರುವುದರಿಂದ ಈ ಒಂದು ವಿಚಾರ ಅವರ ಮುಂದೆ ಹೇಳುತ್ತಿದ್ದೇನೆ. ದಯವಿಟ್ಟು ೩ ವರ್ಷದಿಂದಲೂ ಪೆಂಡಿಂಗ್ ಇರ ತಕ್ಕಂಥ ಈ ರಿಕಾರ್ಡನನ್ನ ತರಿಸಿ ನ್ಯಾಯ ದೊರಕಿಸಿಕೊಡಿ.

ಇನ್ನು ದೇಶದಲ್ಲಿ ಉತ್ಪನ್ನ ಜಾಸ್ತಿಯಾಗಬೇಕು ಎಂದು ಹೇಳತಕ್ಕಂಥಾದ್ದು ನಮಗೆಲ್ಲರಿಗೂ ಅತ್ಯಂತ ಆನಂದದ ವಿಷಯ. ನಮ್ಮ ದೇಶದ ಪ್ರಧಾನ ಮಂತ್ರಿ ಇಂದಿರಾಗಾಂಧಿಯವರು ದೇಶದಲ್ಲಿ ವ್ಯವಸಾ ಯೋತ್ಪನ್ನ ಹೆಚ್ಚಾಗಿ ಆಗಬೇಕು ಎಂದು ಹೇಳಿದ್ದಾರೆ. ಅದರಂತೆ ಗ್ರಾಮಾಂತರ ಪ್ರದೇಶದಲ್ಲಿ ಹೈಯೀ ಲ್ಡಿಂಗ ವೆರೈಟೀಸನ್ನು ಕೊಡುತ್ತಿದ್ದಾರೆ. ಈ ದಿವಸ ಸಾಕಷ್ಟು ಸುಧಾರಣೆ ನಡೆದಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಇಂದು ಎಲ್ಲ ಪದಾರ್ಥಗಳ ಬೆಲೆಗಳು ಇಳಿಯುತ್ತಿವೆ. ಬಟ್ಟೆ, ಸೀಮೆಎಣ್ಣೆ, ಅಕ್ಕಿ, ಗೋಧಿ ಮುಂತಾದ ಎಲ್ಲ ಪದಾರ್ಥಗಳ ಬೆಲೆಗಳು ಇಳಿಮುಖವಾಗುತ್ತಿವೆ. ಈ ಸಲ ಮಳೆ ಚೆನ್ನಾಗಿ ಆಗಿರುವು ದರಿಂದ ಬೆಳೆಯೂ ಚೆನ್ನಾಗಿ ಆಗಿದೆ. ಜೊತೆಗೆ ತುರ್ತುಪರಿಸ್ಥಿತಿ ಜಾರಿಗೆ ಬಂದ ಮೇಲೆ ಬಡವರಿಗೆ ಅನೇಕ ರೀತಿಯಿಂದ ಅನುಕೂಲವಾಗಿದೆ. ಇಪ್ಪತ್ತು ಅಂಶಗಳ ಕಾರ್ಯಕ್ರಮದಿಂದ ಬಡವರ ಕಲ್ಯಾಣವಾಗುವು ದಕ್ಕೆ ಒಂದು ಅವಕಾಶವಾಗಿದೆ. ತುರ್ತುಪರಿಸ್ಥಿತಿ ಘೋಷಣೆ ಮಾಡುವುದಕ್ಕೆ ಮೊದಲು ಈ ದೇಶದಲ್ಲಿ ಲಂಚಕೋರರ ಹಾವಳಿ ಜಾಸ್ತಿಯಾಗಿತ್ತು; ಕಳ್ಳಸಾಗಾಣಿಕೆದಾರರು ಸರ್ಕಾರಕ್ಕೆ ನಾನಾ ರೀತಿಯಿಂದ ಮೋಸ ಮಾಡುತ್ತಿದ್ದರು ; ಕೆಲವರು ವರಮಾನ ತೆರಿಗೆ ಕೊಡದೆ ತಪ್ಪಿಸಿಕೊಳ್ಳುತ್ತಿದ್ದರು ; ಅಗ್ರಿಕಲ್ಚರಲ್ ಇನ್‌ಕಮ್ ಟ್ಯಾಕ್ಸ್ ಕೊಡದೆ ಕೆಲವರು ತಪ್ಪಿಸಿಕೊಳ್ಳುತ್ತಿದ್ದರು ; ಮತ್ತು ಕೆಲವರು ಪವರನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದರು ; ಮುಖ್ಯವಾಗಿ ಬಟ್ಟೆ ನೇಕಾರರು ೫ ಎಚ್. ಪಿ. ಮೋಟಾರ್‌ಗೆ ೨ ಎಚ್. ಪಿ. ಮೋಟಾರ್ ಎಂದು ಲೇಬಲ್ ಅಂಟಿಸಿಕೊಂಡು ಸರ್ಕಾರಕ್ಕೆ ಮೋಸ ಮಾಡುತ್ತಿದ್ದರು ; ತುರ್ತುಪರಿಸ್ಥಿತಿ ಜಾರಿಗೆ ಬಂದಮೇಲೆ ಇದೆಲ್ಲಾ ಹೋಗಿದೆ. ಪೋಲೀಸ್ ಅಧಿಕಾರಿಗಳು ಮತ್ತು ಮೇಲ್ಮಟ್ಟದ ಅಧಿಕಾರಿಗಳು ಇಂದು ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆಂದು ಹೇಳಿದರೆ ಅತಿಶಯೋಕ್ತಿ ಯಾಗಲಾರದು ಆದರೆ ವಿಲೇಜ್ ಅಕೌಂಟ್‌ಟೆಂಟ್, ಗ್ರಾಮ ಸೇವಕರು, ಮುಂತಾದ ಕೆಳವಂಟ್ಟದ ಅಧಿಕಾರಿಗಳು ರೈತರಿಗೆ ಸಹಾಯ ಮಾಡುವ ವಿಚಾರದಲ್ಲಿ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲವೆಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಬಡವರಿಗೋಸ್ಕರ ಪ್ರಧಾನ ಮಂತ್ರಿಗಳು ಕೈಕೊಂಡಿರುವ ಕಾರ್ಯಕ್ರಮ ಗಳಲ್ಲಿ ಬಡನೇಕಾರರಿಗೆ ಸಹಾಯ ಮಾಡುವುದೂ ಸಹ ಸೇರಿದೆ. ಹ್ಯಾಂಡಲೂಮ್ ಡೆವಲಪ್‌ಮೆಂಟ್ ಬೋರ್ಡನ್ನು ರಚನೆ ಮಾಡಲಾಗಿದೆ. ಆದರ ಮೂಲಕ ಬಡನೇಕಾರರಿಗೆ ಒಂದು ಅಥವಾ ಎರಡು ಲೂಮುಗಳನ್ನು ಕೊಡಲಾಗಿದೆ ಬಡ ನೇಕಾರರಿಗೆ ಒಳ್ಳೆಯ ಬೆಲೆ ಸಿಗಬೇಕು, ಅವರಿಗೆ ಅನುಕೂಲ ಮಾಡಬೇಕೆಂಬ ಕಾರಣದಿಂದ ಈ ರೀತಿ ಮಾಡಲಾಗಿದೆ. ನಮ್ಮ ರಾಜ್ಯದಲ್ಲಿರುವ ೧೫೭ ತಾಲ್ಲೂಕ್‌ಗಳಿಗೆ ಇದರಿಂದ ಅನುಕೂಲವಾಗಿದೆ. ಇಂತಹ ಒಂದು ಕಾರ್ಯಕ್ರಮ ಜಾರಿಗೆ ಬರುತ್ತಿರುವುದು ಇದೇ ಮೊದಲ ನೆಯ ಸಲವಾಗಿದೆ. ಇದರ ಜೊತೆಗೆ ಹರಿಜನ ಮತ್ತು ಗಿರಿಜನರಿಗೆ ಸಹಾಯ ಮಾಡಲು ಪ್ರತ್ಯೇಕವಾದ

ಒಂದು ಕಾರ್ಪೊರೇಷನನ್ನು ರಚನೆ ಮಾಡಲಾಗಿದೆ. ಆ ಕಾರ್ಪೊರೇಷನ್‌ನಲ್ಲಿ ಕೋಟ್ಯಾಂತರ ರೂಪಾಯಿಗಳಷ್ಟು ಹಣವಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕೆ ಮಾನ್ಯ ಶ್ರೀ ಕೆ. ಪ್ರಭಾಕರ್ ಅವರೇ ಚೇರ್‌ಮನ್ ಆಗಿದ್ದಾರೆ. ಅವರು ಹರಿಜನ ಮತ್ತು ಗಿರಿಜನರಿಗೆ ಹಣ ಸಹಾಯ ಮಾಡುವಾಗ ಅವರ ಶೋಷಣೆಯಾಗದಂತೆ ನೋಡಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಇಂದು ಗ್ರಾಮಾಂತರ ಪ್ರದೇಶಗಳಲ್ಲಿ ಹರಿಜನರ ಶೋಷಣೆಯಾಗುತ್ತಿದೆ. ತಮ್ಮ ಅನುಕೂಲಕ್ಕಾಗಿ ಇವರನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಪ್ರತಿಯೊಂದು ಊರಿನಲ್ಲಿಯೂ ಎರಡು ಗುಂಪುಗಳು ಏರ್ಪಟ್ಟು, ಆ ಎರಡು ಗುಂಪಿನವರೂ ಈ ಹರಿಜನರನ್ನು ಫುಟ್‌ಬಾಲ್ ತರಹ ಮಾಡಿ, ಅಂದರೆ ಮಧ್ಯವರ್ತಿಗಳನ್ನಾಗಿ ಮಾಡಿಕೊಂಡು ಶೋಷಣೆ ಮಾಡುತ್ತಿದ್ದಾರೆ. ಈ ರೀತಿಯಾಗಿ ಅವರ ಶೋಷಣೆ ನಡೆಯುತ್ತಿರುವುದನ್ನು ಮೊದಲು ತಪ್ಪಿಸಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಮಾನ್ಯ ವಿದ್ಯಾಮಂತ್ರಿಗಳ ಗಮನಕ್ಕೆ ಒಂದೆರಡು ವಿಚಾರಗಳನ್ನು ತರಬೇಕಾಗಿದೆ. ಇಂದು ಸರ್ಕಾರದವರು ವಿದ್ಯಾಭ್ಯಾಸಕ್ಕಾಗಿ ೬೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಈ ವಿದ್ಯಾ ಇಲಾಖೆಯನ್ನು ನೋಡಿಕೊಳ್ಳಲು ಒಳ್ಳೆಯ ದಕ್ಷರಾದಂಥ ಮಂತ್ರಿಗಳಿರುವುದು ನಮ್ಮ ಸುದೈವವೆಂದು ಹೇಳಬಹುದು; ಅವರು ಎಲ್ಲ ಹಂತಗಳಲ್ಲಿಯೂ ಸಹ ಸತಸಂಪ್ರದಾಯದ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಮತ್ತು ಪ್ರಾಮಾಣಿಕವಾದಂಥ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಜೊತೆಗೆ ಅವರು ಎಲ್ಲ ವರ್ಗದವರನ್ನೂ ಒಂದೇ ರೀತಿಯಿಂದ ನೋಡಿಕೊಳ್ಳುತ್ತಿದ್ದಾರೆ. ಅಂತಹವರನ್ನು ನಾವು ಶ್ಲಾಘನೆ ಮಾಡಬೇಕಾಗಿದೆ. ಅವರಲ್ಲಿ ನನ್ನ ಸಣ್ಣ ಒಂದು ವಿನಂತಿ ಏನೆಂದರೆ, ಇಂದು ಗ್ರಾಮಾಂತರ ಪ್ರದೇಶಗಳಲ್ಲಿರುವ ಶಾಲಾ ಕಟ್ಟಡಗಳ ರಿಪೇರಿ ಸರಿಯಾಗಿ ಆಗುತ್ತಿಲ್ಲ: ಜೊತೆಗೆ ಅವುಗಳಿಗೆ ಸುಣ್ಣಬಣ್ಣ ಸಹ ಆಗಿಲ್ಲ; ಇದಕ್ಕೆ ಕಾರಣವೇನೆಂದು ಕೇಳಿದರೆ, ಕೆಲವು ಶಾಲೆಗಳು ಟಿ.ಡಿ.ಬಿ.ಗೆ ಸೇರಿದು ನಾವು ರಿಪೇರಿ ಮಾಡುವಂತಿಲ್ಲವೆಂದು ಹೇಳುತ್ತಾರೆ, ಮತ್ತೆ ಕೆಲವು ಶಾಲೆಗಳು ಲೋಕೋಪಯೋಗಿ ಇಲಾಖೆಗೆ ಸೇರಿದ್ದು ಎಂದು ಹೇಳುತ್ತಾರೆ. ನನ್ನ ಕ್ಷೇತ್ರದ ಬಗ್ಗೆ ಅದರಲ್ಲಿಯೂ ಮುಖ್ಯವಾಗಿ ಬೆಂಗಳೂರು ಜಿಲ್ಲೆಯ ಬಗ್ಗೆ ಹೇಳಬೇಕೆಂದರೆ ಬಹುಭಾಗದ ಶಾಲೆಗಳಿಗೆ ಸುಣ್ಣಬಣ್ಣವಾಗಿಲ್ಲ; ಸರ್ಜಾಪುರದಲ್ಲಿರುವ ಶಾಲಾ ಕಟ್ಟಡ ರಿಪೇರಿಯಿಲ್ಲದೆ ಬಿದ್ದು ಹೋಯಿತು; ಇದರಿಂದ ೨–೩ ಮಕ್ಕಳು ಸಾಯುವಂತಹ ಪ್ರಸಂಗ ಬಂತು; ಇನ್ನು ಮುಂದೆ ಇದಕ್ಕೆ ಅವಕಾಶ ಕೊಡದೆ ಈ ರಿಪೇರಿ ಕೆಲಸವನ್ನು ಸಹ ವಿದ್ಯಾ ಇಲಾಖೆಯವರೇ ವಹಿಸಿಕೊಂಡು ಕಾಲಕ್ಕೆ ಸರಿಯಾಗಿ ವಿದ್ಯಾ ಇಲಾಖೆಯ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ನಡೆಸಬೇಕೆಂದು ಸವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ತಾವು ಹೇಳಿ;

ಶ್ರೀ ಎಂ. ಬಿ. ರಾಮಸ್ವಾಮಿ.—ಅಲ್ಲಿ ಕೆಲವು ಲೋಪದೋಷಗಳಿರಬಹುದು; ಅದರ ಬಗ್ಗೆ ನಾನು ಈಗ ಟೀಕೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ; ಇಂದು ಸರ್ಕಾರದವರು ಹರಿಜನ ಮತ್ತು ಗಿರಿಜನರ ಕಲ್ಯಾಣಕ್ಕೋಸ್ಕರ, ಬಡವರ ಮತ್ತು ದೀನದಲಿತರ ಕಲ್ಯಾಣಕ್ಕೋಸ್ಕರ ಕೆಲವೊಂದು ಕಾರ್ಯಕ್ರಮಗಳನ್ನು ಕೈಕೊಂಡಿದ್ದಾರೆ. ಇದನ್ನು ಜಾಗ್ರತೆ ಕೈಕೊಂಡರೆ ನೊಂದಿರುವ ಜನರಿಗೆ ಲಾಭವಾಗುತ್ತದೆ. ಈ ಜನರಿಗೆ ನಾನಾ ರೂಪದಲ್ಲಿ ಸರ್ಕಾರದವರು ಕೊಡುತ್ತಿರುವ ಸಹಾಯಗಳನ್ನು ಬೇರೆಯವರು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಅಂತಹವರ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ಕೈಕೊಳ್ಳಬೇಕು. ನಮ್ಮ ಹರಿಜನ ಸೋದರರೇ ಕೆಲವರು ಈ ರೀತಿ ಮಾಡುತ್ತಿದ್ದಾರೆ ಇಂತಹವರ ಮುಖಂಡತ್ವವನ್ನು ಕಡಿಮೆ ಮಾಡಬೇಕು. ಇಂದು ಹರಿಜನರ ಏಳಿಗೆಗಾಗಿ ಮಾನ್ಯ ಬಸವಲಿಂಗಪ್ಪನವರು, ಮಾನ್ಯ ಮಲ್ಲಿಕಾರ್ಜುನಸ್ವಾಮಿಯವರು ಮಾನ್ಯ ರಂಗನಾಥ್ ಅವರು ದುಡಿಯುತ್ತಿದ್ದಾರೆ. ಈ ನೊಂದ ಜನರಿಗೆ ಸಹಾಯ ಮಾಡಬೇಕು. ಅವರ ಒಂದು ಏಳಿಗೆಗಾಗಿ ಕೆಲಸ ಮಾಡಬೇಕೆಂದು ಅವರು ಹೊರಟಿರುವಾಗ, ಅವರಲ್ಲಿಯೇ ಎರಡು ಪಂಗಡಗಳನ್ನಾಗಿ ಮಾಡುವುದಕ್ಕೆ ಕೆಲವರು ಹೊರಟಿರುವುದು ಸರಿಯಾದುದಲ್ಲ; ಈ ಅಲ್ಪ ಸಂಖ್ಯಾತರ ಬಗ್ಗೆ ನಮ್ಮ ಸರ್ಕಾರದವರು ಹೆಚ್ಚಿನ ಪ್ರಗತಿದಾಯಕವಾದಂಥ ಯೋಜನೆಗಳನ್ನು ಹಾಕಿಕೊಂಡಿರುವಾಗ ಅವುಗಳನ್ನು ಕಾರ್ಯಗತ ಮಾಡಲು ಎಲ್ಲರೂ ಒಮ್ಮನಸ್ಸಿನಿಂದ ದುಡಿಯಬೇಕಾಗಿದೆಯೇ ಹೊರತು ಅದನ್ನೆಲ್ಲಾ ಏರುಪೇರು ಮಾಡುವುದರ ಮೂಲಕ ಅವರನ್ನು ಬೇರೆ ದಾರಿಯಲ್ಲಿ ತೆಗೆದುಕೊಂಡು ಹೋಗುವುದು ಸರಿಯಲ್ಲವೆಂದು ಹೇಳುತ್ತೇನೆ. ಮುಖ್ಯವಾಗಿ ಈ ಒಂದು ಸಮಾಜದಲ್ಲಿ ಈ ಅಲ್ಪಸಂಖ್ಯಾತರಿಗೂ ಒಂದು ನ್ಯಾಯವಾದ ಪಾಲು ಸಿಕ್ಕಿ, ಅದನ್ನು ಅವರೇ ಅನುಭವಿಸುವುದಕ್ಕೆ ಎಲ್ಲರೂ ಸಹಾಯ ಮಾಡಬೇಕು ಮತ್ತು ಅದಕ್ಕೆ ತಾವೆಲ್ಲರೂ ಸಹಕಾರ ನೀಡಬೇಕೆಂದು ಹೇಳಿಕೊಂಡು, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SRI D. B. KALMANKAR (Afzalpur) —Mr. Deputy Speaker, Sir with rapt attention I heard some of the speeches made by some hon. Members on the opposite side. I now remember the statement made by Sri Ashok Mehta, who unfortunately went to the opposite camp *i. e.*, Congress Organisation after the split in the Congress. He made a statement that Smt. Indira Gandhi is introducing in this country the politics of the masses I remember the situation in the country prior to the split. At that time, the situation was very turbulent; so may obstacles, and hindrances were brought in the implementation of certain basic policies declared by the Congress on many occasions. Why I have quoted Mr. Ashok Mehta's particular statement in this context is to show now the mind of some of the prominent people, the so-called socialists and some other people who are supposed to be radicals are working.

SRI B. B. SAYANAK.—Once you were also a prajasamajavadi.

SRI D. B. KALMANKAR.—I will tell you, don't worry. They fear that Smt. Indira Gandhi is bringing the politics to the masses. That means they are afraid of the changes that are going to take place in this country, because those changes are not going to help a particular section of the society, which we call by various names as vested interests, reactionaries, communalists and the fascists. The changes that are going to come will help the common man only. Unfortunately, all these years what has happened in this country was, as my hon. Friend Mr. Hegde has said, that a small percentage of people in the name of democracy were controlling the political apparatus in this country.

They wanted that the fruits of labour of the masses-the weaker sections and other unrepresented people-should go to that particular class and that was the reason why that particular expression was made by Mr. Ashok Mehta. They were arraid that Mrs. Indira Gandhi is bringing an awakening in the masses of the country. I say Sir, that democracy began to run in the true spirit only when Mrs. Gandhi came on the scene of the country. The General Elections of 1971 to Parltament and then of 1972 to various Assemblies are indicative of this fact. The masses became conscious of their rights, of their franchise-of their vote-and the credit for this goes to Mrs. Indira Gandhi for having brought about that awakening in the teeming millions of this country. Thereafter, as you know very well, Sir, various measures have been taken in the interest of the masses. Even the people who represented the vested interests and the reactionaries, swore by democracy, but only a formal type of democracy. They did not want democracy to be brought in this country in its real spirit. Democracy is a means to bring about socialistic change

in this country. But, they never thought of that democracy. As long as the apparatus of democracy contained limited persons so long they were champions of democracy but when democracy became a potential instrument of socialistic change in this country, then they started opposing the apparatus of democracy. They started not only abusing Mrs. Indira Gandhi but all other people who thought likewise and they said that socialistic change has to be prevented from coming in this country and this prevention was in the interests of the masses. They gave the slogan that Mrs. Indira Gandhi should be driven out of power. They gave the slogan that Mrs. Indira Gandhi should be deposed-INDIRA HATAO. Saying this, they worked consistently for it and when they found that political apparatus was not available to them, when they failed to come to power, they went underground and started various conspiracies to remove Mrs. Indira Gandhi and her Government.

Now about Mr. Jaya Prakash Narayan, I have great respect for Mr. Jaya prakash Narayan. He has done a lot of service in the independence struggle for the country but what I don't like of Mr. Jaya prakash Narayan is that when he lost the elections in 1952, he became an escapist. He left the poltical field. Then he said: I want to devote the rest of my life for Sarvodaya activities and he went into the oblivion from the political field for a long period. I had no grouse if he went in to the oblivion, in order to build an alternative party in this country. He ought to have been there as the head of an alternative party in this country and if he had done so, democracy would have been every effective. Unfortunately, he went out and again, he came at a time when, as a matter of fact, he should have congratulated Mrs. Indira Gandhi and her Government for having taken up so many steps in the interests of the weaker sections of the society and the down-trodden-when she had taken up so many progressive measures-he instead of doing so, became an instrument in the hands of the reactionaries. He played into the hands of all those who failed to come to power like Sarvashri Morarji Desai, Atulya Ghosh, S. K. Patil and S. Nijalingappa. His opposition was just like that of a Shikandi. They had no moral guts and courage to go before the people as against Mrs. Indira Gandhi. Unfortunately, some of our friends, who subscribe to socialistic thinking, they also fell a prey to the game of the reactionary forces and they came together to form in to an unholy alliance. The Jan Sangh joined and the R. S. S. also joined and also the Ananda Margis. You know very well, Sir, the fate that befell our leader Sri M. N. Mishra at the hands of the Ananda Margi people. At a time when Mrs. Indira Gandhi was going on with this programme, I thought that Sri Jaya prakash Narayan, instead of becoming an

instrument and tool in the hands of these vested interests, should have wisely advised them to form a party of certain principles and programmes in order that parliamentary democracy in this country could function very well and the faith of people in it, remained undisturbed. But, unfortunately, he did not do so. He also became a party to the conspiracy and, whatever moral strength he had, he lost, because, the people behind him were such. They are also supported by some of the foreign elements like the C. I. A. Some foreign countries were jealous of the popularity of Mrs. Indira Gandhi because she got on the scene of world map, after the victory of Bangla Desh and subsequent things that happened. Some of the super powers like America were jealous ; they wanted that something should be done in this country, as they did in Bangla Desh, where the popular leader Sheik Mujibur Rehman was assasinated ; not only he, but his colleagues, and his family including small boys. How all that happened, as you know very well, Sir, is not concealed from the people. of this country. Mrs. Indira Gandhi had been warning the people of this country that there is danger to our freedom, that there is danger to our socialist set up, that there is danger from a particular section, who are jealous of India's progress. As a matter of fact these countries like U. S. A., Britain and some other socialistic countries should have congratulated Smt. Indira Gandhi for having taken this big populous country towards progress. We are progressing rapidly. This is a biggest democracy in the world and they should have their sympathy for us. They have been democratic at home and imperialists abroad. In relation with their policy, they always side such contries like Pakistan and China.

4-30 P M.

SRI KONANDUR LINGAPPA.—What about Russia

SRI D. B. KALMANKAR.—Russia should be congratulated for having stood by us during our critical time. Having seen these things these foreign countries started creating trouble in the sub-continent, the latest example being Bangla Desh. In order to advance the interest of the country Smt. Indira Gandhi declared emergency. We do not want to be in power perpetually. She wants democracy is retained in the country. She wants to build the ecnomy of the country on sound basis. She wants the country to be strong. She wants to build a socioeconomic society. She wants the democracy to take its roots in the rural areas. In the interest of the preservation of democracy and in the interest of giving socioconomic society for the vast population of this country, the emergency was brought. with that object in view 20 point economic programme was brought. Some of my friends specially Sri Konandur Lingappa have said most of

the points enumerated in the 20 point programme has been urged by them to be brought into force. I will ask them a questien whether those points have been implemented by their party in power in some of the States. No. They could not do it. All those points have been included in our new economic programme and they are being implemented with all dextirity and courage. Take for example the Land Reforms. Sri Jattis Land Reforms the then Chief Minister, could not be implemented It was passed during 1961 and it was kept in cold storage. Nothing had happenend and no implementation took place. To-day all the members of this house are also the party for the implementation of the programme. We have been able to associate our Legislators in that programme and to-day the implementation of the Land Reforms is going on. This programme is sufficient to justify our existence to show that democracy is functioning. There were lakhs of families without sites. Now they have property of their own. The credit goes to our leader Sri Devaraj Urs and Smt. Indira Gandhi. They have distributed sites to nearly 5 lakhs families,and only 2 lakhs are to be given the sites. They will also be given early. Whatever has been done by the party in power has been done in the interest of the community. we are very proud of our achievements. Take for example the Rural Housing Programme taken up by the previous Government. You will find the houses constructed during those years are ruined and the money has been sqandered. I am very happy to say that the Housing programme is implemented successfully in this State It is the programme of the party in power and it is being implemented and has been implemented successfully. About the distribution programme of foodgrains, it has been effectively done. It is working very satisfactorily in the State and throughout the country. Many other measures for the development of weaker sections have been taken. The field of Co-operative movement has been the monopoly of the vested interest. Nobody can come in the way of a citizen becoming a member of a Society for getting the benefits. So many such other measures in the Co-operative field have been taken to improve its working. In the interest of the country and in the interest of the people, such measures have been taken and you must welcome them. The Leader of the Opposition on the other day was telling the 20 point economic programme is Smt. Indira Gandhi's programme to improve the image of her party to be in power perpetually. I will assure the Hon. Members of the opposition that it is a programme for economic improvement of poorer sections and the country as a whole. On the other hand they should welcome it and co operate in the implementation of the programme. The people are realising what is about the bonded labour and what is about the rural indebtedness.

Bonded labour has been abolished and the labour has become free, The credit taken by the poor people whose income is below Rs. 2,400 has been writen off. Are they not good measures If a poor man had taken Rs. 100/- from a creditor he had to pay Rs. 100/- as inberest. For a bag of jowar as credit, one used to pay one bag of jowar as interest. All those things have gone. The people are very happy that they have been liberated from the clutches of such people. We are happy that indebtedness is removed. Everybody feel proud of the leadership of Sri D. Devaraj Urs, under whom such measures have been taken. This is how the democracy should function. The democracy is not for some vested interests, but it is for all the people in the country. Democracy is not for block marketeers and smugglers, but democracy is for the Deena Dalathi. Most of the measures taken now for social and economic transformation are in the interest of poor people. Some of the rights of some sections of people have been curtailed. Take for example the smugglers and black marketeers. Their property has been confiscated. The activities of these people and the activities of the corrupt people have come to an end An atmosphere has been created in the country where every evil doer is thinking twice before he does anything against the interest of common man or the country. The intention of the emergency is to put down such elements and serve the cause of the people. I know we have yet to achieve much and for that constructive approach and constructive attitude are required. That is why the Governor has stated in the first para of his address as follows:—

> "It is in a spirit of humility and dedication that I have assumed this new office. It is my earnest hope that we shall all work together in a spirit of co-operation and harmony and thus make our contribution to the progress and advancement of Karnataka.
>
> Last year, when my predecessor, Shri Mohanal Sukhadia, addressed you, he expressed the hope that there would be a 'change for the better' during 1975. This has come about chiefly due to the dynamic leadership provided by our Prime Minister in declaring state of national emergency and announcing the twenty-point economic programme."

It is this that is very important. There has been a change and the people are appreciating our efforts. As Shri Vino babhave has stated this is an era of Anusbashana. So, democracy is not a licence; it does not mean that it should generate into a licence and every man can speak anything he likes, do anything he likes and go on destroying the property and institutions of this country. Only a few people shouting on the top of the house are not going to alter the situation.

What happened in Gujarat? What happened in Bihar? what is the contribution of the Opposition parties? If you feel that there has been corruption, mal-administration and mismanagement, people are there to judge their conscience and all their rights. If they feel that the party in power has indulged in corruption, maladministration and mismanagement, they will definitely remove the party in power. But what is the alternative that you have created for bringing up an alternative party in the country. After the general elections of 1967 some hetrogenious parties united together for powers. But what was the result? In many States they could not rule. There was lot of corruption and mismanagement. So, a licence was there for us that if this Country had to be saved from foreign aggression and if orderly progress has to take place, then it is the primary duty of the Congress party that it should hold the reigns and rule the country. It is the masses who have put the party in power. I still hope that the Opposition people could come forward to form an alternative party. I believe all right thinking people will join together on some programme in giving an alternative to the Congress party. Some opposition members stated that they subscribe to the 20 point programme. Did they do anything or do they speak a word about the weaker sections? Never. When the Prime Minister Smt. Indira Gandhi gave that programme there was no other go for them. She has taken a bold step.

SHRI KONANDUR LINGAPPA:—We are speaking about these programmes for the last 30 years. But the Prime Minister started telling about them very recently.

SHRI D. B. KALMANKAR:—I thing my friend Sri Konandur Lingappa might have faith in this programme. But making an impact on the people is also important. They cou'd not bring that confidence in the people That is why we insist that a Leadership of the type of Smt. Indira Gandhi has to be encouraged in this country so that people may be liberated from poverty, squalor and ignorance.

With these words, I thank the Deputy Speaker for having given me some time to have my say.

† ಶ್ರೀ ಎಂ. ವೆಂಕಟಲಿಂಗಯ್ಯ.—(ಕೃಷ್ಣರಾಜು) ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರು ಮಾಡಿರತಕ್ಕಂಥ ಭಾಷಣಕ್ಕೆ ವಂದನಾ ನಿರ್ಣಯವನ್ನು ನಾನು ವಿರೋಧಿಸುತ್ತಾ ಕೆಲವು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ಸ್ವಾಮಿ, ರಾಜ್ಯಪಾಲರ ಭಾಷಣದಲ್ಲಿ. ಈ ತುರ್ತು ಪರಿಸ್ಥಿತಿಯಿಂದ ಎಲ್ಲೆಲ್ಲಿ ನೋಡಿದರೂ, ಶಿಸ್ತು, ಅವರವರ ಕರ್ತವ್ಯಗಳನ್ನು ಅವರೇ ಮಾಡುತ್ತಿದ್ದಾರೆ. ಆಫೀಸ್‌ಗಳಲ್ಲೂ, ಕಾರ್ಖಾನೆಗಳಲ್ಲೂ. ಶಿಸ್ತಿನಿಂದ ಕೆಲಸ ಮಾಡುತ್ತಿದ್ದಾರೆ ಎನ್ನುವಂಥ ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಈ ಸಭೆಯಲ್ಲಿ ನೋಡುವುದಾದರೆ ಆಡಳಿತ ಪಕ್ಷದ ಕಡೆಯ ಸದಸ್ಯರುಗಳೇನಿದ್ದಾರೆ ಶಿಸ್ತು ಪರಿಪಾಲನೆ ಮಾಡುವ ಹಾಗೆ ಕಾಣುತ್ತಿಲ್ಲ. ಅವರೆಲ್ಲಾ ಇಲ್ಲಿ ಹಾಜರಾಗಿ ಶಿಸ್ತನ್ನು ಪರಿಪಾಲನೆ

ಮಾಡಬೇಕಾಗಿತ್ತು. ಅವರು ಹೇಳುವುದಕ್ಕೂ ಮಾಡುತ್ತಿರುವುದಕ್ಕೂ ಎಷ್ಟು ವ್ಯತ್ಯಾಸವಿದೆ ಎನ್ನುವುದೇ ಇಲ್ಲ ನಮಗೆ ಕಾಣುತ್ತದೆ. ಹಾಗೆಯೇ ಸಚಿವರುಗಳು ತಮ್ಮ ಪರ್ಮಿಷನ್‌ನನ್ನು ಏನಾದರೂ ತೆಗೆದುಕೊಂಡು ಹೋಗಿದ್ದಾರೆಯೇ ? ಇಲ್ಲಿ ಎಷ್ಟು ಜನ ಕಾರ್ಯಕ್ರಮದಲ್ಲಿ ಭಾಗ ವಹಿಸಬೇಕಾಗಿತ್ತೋ' ಅಷ್ಟು ಜನ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆಯೇ ? ಅಥವಾ ಸರ್ಕಾರದ ಅಧಿಕಾರಿಗಳೇನು ಇಲ್ಲಿ ಬಾಗವಹಿಸಬೇಕಾಗಿತ್ತೋ ಅಷ್ಟು ಜನ ಇಲ್ಲಿಗೆ ಬಂದು ಹಾಜರಾಗಿದ್ದಾರೋ ? ಎಂದು ನಾವು ನೋಡುವುದಾದರೆ; ಇಲ್ಲಿ ನಮಗೆ ಶಿಸ್ತನ್ನು ಪರಿಪಾಲಸುತ್ತಿರುವುದು ಕಾಣುತ್ತಿಲ್ಲ. ಇದು ಶಿಸ್ತಿನ ಯುಗವೆಂದು ನೀವೇ ದೇಶದ ಜನತೆಗೆ ಹೇಳುತ್ತೀರಿ. ಆದರೆ ನೀವು ಸರಿಯಾಗಿ ಶಿಸ್ತನ್ನು ಅನುರಿಸುತ್ತಿಲ್ಲ. ಇಲ್ಲಿ ನೀವು ಸರಿಯಾಗಿ ಶಿಸ್ತನ್ನು ಪರಿಪಾಲನೆ ಮಾಡುತ್ತಿಲ್ಲವೆಂದ. ನಾವು ಹೇಳಿದರೆ ಆರೋಪ ಮಾಡುತ್ತೀರಿ ಎಂದು ಹೇಳುತ್ತೀರಿ. ನಾವು ಇಲ್ಲಿ ಮಾತನಾಡತಕ್ಕಂಥದ್ದು ಜನಗಳಿಗೆ ಪತ್ರಿಕೆಗಳ ಮುಖಾಂತರ ತಿಳಿಯದ ಹಾಗೆ ಪೇಪರ್ ಸೆನ್ಸಾರ್ ಶಿಪ್ ಹಾಕಿ ಬಿಟ್ಟಿದ್ದೀರಿ. ನಾವು ನಿಮ್ಮ ವಿಷಯದಲ್ಲಿ ಜನಗಳಿಗೂ ತಿಳಿಸುವ ಹಾಗೆ ಇಲ್ಲ. ಹೋಗಲಿ ಶಿಸ್ತನ್ನು ಪರಿಪಾಲನೆ ಮಾಡುತ್ತಿದ್ದಾರೆಯೇ ಎಂದರೆ ಎಲ್ಲೂ ಇಲ್ಲ. ಈಗ ಕಚೇರಿಗಳಲ್ಲಿ ಏನು ಮಾಡುತ್ತಾರೆಂದರೆ, ಒಂದು ಟೇಬಲ್‌ನಿಂದ ಇನ್ನೊಂದು ಟೇಬಲ್ಲಿಗೆ ಕಾಗದ ಪತ್ರಗಳನ್ನು ಬರೀ ವರ್ಗಾವಣೆ ಮಾಡುತ್ತಿದ್ದಾರೆಯೇ ಹೊರತು ಯಾವುದೇ ವಿಧವಾದಂಥ ಕೆಲಸಕಾರ್ಯಗಳನ್ನು ಮಾಡುತ್ತಿಲ್ಲ. ನಿಜವಾಗಿಯೂ ಕೆಲಸ ಆಗದೆ ಕೇಸ್‌ಗಳು ಡಿಸ್‌ಪೋಜಲ್ ಆಗುತ್ತಿಲ್ಲ. ಜನತೆಯ ಏನೊಂದು ಸಮಸ್ಯೆಗಳು ಇವೆ ಅದು ತೀರ್ಮಾನವಾಗುತ್ತಿಲ್ಲ. ಇಲ್ಲಿ ಮಾತನಾಡಿದಂಥ ಸದಸ್ಯರುಗಳು ದುರ್ಬಲ ವರ್ಗದವರ ಬಗ್ಗೆ, ಹಿಂದುಳಿದವರ ಬಗ್ಗೆ, ಹರಿಜನರ ಬಗ್ಗೆ ಬಹುವಾಗಿ ಹೇಳುತ್ತಾರೆ. ಆದರೆ ಅವರ ಸಮಸ್ಯೆಗಳು ಪರಿಹಾರವಾಗುತ್ತಿದೆಯೇ ಎಂದು ನೋಡಿದರೆ ನಿಜವಾಗಿಯೂ ಯಾವಯಾವ ಸಮಸ್ಯೆಗಳೂ ಪರಿಹಾರವಾಗುತ್ತಿಲ್ಲ. ಮಾನ್ಯ ಸ್ನೇಹಿತರುಗಳು ದೊಡ್ಡದೊಡ್ಡ ವಿಷಯಗಳ ಬಗ್ಗೆ ಭಾಷಣ ಮಾಡಿದ್ದಾರೆ. ಆದುದರಿಂದ ನಾನು ಸಣ್ಣಸಣ್ಣ ಉದಾಹರಣೆಗಳನ್ನು ಮಾತ್ರ ಹೇಳುತ್ತೇನೆ. ನನ್ನ ಹತ್ತಿರ ಬಡ ಜನರು ಬಂದು ಅವರ ಕಷ್ಟಸುಖಗಳನ್ನು ಹೇಳಿಕೊಳ್ಳುತ್ತಿರುತ್ತಾರೆ ಅವರ ಬಗ್ಗೆ ಒಂದೆರಡು ವಿಷಯಗಳನ್ನು ಮಾತ್ರ ಹೇಳುತ್ತೇನೆ. ಈಗ ಹಳ್ಳಿಯ ಒಬ್ಬ ಹೆಣ್ಣುಮಕ್ಕಳು ಲ್ಯಾಂಡ್ ಮಾರ್ಟಗೇಜ್ ಬ್ಯಾಂಕಿನಲ್ಲಿ ಸಾಲ ತೆಗೆದುಕೊಳ್ಳಬೇಕೆಂದರೆ, ಖಾತೆ ಚೇಂಜ್ ಆಗಿಲ್ಲ ಚೇಂಜ್ ಮಾಡಿಸಿಕೊಂಡು ಬನ್ನಿ ಎಂದು ಹೇಳುತ್ತಾರೆ. ಆಗ ತಾಲ್ಲೂಕ್ ಆಫೀಸಿಗೆ ಹೋಗಿ ಅರ್ಜಿ ಹಾಕಿದರೆ ಅದಕ್ಕೆ ಅವರು ದುಡ್ಡು ಕೊಡದೇನೆ ಆ ಪೇಪರ್ ಮೂವ್ ಆಗುವುದೇ ಇಲ್ಲ ದುಡ್ಡು ಕೊಟ್ಟರೇನೇ ಖಾತೆ ಚೇಂಜ್ ಮಾಡಿಕೊಡುತ್ತೇವೆಂದು ಡಿಮ್ಯಾಂಡ್ ಮಾಡುತ್ತಾರೆ. ವಿಲೇಜ್ ಅಕೌಂಟೆಂಟ್, ರೆವಿನ್ಯೂ ಇನ್ಸ್‌ಪೆಕ್ಟರವರೂ ಮತ್ತು ತಹಸೀಲ್ದಾರ್‌ರವರುಗಳಿಗೆ ದುಡ್ಡು ಕೊಡದೇ ಪೇಪರ್‌ಗಳು ಮೂವೇ ಆಗುವುದಿಲ್ಲ. ಏನಾದರೂ ಒಂದು ಕಾರಣವನ್ನು ಹೇಳುತ್ತಾರೆ. ದುಡ್ಡು ಕೊಡದಿದ್ದರೆ 6 ತಿಂಗಳು ವರ್ಷಗಟ್ಟಲೆಯಾದರೂ ಅವರ ಕೆಲಸವಾಗುವುದಿಲ್ಲ. ಈ ರೀತಿ ಅಲ್ಲಿ ನಡೆಯುತ್ತಿದೆ. ಇದನ್ನು ನಾನು ಬೇರೆ ಯಾವ ಕೇಸಿನಲ್ಲೂ ಹೇಳುತ್ತಿಲ್ಲ. ಒಬ್ಬ ಹರಿಜನ ಮಹಿಳೆ ಖಾತೆ ಚೇಂಜ್ ಮಾಡಿಕೊಡಲು ಅರ್ಜಿ ಹಾಕಿ ಒಂದು ಕಚೇರಿಯಿಂದ ಒಂದು ಕಚೇರಿಗೆ ಓಡಾಡಿ ಇನ್ನೂ ಕೆಲಸ ಆಗದೇ ಕಷ್ಟದಲ್ಲಿರತಕ್ಕಂಥವರ ಬಗ್ಗೆ ನಾನು ಹೇಳಿದ್ದು. ಇಂಥ ಉದಾಹರಣೆಗಳನ್ನು ಬೇಕಾದಷ್ಟು ಕೊಡಬಹುದು.

ಇನ್ನು ವೃದ್ಧಾಪ್ಯ ವೇತನ ಕೊಡುತ್ತಿದ್ದೇವೆಂದು ಹೇಳುತ್ತಿದ್ದೀರಿ . ಆದರೆ ಇವತ್ತಿನ ದಿವಸ ದುಡ್ಡು ಕೊಡದೇ ಕೆಲಸವೇ ಆಗುವುದಿಲ್ಲ ಅದು ಮಾಮೂಲು ಆಗಿಬಿಟ್ಟಿದೆ. ಈಗಲೂ ಕೂಡ ಎಷ್ಟೋ ಹಳೆಯ ಪಿರಿಯಡ್‌ನ ಅಪ್ಲಿಕೇಷನ್‌ಗಳು ಹಾಗೆಯೇ ಬಿದ್ದಿವೆ. ಇವತ್ತಿನ ದಿವಸ ದುಡ್ಡು ಕೊಟ್ಟರೆ 8—10 ದಿವಸಗಳಲ್ಲಿಯೇ ಕೆಲಸವಾಗುತ್ತದೆ. ಇಲ್ಲದಿದ್ದರೆ ಇಲ್ಲ. ದುಡ್ಡು ಕೊಡದಿದ್ದರೆ ನಿಮ್ಮ ಅಪ್ಲಿಕೇಷನ್ ಕಳೆದುಹೋಗಿದೆ ಬೇರೆ ಅಪ್ಲಿಕೇಷನ್ ಕೊಡಿ ಎಂದು ಕೆಲವು ತಿಂಗಳ ನಂತರ ಹೇಳುತ್ತಾರೆ. ಆಗ ಅವರು ಪುನಃ ವೃದ್ಧಾಪ್ಯ ವೇತನದ ಹೊಸ ಅಪ್ಲಿಕೇಷನ್‌ಗೆ ನಮ್ಮ ಹತ್ತಿರ ಸೈನಿಗೋಸ್ಕರ ಬರುತ್ತಾರೆ. ಆ ಮೇಲೆ ಅವರು ಅದನ್ನು ತೆಗೆದುಕೊಂಡು ಹೋಗಿ ಕೊಟ್ಟರೆ ಅವರ ಕೇಸು 1 ವರ್ಷವಲ್ಲ 2 ವರ್ಷವಾದರೂ ಅವರಿಗೆ ಪೆನ್‌ಷನ್ ಸಿಗುವುದಿಲ್ಲ. ಈ ರೀತಿಯ ತೊಂದರೆಗಳಾಗುತ್ತಿವೆ.

ಇನ್ನೊಂದು ವಿಷಯವನ್ನು ಹೇಳುವುದಾದರೆ ಈ ಆಸ್ಪತ್ರೆಗಳಲ್ಲಿ ಏನಾಗುತ್ತಿದೆಯೆಂದರೆ ದುಡ್ಡು ಕೊಡದಲೇ ಇದ್ದರೆ ಅವರು ಸರಿಯಾಗಿ ನೋಡಿಕೊಳ್ಳುವುದೇ ಇಲ್ಲ. ನೀವು ಇಲ್ಲಿ ದುರ್ಬಲ ವರ್ಗದವರು ದುರ್ಬಲ ವರ್ಗದವರು ಎಂದು ಕೇವಲ ಭಾಷಣ ಮಾಡಿದರೆ ಆಗುವುದಿಲ್ಲ. ಇವತ್ತಿನ ದಿವಸ ದುರ್ಬಲ ವರ್ಗದ ಒಬ್ಬ ಹೆಂಗಸಿಗೆ ಆಗಿರತಕ್ಕಂಥ ತೊಂದರೆಯ ಬಗ್ಗೆ ಹೇಳುವುದಾದರೆ ಮೈಸೂರಿನಲ್ಲಿರತಕ್ಕಂಥ ಚೆಲುವಾಂಬ ಆಸ್ಪತ್ರೆಗೆ ಒಬ್ಬ ಮಹಿಳಾ ರೋಗಿ ಆಪರೇಷನ್ ಗೋಸ್ಕರ ಹೋದಳು. ಆಕೆಗೆ ಆಪರೇಷನ್ ಮಾಡಬೇಕಾದಾಗ ಆಕೆಗೆ ರಕ್ತವನ್ನು ಕೊಡಬೇಕಾಗಿತ್ತು. ಇಷ್ಟು ದುಡ್ಡು ಕೊಟ್ಟರೆ ಇಷ್ಟು ರಕ್ತವನ್ನು ಕೊಡುತ್ತೇವೆ ಇಲ್ಲದಿದ್ದರೆ ಇಲ್ಲವೆಂದು ಹೇಳಿದರು. ಕೊನೆಗೆ ಆಕೆ ದುಡ್ಡು ಕೊಟ್ಟ ಮೇಲೆ ರಕ್ತವನ್ನು ಕೊಟ್ಟರು,

ಒಂದು ಬಾಟಲು ರಕ್ತ ಕೊಟ್ಟನಂತರ, ಅವರು ಇನ್ನು ಎರಡು ಬಾಟಲು ರಕ್ತ ಕೊಡಬೇಕಾಗುತ್ತದೆ. ಅದಕ್ಕೆ ನೂರು ಇನ್ನೂರು ರೂಪಾಯಿವರೆಗೆ ಆಗುತ್ತದೆ ಅದನ್ನು ಕೊಟ್ಟರೆ ತಂದು ಹಾಕುತ್ತೇವೆ ಎಂದು ಹೇಳಿದರಂತೆ, ಏಕೆಂದರೆ ಅದು ಬಹಳ ಸೀರಿಯಸ್ ಆದ ಕಾಯಿಲೆ ಆದ್ದರಿಂದ ಅಲ್ಲಿ ಅಟೆಂಡ್ ಮಾಡದೇ ಹೋದರೆ ಪ್ರಾಣ ಹೋಗುವ ಪರಿಸ್ಥಿತಿ ಬರಬಹುದು ಎಂದು ಕೊನೆಗೆ ನನ್ನ ಹತ್ತಿರ ಬಂದು ದೇಳಿದರು, ಅದಕ್ಕೆ ನಾನು ಡಾಕ್ಟರಿಗೆ ಬ್ಲಡ್ ಕೊಟ್ಟು ಸಹಾಯ ಮಾಡಲಿಕ್ಕೆ ಹೇಳಿದೆ. ಆದರೆ ಈ ವಿಷಯ ಕಡೆಗೆ ಏನಾಯಿತು ಎಂದರೆ ನೀವು ಎಂ. ಎಲ್. ಎ. ಹತ್ತಿರ ಹೋಗಿ ಹೇಳಿದ್ದೀರಾ ನಮ್ಮಲ್ಲಿ ಬ್ಲಡ್ ಸಿಕ್ಕುವುದಿಲ್ಲ ಎನ್ನುವ ಮಟ್ಟಕ್ಕೆ ಬಂತು ನಂತರ ರೋಗಿಯ ಕಡೆಯವರು ದುಡ್ಡು ಕೊಡಲು ಚೈತನ್ಯವಿಲ್ಲದೆ, ರೋಗಿಯನ್ನು ಡಿಸ್‌ಚಾರ್ಜ್ ಮಾಡಿಸಿಕೊಂಡು ಮನೆಗೆ ಕರೆದುಕೊಂಡು ಹೋದರು.

MR. DEPUTY SPEAKER.—If the honb'e, Member had taken little pain to write a letter to the persons concerned he would have rendered a great service to the people.

ಶ್ರೀ ಎಂ. ವೆಂಕಟಲಿಂಗಯ್ಯ.—ಅಧ್ಯಕ್ಷರೇ, ಪ್ರಕರಣಗಳು ನನ್ನಲ್ಲಿ ಇವೆ ಅವುಗಳನ್ನು ಕೊಟ್ಟರೆ ತಾವು ಸೀರಿಯಸ್ ಆಗಿ ಕ್ರಮತೆಗೆದುಕೊಳ್ಳುತ್ತೀರಾ? ಮತ್ತೊಂದು ಉದಾಹರಣೆ ಹೇಳುವುದಾದರೆ ನಮ್ಮ ಮೈಸೂರು ಸಿಟಿ ಮುನಿಸಿಪಾಲಿಟಿಯಲ್ಲಿ ಏನಾಯಿತು ಎಂದರೆ ನಾಲ್ಕನೇ ದರ್ಜೆ ನೌಕರನಿಗೆ ಸರಕಾರದಿಂದ ಒಂದು ವರ್ಷದ ಹಿಂದೆ ಒಂದು ಸೈಟು ಕೊಟ್ಟಿದ್ದರು, ನಂತರ ಅವನು ಲೈಸೆನ್ಸ್ ಬಗ್ಗೆ ಅರ್ಜಿಹಾಕಿದ್ದಕ್ಕೆ ಅಲ್ಲಿದ್ದ ಒಬ್ಬ ಕ್ಲಾರ್ಕ್ ಏನಯ್ಯಾ ಇಷ್ಟು ಸುಲಭವಾಗಿ ಒಂದು ಸೈಟು ತೆಗೆದುಕೊಂಡಿದ್ದೀಯಾ, ಈಗ ಆ ಸೈಟಿಗೆ ಎಷ್ಟು ದುಡ್ಡು ಕೊಟ್ಟಿದ್ದೀಯೋ ಅಷ್ಟು ದುಡ್ಡು ನನಗೆ ಕೊಟ್ಟರೆ ನಾನು ಲೈಸೆನ್ಸ್ ಮಾಡಿಸಿಕೊಡುತ್ತೇನೆ ಎಂದು ಹೇಳಿದನಂತೆ. ಕೊನೆಗೆ ಏನಾಯಿತು ಅಂದರೆ ಅವನು ದುಡ್ಡು ಕೊಡಲಲ್ಲ, ದುಡ್ಡು ಕೊಡಲಿಲ್ಲ ಅನ್ನತಕ್ಕ ಕಾರಣದ ಮೇಲೆ ಬೇರೆ ನಂಬರು ಸೈಟು ಕೊಟ್ಟಿದ್ದಾರೆ ಎಂದು ಬರೆದರಂತೆ. ಆಗ ಅರ್ಜಿದಾರ ಬಳಿ ಬಂದು ಈ ರೀತಿ ನಡೆದ ಕತೆಯನ್ನು ತಿಳಿಸಿದ, ನಂತರ ನಾನು ಅತನ ಬಳಿ ಇರತಕ್ಕ ರೆಕಾರ್ಡ್ಸ್ ಎಲ್ಲಾ ಪಡೆದುಕೊಂಡು ನೋಡಿದರೆ ಎಲ್ಲವೂ ಸರಿಯಾಗಿತ್ತು. ಎಲ್ಲವೂ ಸರಿಯಾಗಿದ್ದರೂ ಏತಕ್ಕೆ ಲೈಸೆನ್ಸ್ ಕೊಡಲಲ್ಲ ಎಂದು ನಾನು ಮುನಿಸಿಪಲ್ ಕಮಿಷನರ್‌ರಿಗೆ ಲೆಟರ್ ಬರೆದು ಕಳುಹಿಸಿದೆ. ಏಕೆಂದರೆ ಇದು ಎಲ್ಲಾ ನಡೆದದ್ದು ರೆವಿನ್ಯೂ ಅಧಿಕಾರಿಗಳ ಮಟ್ಟದಲ್ಲಿ ಒಂದು ವರ್ಷದ ನಂತರ ನಾನು ಕಾಗದ ಬರೆದ ಮೇಲೆ ಅದು ಸರಿಯಾಯಿತು ಇದನ್ನೆಲ್ಲಾ ಕೇಳುವವರು ಯಾರು ಎಂದು ಈ ವಿಷಯ ಹೇಳುತ್ತಿದ್ದೇನೆ. ಇದು ದುರ್ಬಲ ವರ್ಗದವರಿಗೆ ಆಗುತ್ತಿರುವ ಗತಿ.

ಇನ್ನು ಪೋಲೀಸ್ ಇಲಾಖೆಯ ವಿಷಯವಾಗಿ ಹೇಳುವುದಾದರೆ ಸಣ್ಣ ಸಣ್ಣ ಜನಗಳಿಗೆ ಎಲ್ಲಾ ತೊಂದರೆಯಾಗುತ್ತಾ ಇದೆ. ಇವತ್ತಿನ ದಿವಸ ಪೋಲೀಸ್ ಸ್ಟೇಷನ್ನಿಗೆ ಯಾರಾದರೂ ಕಂಪ್ಲೇಂಟ್ ಕೊಡುವುದಕ್ಕೆ ಹೋದರೆ ಅವರನ್ನೇ ಹಿಡಿದುಕೊಂಡು ಪೋಲೀಸ್ ಸ್ಟೇಷನ್ನಿನಲ್ಲಿ ಹಾಕುತ್ತಾರೆ, ಮೈಸೂರು ಸಿಟಿ ನಜರ್ ಬಾದ್ ಪೋಲೀಸ್ ಸ್ಟೇಷನ್ನಿಗೆ ಒಬ್ಬಾಕೆ ಹೋಗಿ ನಮ್ಮ ಮನೆಗೆ ಪಕ್ಕದ ಮನೆಯಿಂದ ಹೊಗೆ ಬರುತ್ತಿದೆ, ಎಂದು ಕಂಪ್ಲೇಂಟ್ ಮಾಡಲು ಹೋಗಿದ್ದಕ್ಕೆ ನೀನು ಪೋಲೀಸ್ ಸ್ಟೇಷನ್ನಲ್ಲೇ ಇರಬೇಕು ಎಂದು ಕಂಪ್ಲೇಂಟ್ ಕೊಡಲು ಹೋದವರನ್ನೇ ಎರಡು ದಿವಸ ಪೋಲೀಸ್ ಸ್ಟೇಷನ್ನಲ್ಲೇ ಇಟ್ಟಿದ್ದರಂತೆ ಈ ರೀತಿ ಕಿರುಕುಳ ನಡೆಯುತ್ತಿದೆ. ಅನೇಕ ಮುನಿಸಿಪಾಲಿಟಿಗಳಲ್ಲಿ

ಎರೆಕ್ಟೆಡ್ ಬಾಡಿ ಇಲ್ಲ, ಎಲ್ಲಾ ತಮ್ಮ ಸರ್ಕಾರದ ಅಡ್ಮಿನಿಸ್ಟ್ರೇಟರ್ಸ್ ಇರುವುದು ಅಲ್ಲಿ ತುಂಬಾ ಕಿರುಕುಳ ನಡೆಯುತ್ತಿದೆ. ಆದ್ದರಿಂದ ಇದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಇನ್ನೂ ದುರ್ಬಲ ವರ್ಗದ ಋಣ ಪರಿಹಾರ ಮಸೂದೆ ಬಗ್ಗೆ ಹೇಳುವುದಾದರೆ ಈ ಮಸೂದೆ ತಂದಿರುವುದು ನಿಜವಾಗಿಯೂ ಬಹಳ ಒಳ್ಳೆಯದು, ಈಗ ನೀವು ಕಾನೂನು ತಂದ ತಕ್ಷಣ ಏನಾಯಿತು ಎಂದರೆ ಮನೆಯಲ್ಲಿ ಯಾರಾದರೂ ಒಬ್ಬರಿಗೆ, ಸೀರಿಯಸ್ ಆದರೆ ಅಥವಾ ಯಾರಾದರೂ ಸತರೆ 10-20 ರೂಪಾಯಿ ಎಲ್ಲಾದರೂ ಸಾಲ ತರುತ್ತಿದ್ದರು, ಈಗ 2400 ರೂ. ಒಳಗೆ ವರಮಾನ ಇರತಕ್ಕವರಿಗೆ ಕೊಟ್ಟರೆ ಸಾಲ ವಜಾ ಆಗುತ್ತದೆ ಎನ್ನುವುದು ಬಂದ ಮೇಲೆ ಅವರಿಗೆ ಬಹಳ ತೊಂದರೆಯಾಗಿದೆ.

ಶ್ರೀ ಕೆ. ಬಿ. ಶಿವಯ್ಯ.—ಈಗ ಜೀತಾ ಪದ್ಧತಿ ಜಾರಿಗೆ ತಂದ ಮೇಲೆ ಜನರಿಗೆ ಜೀತ ಪದ್ಧತಿಯಿಂದ ವಿಮುಕ್ತರಾಗಲು ಅವಕಾಶವಾಯಿತು. ತಾವು ಅದನ್ನು ಯೋಚನೆ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಎಂ. ವೆಂಕಟಲಿಂಗಯ್ಯ.—ನಾನು ಹೇಳಿದ್ದು ಋಣ ಪರಿಹಾರದ ಬಗ್ಗೆ ಹೇಳಿದೆ ನೀವು ಹೇಳುವ ಜೀತಾ ಪದ್ಧತಿಯನ್ನು ನಿರ್ಮೂಲನ ಮಾಡಬೇಕು ಎನ್ನುವುದನ್ನು ನಾನು ಒಪ್ಪುತ್ತೇನೆ. ನೀವು ಅವರನ್ನು ಜೀತ ವಿಮುಕ್ತರನ್ನಾಗಿ ಮಾಡಿದಿರಿ ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಅದೇ ಸಂದರ್ಭದಲ್ಲಿ ಅವರಿಗೆ ಕೆಲಸವನ್ನು ಸಹ ಒದಗಿಸಿಕೊಡಬೇಕಾದ್ದು ತಮ್ಮ ಕರ್ತವ್ಯ. ಏಕೆಂದರೆ ಅವರ ಒಡೆಯರು ಅವರನ್ನು ಕೆಲಸದಿಂದ ತೆಗೆದುಹಾಕಿರುತ್ತಾರೆ. ತಾವು ಕೆಲಸ ಒದಗಿಸಲಿಲ್ಲ ಈಗ ಅವರಿಗೆ ಸಾಯಂಕಾಲಕ್ಕೆ ಗಂಜಿಗೆ ಗತಿ ಇರುವುದಿಲ್ಲ. ಆದ್ದರಿಂದ ಅಂತಹವರಿಗೆ ತಕ್ಷಣವೇ ಕೆಲಸ ಒದಗಿಸಿಕೊಡಬೇಕು ಎಂದು ಹೇಳುತ್ತೇನೆ. ಇದರಲ್ಲಿ ಸರ್ಕಾರದ ಲಿಸ್ಟಿಗೆ ಸೇರಿರುವವರು ಕೆಲವರು ಇದ್ದರೆ, ಇನ್ನು ಸರ್ಕಾರದ ಲಿಸ್ಟಿಗೆ ಬರದೇ ಇರುವವರು ಬಹಳ ಜನ ಇದ್ದಾರೆ. ಆದ್ದರಿಂದ ಜೀತಾ ಪದ್ಧತಿ ರದ್ದಿನಿಂದ ಈ ರೀತಿ ತೊಂದರೆಯಾಗಿದೆ. ಇನ್ನು ಋಣ ಪರಿಹಾರ ಪದ್ಧತಿಯಲ್ಲಿ ನೋಡಿದರೆ ಬ್ಯಾಂಕುಗಳಲ್ಲಿ ಹಣ ಸಿಕ್ಕುತ್ತಿಲ್ಲ. ಎಲ್ಲೂ ಸಾಲ ದೊರೆಯುತ್ತಿಲ್ಲ. ದುರ್ಬಲ ವರ್ಗದವರು ಈಗ ತುಂಬ ಕಷ್ಟದಲ್ಲಿದ್ದಾರೆ. ನನ್ನ ಬಳಿಗೆ ಎಷ್ಟೋ ಬಡ ರೈತರು ಬಂದು ತಮ್ಮ ಕಷ್ಟಸುಖಗಳನ್ನು ಹೇಳಿಕೊಳ್ಳುತ್ತಿದ್ದಾರೆ. ಇತ್ತ ಗಾಡಿಯೂ ಇಲ್ಲ, ಎತ್ತುಗಳೂ ಇಲ್ಲ, ಅತ್ತ ಬ್ಯಾಂಕ್ ವ್ಯವಸ್ಥೆಯೂ ಇಲ್ಲ, ನಾವು ಹೇಗೋ ಜೀವನ ಮಾಡುತ್ತಿದ್ದೆವು. ಈಗ ಎತ್ತು ಗಾಡಿ ತರುವುದಕ್ಕೆ 500—600 ಎಲ್ಲಿ ತರುವುದು ಎಂದು ಗೋಳಾಡುತ್ತಿದ್ದಾರೆ. ನೀವು ಶಾಸಕರು, ನಮಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತಾರೆ ಅಂಥಾ ಪರಿಸ್ಥಿತಿ ಇರುವಾಗ, ನಾವು ಅವರಿಗೆ ಏನು ಜವಾಬು ಕೊಡುವುದು? ಊರಿನಲ್ಲಿ ಅವನಿಗೆ ಯಾರೂ ಸಾಲ ಕೊಡುವುದಿಲ್ಲ, ಮತ್ತೆ ಬ್ಯಾಂಕಿನಲ್ಲಿ ಯಾವ ವ್ಯವಸ್ಥೆಯೂ ಇಲ್ಲ, ಇದರಿಂದ ಹಳ್ಳಿಯ ರೈತ ಬಡವನಿಗೆ ಜೀವನ ಮಾಡುವುದಕ್ಕೆ ಅವಕಾಶವಿಲ್ಲದಾಗಿದೆ. ಆದುದರಿಂದ, ಸರ್ಕಾರದವರು ಮುಂದಾಲೋಚನೆ ಮಾಡಿ, ಕಾನೂನಿನ ಜೊತೆಯಲ್ಲೇ ಅವರಿಗೆ ಒಂದು ಪರ್ಯಾಯ ವ್ಯವಸ್ಥೆಯನ್ನು ಧನಸಹಾಯದ ವಿಚಾರದಲ್ಲಿ ಮಾಡಬೇಕಾಗಿತ್ತು ಎಂದು ನಾನು ಹೇಳುತ್ತೇನೆ. ನೀವು ಹಳ್ಳಿಗಾಡುಗಳಲ್ಲಿ ಬ್ಯಾಂಕುಗಳನ್ನು ತೆರೆಯುವುದು ಯಾವಾಗ ಅವರಿಗೆ ಸಾಲ ದೊರೆಯುವುದು ಯಾವಾಗ? ರೈತ ಬಡವನಿಗೆ ಇವತ್ತು ಸಂಜೆಗೆ ಗಂಜಿ ಇಲ್ಲದೆ, ಅವನ ಸಂಸಾರ ನಿರ್ನಾಮವಾಗಿ ಹೋಗುತ್ತಿದೆ. ಆದುದರಿಂದ, ಸರ್ಕಾರದವರು ಒಂದು ಕಾನೂನು ಮಾಡುವಾಗ ಅದರಿಂದಾಗುವ ಲೋಪದೋಷಗಳನ್ನು ಗಮನದಲ್ಲಿಟ್ಟುಕೊಂಡು ಪರ್ಯಾಯ ವ್ಯವಸ್ಥೆಯನ್ನು ಮಾಡಬೇಕೆಂದು ಸೂಚಿಸಬಯಸುತ್ತೇನೆ.

5-00 P.M.

ಇನ್ನು ಕನ್ನಡ ಭಾಷೆಯ ವಿಚಾರ. ಇದರ ಬಗ್ಗೆ ಮಾನ್ಯ ರಾಜ್ಯಪಾಲರು ಏನೂ ಪ್ರಸ್ತಾಪ ಮಾಡಿಲ್ಲ! ಕನ್ನಡವು ದೇಶಭಾಷೆ, ಆಡಳಿತ ಭಾಷೆಯಾಗಬೇಕೆಂಬ ಮಾತನ್ನು ಅವರು ಹೇಳಿಲ್ಲ. ನ್ಯಾಯಾಲಯಗಳಲ್ಲಿ ಸದಾ ಉಪಯೋಗಿಸಲಾಗುವ ಅಧಿನಿಯಮಗಳ ಕನ್ನಡ ಭಾಷಾಂತರವನ್ನು ತಯಾರಿಸುವ ಕಾರ್ಯವು ಮುಂದುವರೆಯುತ್ತಿದೆ ಎನ್ನುವ ಒಂದು ವಾಕ್ಯವನ್ನು ಬಿಟ್ಟು ಮತ್ತೇನನ್ನೂ ಹೇಳಿಲ್ಲ. ಅದುದರಿಂದ, ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವುದಕ್ಕೆ ಸರ್ಕಾರದವರು ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ.ವಿ. ಮುನಿಸ್ವಾಮಿ:—(ಮಾಲೂರು) ಸನ್ಮಾನ್ಯ ಉಪಾಧ್ಯಕ್ಷರೇ, ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುವ ನಿರ್ಣಯಕ್ಕೆ ಬೆಂಬಲ ವ್ಯಕ್ತಪಡಿಸುತ್ತಾ, ಕೆಲವೊಂದು ವಿಚಾರಗಳನ್ನು ಹೇಳಬೇಕೆಂದು ಅಪೇಕ್ಷೆ ಪಡುತ್ತೇನೆ. ಸನ್ಮಾನ್ಯ ಕೆಲವು ಸದಸ್ಯರು ತುರ್ತು ಪರಿಸ್ಥಿತಿ ಬಂದು ನಮ್ಮ ದೇಶದಲ್ಲಿ ಅನ್ಯಾಯವಾಗಿದೆ ಎಂದೂ, ಮಾನ್ಯ ಶ್ರೀ ಬಿ. ಪುಟ್ಟಸ್ವಾಮಯ್ಯನವರಾದಿಯಾಗಿ ಶ್ರೀ ಕೋಣಂದೂರು ಲಿಂಗಪ್ಪನವರಿಗೂ ಸಾಹಿತ್ಯ ಪೂರಿತವಾದ ಭಾಷಣ ಮಾಡಿದ್ದಾರೆ. ಇಂಥಾ ಪರಿಸ್ಥಿತಿಯಲಿ, ತುರ್ತುಪರಿಸ್ಥಿತಿ ಏತಕ್ಕೆ ಬಂತು ಎಂಬುದನ್ನು ಸ್ವಲ್ಪ ವಿಚಾರ ಮಾಡಬೇಕಾಗುತ್ತದೆ. ಇಂದಿರಾಗಾಂಧಿಯವರು ಆಡಳಿತಕ್ಕೆ ಬಂದ ತಕ್ಷಣವೇ ತುರ್ತು ಪರಿಸ್ಥಿತಿಯನ್ನು ಘೋಷಣೆ ಮಾಡಲಿಲ್ಲ. ಅವರು 10 ವರ್ಷಗಳ ಕಾಲ ರಾಜ್ಯಭಾರ ಮಾಡಿ, ದೇಶದಲ್ಲಿ ಆಗುತ್ತಾ ಇರತಕ್ಕ ಅನ್ಯಾಯಗಳನ್ನು ಮನಗಂಡು ದೇಶದ ಜನತೆಗೆ ರಾಜ್ಯಾಂಗಬದ್ಧವಾಗಿ ಏನೇನು ಸೌಲಭ್ಯಗಳು ದೊರಕಬೇಕು ಅವೆಲ್ಲವೂ ದೊರಕುತ್ತಿಲ್ಲವಲ್ಲಾ ಎಂದು ನೊಂದು ತುರ್ತುಪರಿಸ್ಥಿತಿಯನ್ನು ತರುವುದಕ್ಕೆ ಪ್ರಯತ್ನ ಪಟ್ಟರೆ ಹೊರತು, ಹೊಸದಾಗಿ ಏನೂ ಮಾಡುವುದಕ್ಕೆ ಹೋಗಲಿಲ್ಲ. ರಾಜ್ಯಾಂಗದತ್ತ ಅನುಕೂಲಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಮತ್ತು ನಮ್ಮ ಪಕ್ಷದವರು ಕೊಟ್ಟ ಆಶ್ವಾಸನೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದಾಗ, ವಿರೋಧ ಪಕ್ಷದ ಧುರೀಣರಿಗೆ ನೋವಾಯಿತು! ಮಾನ್ಯ ಸದಸ್ಯರಾದ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು, ನಮ್ಮ ದೇಶವನ್ನು ಯಾರಿಗಾದರೂ ಮಾರಿಬಿಡುತ್ತಾರೇ ನೋ; ನಾವು ಪರಾಧೀನರಾಗುತ್ತೇವೆಯೋ ಏನೋ ಎಂದು ಹೇಳಿದರು! ವಿರೋಧ ಪಕ್ಷದ ನಾಯಕರೆಲ್ಲಾ ಸೇರಿ, ಜನಸಂಘ, ಆನಂದ ಮಾರ್ಗಿಗಳನ್ನು ದೊಡ್ಡದಾಗಿ ಎತ್ತಿಕಟ್ಟಿ, ಅವರಿಗೆ ಅಮೇರಿಕಾದಿಂದ ಎಷ್ಟು ದುಡ್ಡು ಬಂದಿತ್ತು ಎಂಬುದನ್ನು ಮರತೇ ಬಿಟ್ಟರು! ನಮ್ಮ ದೇಶದ ನಾಯಕರನ್ನೆಲ್ಲಾ ಆನಂದ ಮಾರ್ಗಿಗಳ ಮುಖಾಂತರ ನಿರ್ನಾಮ ಮಾಡಿ, ರಾಜ್ಯಭಾರವನ್ನು ನಮ್ಮ ಕೈಗೆ ತೆಗೆದುಕೊಳ್ಳಬೇಕು ಎನ್ನುವ ಉದ್ದೇಶದಿಂದ ಕೇಂದ್ರದ ರೈಲ್ವೇ ಮಂತ್ರಿ ಶ್ರೀ ಮಿಶ್ರಾ ಅವರನ್ನು ಸಾಯಿಸಿಬಿಟ್ಟರು 1966 ರಲ್ಲಿ ತಾಷ್ಕೆಂಟ್ ಒಪ್ಪಂದ ನಡೆಯುವಾಗ ಲಾಲ್ ಬಹದ್ದೂರ್ ಶಾಸ್ತ್ರಿಯವರು ತೀರಿ ಹೋದ ಮೇಲೆ ಪ್ರಧಾನ ಮಂತ್ರಿಯಾಗಿ ಬಂದ ಶ್ರೀಮತಿ· ಇಂದಿರಾಗಾಂಧಿಯವರು ತಮ್ಮ ಸ್ಥಾನಭದ್ರತೆಗಾಗಿ ಅವತ್ತೇ ತುರ್ತುಪರಿಸ್ಥಿತಿಯನ್ನು ತಂದಿದ್ದರೆ, ದೇಶದಲ್ಲಿ ಅಲ್ಲೋಲಕಲ್ಲೋಲ ಪರಿಸ್ಥಿತಿ ಉಂಟು ಮಾಡುವುದಕ್ಕೆ ಅವಕಾಶ ಮಾಡಿದ್ದಾರೆ ಎಂದು ಹೇಳಿದ್ದರೆ, ಒಪ್ಪಿಕೊಳ್ಳಬಹುದಾಗಿತ್ತು. ಆದರೆ, ಇವತ್ತಿನ ದಿವಸ ದೇಶವನ್ನು ಹಾಳು ಮಾಡುವುದಕ್ಕೆ ಪಟ್ಟ ಭದ್ರಹಿತಾಸಕ್ತಿಗಳು ಮತ್ತು ಆನಂದಮಾರ್ಗಿಗಳು ಸೇರಿಕೊಂಡು ರಾಜ್ಯಾಂಗಂತ್ತವಾದ ಅನುಕೂಲಗಳನ್ನು ದೇಶದ ಜನತೆಗೆ ಮುಟ್ಟಿಸದೇ ಹೋದಾಗ ಪ್ರಧಾನ ಮಂತ್ರಿಯವರು ತುರ್ತುಪರಿಸ್ಥಿತಿ ಘೋಷಣೆ ಮಾಡಿದರು. ಮೇಲೆ ಹೇಳಿದ ಬಿನ್ನತೆಗಳಿಂದ ಕಾಂಗ್ರೆಸ್ ಇಬ್ಭಾಗವಾಯಿತು. ನನಗನ್ನಿಸುವುದೇನೆಂದರೆ, ಅವತ್ತಿನ ದಿವಸ ಕಾಂಗ್ರೆಸ್ ಇಬ್ಭಾಗವಾಗದೇ ಹೋಗಿದಿದ್ದಿದ್ದರೆ, ಇವತ್ತು ಕಾಂಗ್ರೆಸ್ ಎನ್ನುವ ಹೆಸರು ನಿರ್ನಾಮವಾಗುತ್ತಿತ್ತೋ ಏನೋ!

ಮಾನ್ಯ ಸದಸ್ಯರಾದ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಜಯಪ್ರಕಾಶ್ ನಾರಾಯಣ್ ಅವರನ್ನು ಮಹಾತ್ಮ ಗಾಂಧೀಜಿಯವರಿಗೆ ಹೋಲಿಸಿ, ಅವರು ಗಾಂಧೀಜಿಯವರ "ಅಪರಾವತಾರ" ಎಂದು ಹೇಳುತ್ತಿದ್ದರು. ಗಾಂಧೀಜಿಯವರು ಸತ್ತು ಇಲ್ಲಿಗೆ ಸುಮಾರು 30 ವರ್ಷಗಳಾಯಿತು. ಆದರೆ, ಜಯಪ್ರಕಾಶ್ ನಾರಾಯಣ್ ಅಂಥರವರನ್ನು ಪೂಜ್ಯ ಗಾಂಧೀಜಿಯಂತಹವರಿಗೆ ಹೋಲಿಸಿದರೆ, ಮುಂದಿನ ಪೀಳಿಗೆ ಗಾಂಧೀಜಿಯವರ ವಿಚಾರದಲ್ಲಿ ಬಹಳ ಕುಲ್ಲಕವಾಗಿ ತಿಳಿದುಕೊಳ್ಳಬಹುದು. ಮಹಾತ್ಮಾ ಗಾಂಧೀಜಿಯವರ ಅಹಿಂಸಾ ಮಾರ್ಗವನ್ನು ಬಿಟ್ಟು ಎಂದೂ ಹಿಂಸಾ ಮಾರ್ಗಕ್ಕೆ ಹೋಗಿರಲಿಲ್ಲ. ನಮ್ಮ ಭಾರತ ದೇಶಕ್ಕೆ ಸ್ವಾತಂತ್ರ್ಯ ತರುವಲ್ಲಿ ಅಪಾರವಾದ ತ್ಯಾಗ ಮಾಡಿದವರು ಗಾಂಧೀಜಿ. ಆದುದರಿಂದ, ಮುಂದಿನ ಪೀಳಿಗೆ ಗಾಂಧೀಜಿಯವರು ಜಯಪ್ರಕಾಶ್ ನಾರಾಯಣ್ ಅವರು ಅನುಸರಿಸತಕ್ಕ ಮಾರ್ಗಗಳನ್ನು ಅನುಸರಿಸುತ್ತಿದ್ದರೇ ಎಂಬ ಮನೋಭಾವನೆ ಬರಬಹುದೇನೋ. ಆದುದರಿಂದ ಮಾನ್ಯ ಕೋಣಂದೂರು ಲಿಂಗಪ್ಪನವರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಾ, ಗಾಂಧೀಜಿಗೂ ಮತ್ತು ಜಯಪ್ರಕಾಶ್ ನಾರಾಯಣ್ ಅವರಿಗೂ ಹೋಲಿಕೆ ಮಾಡುವುದನ್ನು ಮರೆಯಬೇಕು ಎಂದು ಹೇಳುತ್ತೇನೆ.

ಪೋಲಿಸರಿಗೆ ಕಾನೂನು ಪಾಲಿಸಬೇಡಿ; ವಿದ್ಯಾರ್ಥಿಗಳಿಗೆ ಶಾಲೆಗಳಿಗೆ ಹೋಗಬೇಡಿ ಎಂದು ಗಾಂಧೀಜಿಯವರು ಹೇಳಲಿಲ್ಲ. ಆದುದರಿಂದ ಯಾವುದೇ ಹೋಲಿಕೆಗಳನ್ನು ಮಾಡುವುದು ತಪ್ಪು. ಹೀಗಿರುವುದರಿಂದ, ನಾನ ಎಲ್ಲಾ ನಾಯಕರ ಬಗ್ಗೆ ವಿಚಾರ ಹೇಳಿಕೊಂಡು ಹೋಗುವುದನ್ನು ಬಿಟ್ಟು, ತುರ್ತುಪರಿಸ್ಥಿತಿಗೆ ಸಂಬಂಧಪಟ್ಟಂತೆ ಕೆಲವು ವಿಚಾರಗಳನ್ನು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ.

ಈಗ ರಾಜ್ಯಾಂಗದಲ್ಲಿ 18 ಪರ್ಸೆಂಟನ್ನು ಹರಿಜನ—ಗಿರಿಜನ ಪಂಗಡದವರಿಗೆ ಮೀಸಲಿಟ್ಟಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯ ಕೆಲವು ನ್ಯೂನತೆಗಳ ಬಗ್ಗೆ ಸಾರ್ವಜನಿಕ ಹಣಕಾಸು ಸಮಿತಿಯವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಹಿಂದೆ ಮಹಾತ್ಮ ಗಾಂಧೀಯವರು ಹರಿಜನರಿಗೆ ರಾಜ್ಯಾಂಗದತ್ತವಾಗಿ ಸಲ್ಲಬೇಕಾದ ಅನುಕೂಲಗಳನ್ನು ಒದಗಿಸಲು ಮತ್ತು ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಬಹಳವಾಗಿ ಪ್ರಯತ್ನಪಟ್ಟರು. ಆದರೆ, ಇವತ್ತಿನ ದಿವಸ ಹರಿಜನರೇ ಬೇರೆ ಸವರ್ಣೀಯರೇ ಬೇರೆ ಎಂದು ಮಾಡುವುದಕ್ಕೆ ಹೊರಟಂತೆ ಕಾಣುತ್ತದೆ! ಹೆಚ್ಚು ಹೆಚ್ಚು ಹರಿಜನರ ಹೆಸರನ್ನೇ ಎಲ್ಲ ಕಡೆಗಳಲ್ಲಿ ಹೇಳುವುದರಿಂದ ಒಂದು ರೀತಿಯ ಅಸ್ಪೃಶತೆಯನ್ನು ನಾವು ಪ್ರಚೋದನೆ ಮಾಡಿದಂತಾಗುತ್ತದೆ. ಆದುದರಿಂದ, ಎಲ್ಲ ಇಲಾಖೆಗಳಲ್ಲೂ ಸವರ್ಣೀಯರೂ ಮತ್ತು ಹರಿಜನರನ್ನು ಒಟ್ಟೊಟ್ಟಿಗೆ ಕೆಲಸ ಮಾಡುವಂತೆ ಅವಕಾಶ ಮಾಡಿಕೊಟ್ಟರೆ ಅಸ್ಪ್ರಶ್ಯತೆ ಎನ್ನುವುದು ತಾನೇ ತಾನಾಗಿ ಮಾಯವಾಗುತ್ತದೆ. ಇಂದು ವಿಧಾನ ಪರಿಷತ್ತಿನಲ್ಲಿ ಸನ್ಮಾನ್ಯ ಸಭಾಪತಿಯಾಗಿರುವ ಶ್ರೀ ಎಂ. ವಿ. ವೆಂಕಟಪ್ಪನವರು ಬಂಗಾರಪೇಟೆಯ ಹರಿಜನರ ವಿದ್ಯಾರ್ಥಿ ನಿಲಯದಲ್ಲಿ ಓದಿದವರು. ಅವರು ಈ ಅಸ್ಪ್ರಶ್ಯತೆ ಎನ್ನುವುದುನ್ನು ನಿವಾರಣೆ ಮಾಡುವುದಕ್ಕಾಗಿಯೇ ಆ ಹರಿಜನರ ವಿದ್ಯಾರ್ಥಿ ನಿಲಯವನ್ನು ತಮ್ಮ ವಿದ್ಯಾಭ್ಯಾಸಕ್ಕೆ ಆರಿಸಿಕೊಂಡರು ಈ ರೀತಿ ತ್ಯಾಗ ಮಾಡುವವರು ನಮ್ಮ ದೇಶದಲ್ಲಿ ಬಹಳ ಜನ ಇದ್ದಾರೆ; ತ್ಯಾಗ ಮಾಡುವ ಮನೋಭಾವ ಹೊಂದಿರತಕ್ಕವರೂ ಕೂಡ ಇದ್ದಾರೆ. ಹರಿಜನರಿಗೂ ಮತ್ತು ವರ್ಣೀಯರಿಗೂ ಅಂತರವನ್ನು ದೊಡ್ಡದು ಮಾಡುವುದಕ್ಕೆ ಕೆಲವರು ಭದ್ರಪಟ್ಟಹಿತಾಸಕ್ತಿಗಳು ಪ್ರಯತ್ನ ಮಾಡಿ, ಹಲವಾರು ಅನಾಹುತಗಳಾವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅಂತಹವರಿಗೆ ಈ ರೀತಿ ಜಾತಿಯ ಹೆಸರಿನಲ್ಲಿ ಅನಾಹುತಿಕ್ಕೆ ಅವಕಾಶ ಮಾಡಿಕೊಡಬಾರದೆಂದು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವಾಗ ಮಾನ್ಯ ಲಿಂಗಯ್ಯನವರು ಕನ್ನಡದ ವಿಚಾರವಾಗಿ ಒಂದು ಮಾತೂ ಹೇಳಿಲ್ಲ ಎಂದು ಹೇಳಿದರು. ಕನ್ನಡಭಾಷೆ ಎಲ್ಲಾ ಕಡೆ ಆಡಳಿತ ಭಾಷೆ ಆಗಬೇಕೆಂದು ಸರ್ಕಾರದವರು ಆಜ್ಞೆ ಮಾಡಿರುವುದು ಗೊತ್ತಿಲ್ಲವೇನು ? ಜಿಲ್ಲಾಮಟ್ಟದಲ್ಲೂ ಕೂಡ ಕನ್ನಡ ಆಡಳಿತ ಭಾಷೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿರುವಾಗ, ಕನ್ನಡದ ಬಗ್ಗೆ ಮತ್ತೆ ಏನು ವಿಚಾರ ಹೇಳಬೇಕು. 20 ಅಂಶಗಳ ಕಾರ್ಯಕ್ರಮದಲ್ಲಿ ನೇಯ್ಗೆಯವರ ವಿಚಾರವಾಗಿ ಒಂದು ಮಾತು ಹೇಳಬೇಕಾಗಿದೆ. ನಮ್ಮ ದೇಶದಲ್ಲಿ ಬಹಳ ಜನ ಕೈಮಗ್ಗದಿಂದ ಜೀವನ ಮಾಡತಕ್ಕವರು ಇದ್ದಾರೆ, ಇವರು ನೇಯ್ದ ಬಟ್ಟೆಗಳಿಗೆ ಹೊರದೇಶಗಳಲ್ಲೂ ಬೇಕಾದಷ್ಟು ಬೇಡಿಕೆ ಇದೆ. ಈಗ ಯಂತ್ರಗಳ ಜೊತೆಯಲ್ಲಿ ಪೈಪೋಟಿ ನಡೆಸುವುದಕ್ಕೆ ಶಕ್ತಿ ಇಲ್ಲದೇ ಹೋಗಿದ್ದಾನೆ. ಹತ್ತು ಗಜ ಅಥವಾ ಹತ್ತು ಮೀಟರಾಗಲೀ ಯಂತ್ರಗಳಿಂದ ನೇಯ್ದರೆ, ಒಬ್ಬ ಮನುಷ್ಯ 5 ಮೀಟರು ಯಂತ್ರದ ಸಹಾಯದಿಂದ ನೇಯುವುದಕ್ಕೆ ಸಾಧ್ಯ. ಮಾನ್ಯ ಬಂಗಿಯವರು ಹೇಳಿದಹಾಗೆ ಕೈಮಗ್ಗದವರು ಸುಧಾರಿಸಬೇಕಾದರೆ ಇಂತಿಷ್ಟು ಬಟ್ಟೆಗಳನ್ನು ಕೈಮಗ್ಗದವರೇ ತಯಾರು ಮಾಡಬೇಕೆಂದು ಸರ್ಕಾರ ಕಾನೂನು ತರಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ವಿದ್ಯುದ್ದೀಕರಣ ವಿಚಾರವಾಗಿ, ನಮ್ಮ ಜಿಲ್ಲೆಯಲ್ಲಿ 40 ಸಾವಿರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಕೊಟ್ಟಿದ್ದಾರೆ, ಇನ್ನೂ ಹೆಚ್ಚಿನ ಬಾವಿಗಳಿಗೆ ಪಂಪ್‌ಸೆಟ್ ಒದಗಿಸ ಬೇಕೆಂದು ಕೇಳುತ್ತೇನೆ. 20ಸಾವಿರ ಮನೆಗಳಿಗೆ ಸರ್ವಿಸ್ ಮಾಡಿದ್ದಾರೆ, ಇನ್ನೂ ಹೆಚ್ಚು ಮಾಡಬೇಕೆಂದು ಹೇಳುತ್ತೇನೆ. ರೇಷ್ಮೆ ವಿಚಾರವಾಗಿ ಒಂದು ವಿಚಾರ ಹೇಳುತ್ತೇನೆ. ನಮ್ಮ ರಾಷ್ಟ್ರದ ಪೈಕಿ ರೇಷ್ಮೆ ಬೆಳೆಯುವುದರಲ್ಲಿ ಕರ್ನಾಟಕ ಮೊದಲ ಸ್ಥಾನ ಪಡೆದಿದೆ. ಕರ್ನಾಟಕದಲ್ಲಿ ನಮ್ಮ ಕೋಲಾರ ಜಿಲ್ಲೆ ಅಗ್ರಸ್ಥಾನ ಪಡೆದಿದೆ. ಅದಕ್ಕಾಗಿಯೇ ಕೆಲವು ಸೊಸೈಟಿಗಳನ್ನು ರಿಜಿಸ್ಟರ್ ಮಾಡಿದ್ದಾರೆ. ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದ ಮೇಲೆ ರೇಷ್ಮೆ ಬೆಳೆಗಾರರಿಗೆ ಅನುಕೂಲ ವಾಗುತ್ತದೆಂದು ತಿಳಿದಿದ್ದೆವು, ಬ್ಯಾಂಕ್ನು

ಗಳಿಗೆ ಹೋಗಿ ಸಾಲ ಕೇಳಿದರೆ, ಇಲ್ಲಸಲ್ಲದ ನೆಪಹೇಳುತ್ತಾರೆ, ಡೆಟ್ ರಿಲೀಫ್ ಆಕ್ಟ್ ಪ್ರಕಾರ ಸಾಲ ಸಿಕ್ಕುವುದಿಲ್ಲ ಎಂದು ಹೇಳುತ್ತಾರೆ. ಡೆಟ್ ರಿಲೀಫ್ ಆಕ್ಟಿನಲ್ಲಿ ಹೊಸದಾಗಿ ತೆಗೆದು ಕೊಳ್ಳುವ ಸಾಲಕ್ಕೆ ಯಾವುದೇ ವಿಧವಾದ ನಿರ್ಬಂಧವೂ ಇಲ್ಲ. ವ್ಯವಸಾಯಗಾರರ ವಿಚಾರವಾಗಿ ಒಂದು ಮಾತು ಹೇಳಬೇಕಾಗಿದೆ. ಈಚೆಗೆ ನಮ್ಮ ದೇಶದಲ್ಲಿ ವರ್ಲ್ಡ್ ಬ್ಯಾಂಕ್ ಎಯಿಡ್‌ನಿಂದ 3 ಸಾವಿರ ಟ್ರಾಕ್ಟರುಗಳನ್ನು ಪಡೆಯುವುದಕ್ಕೆ ವ್ಯವಸಾಯಮಂತ್ರಿಗಳು ಪ್ರಯತ್ನ ಪಟ್ಟಿದ್ದಾರೆ, ಇದರಿಂದ ಪ್ರತಿಯೊಬ್ಬ ರೈತನಿಗೂ ಅನುಕೂಲವಾಗುತ್ತದೆ. ಟ್ರ್ಯಾಕ್ಟರ್‌ಗಳಿಗೆ ಟ್ಯಾಕ್ಸ್ ಹಾಕುವುದಕ್ಕೂ ಸರ್ಕಾರ ಪ್ರಯತ್ನ ಪಟ್ಟಿದೆ, ಟ್ರಾಕ್ಟರ್‌ಗಳು ಕೆಲವು ಸಂದರ್ಭದಲ್ಲಿ ಮಾತ್ರ ಅಂದರೆ ಇಂಧನಕ್ಕಾಗಿ ಮತ್ತು ಡೀಸೆಲ್‌ಗಾಗಿ ರೋಡಿನಲ್ಲಿ ಬರುತ್ತದೆ ಇದರಿಂದ ತೊಂದರೆ ಏನು ಇಲ್ಲ, ಟ್ಯಾಕ್ಸ ಹಾಕುವುದರಿಂದ ರೈತರಿಗೆ ತುಂಬಾ ಹೊರೆಯಾಗುತ್ತದೆ, ಇದನ್ನು ಸರ್ಕಾರ ಮನ್ನಾ ಮಾಡಬೇಕು.

ಇನ್ನೊಂದು ವಿಚಾರ ಪಂಚಾಯಿತಿಗಳಿಗೆ ಮೀನುಗಾರಿಕೆ ಇಲಾಖೆಯವರು ಒಂದು ಕಾನೂನು ಮಾಡಿದ್ದಾರೆ. ಮೈನರ್ ಟ್ಯಾಂಕ್‌ಗಳನ್ನೂ ಎಲ್ಲಾ ಪಂಚಾಯಿತಿಗಳ ಆಡಳಿತಕ್ಕೆ ಒಪ್ಪಿಸಿದ ಬಗ್ಗೆ ಒಂದು ಕಾನೂನು ಇದೆ, ಅದರ ಪ್ರಕಾರ ನಮ್ಮಲ್ಲಿ 600 ಪಂಚಾಯಿತಿಗಳು ಇದ್ದರೂ 19 ಪಂಚಾಯಿತಿಗಳು ಮಾತ್ರ ಟ್ಯಾಂಕುಗಳ ಫಿಷರಿ ಅನುಕೂಲವನ್ನು ಉಪಯೋಗಿಸಿಕೊಳ್ಳುತ್ತಾರೆ. ನನ್ನ ಮನವಿ ಏನು ಎಂದರೆ, ಈ ಫಿಷರಿ ವ್ಯವಸ್ಥೆಯನ್ನು ಯೂತ್‌ಕ್ಲಬ್‌ಗಳಿಗೆ ವಹಿಸಿಕೊಡಬೇಕು. ಇಷ್ಟು ಈ ಸಂದರ್ಭದಲ್ಲಿ ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಪ್ರಭಾಕರ್ ರೆಡ್ಡಿ : (ಚಾಮರಾಜಪೇಟೆ) ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಜ್ಯ ಪಾಲರ ಭಾಷಣಕ್ಕೆ ವಂದನಾನಿರ್ಣಯವನ್ನು ಮಾನ್ಯ ಪುಟ್ಟಸ್ವಾಮಿಯವರು ಮಂಡಿಸಿದ್ದಾರೆ. ನಾನು ಹೊಸದಾಗಿ ನಮ್ಮ ಕರ್ನಾಟಕಕ್ಕೆ ನೇಮಕಗೊಂಡಿರುವ ಮಾನ್ಯ ರಾಜ್ಯಪಾಲರನ್ನು ಹೃತ್ಪೂರ್ವಕ ತಾಗಿ ವಂದಿಸಿ ಅವರ ಭಾಷಣವನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇವತ್ತು ಉದಾಹರಣೆಗೆ ಹೇಳಬೇಕಾದರೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿರುವಂತೆ ಆಹಾರ ವಿಚಾರದಲ್ಲಿ ಬಹಳ ಸ್ವಾವಲಂಬನೆ ಯಾಗಿದೆಯೆಂದು ಇದೆ. ನಿಜವಾಗಿಯೂ ಹೇಳಬೇಕೆಂದರೆ ಇವತ್ತು ಅದೇನಾದರೂ ಸಹಾಯವಾಗಿದ್ದರೆ ವರ್ತಕರಿಗೆ ಮಾತ್ರ ಸಹಾಯ ವಾಗಿದೆಯೇ ವಿನಾ ಬಡವರಿಗೆ ಏನೂ ಸಹಾಯವಾಗಿಲ್ಲ. ಇನ್ನು ಬ್ಯಾಂಕ್ ರಾಷ್ಟ್ರೀ ಕರಣ ಮಾಡಿದ ಮೇಲೆ ಶ್ರೀಮಂತರಿಗೆ ಮತ್ತು ಚಿತ್ರ ಮಂದಿರಗಳ ಮಾಲೀಕರಿಗೆ ಅನುಕೂಲವಾಗಿದೆ. ರಾಷ್ಟ್ರೀ ಕರಣದಿಂದ ಬಡವರಿಗೆ ಯಾವ ರೀತಿಯಿಂದಲೂ ಅನುಕೂಲವಾಗಿಲ್ಲ. ಬ್ಯಾಂಕಿಗೆ ಹೋಗಿ ಏನಾದರೂ ಒಂದು 5 ರೂಪಾಯಿ ಸಾಲ ಕೇಳಿದರೆ ಒಂದೂವರೆ ಸಾವಿರ ರೂಪಾಯಿ ಫಿಕ್ಸ್‌ಡ್ ಡಿಪಾಜಿಟ್ ಇಡಬೇಕೆಂದು ಹೇಳುತ್ತಾರೆ. ಒಬ್ಬ ಬಡವ ಏನಾದರೂ ಆತನ ಮಕ್ಕಳಿಗೆ ಮದುವೆ ಮಾಡಬೇಕು ಅಥವಾ ಸಣ್ಣಪುಟ್ಟ ವ್ಯಾಪಾರ ಮಾಡಬೇಕೆಂದು ಸಾಲ ಕೇಳಿದರೆ ಅವನಿಗೆ ಸಿಕ್ಕುವುದಿಲ್ಲ. ನಿಮ್ಮ ಬ್ಯಾಂಕಿಗೆ ರಾಷ್ಟ್ರೀಕರಣದಿಂದ ಬಡಬಗ್ಗರಿಗೆ ಬಹಳ ಸಹಾಯವಾಗಿದೆಯೆಂದು ಏನು ಹೇಳುತ್ತಿದ್ದೀರಿ ಅದು ಏನೇನೂ ಆಗಿಲ್ಲವೆಂದು ಹೇಳಬೇಕಾಗುತ್ತದೆ. ಇನ್ನು ವೃದ್ಧಾಪ್ಯವೇತನದ ಬಗ್ಗೆ ಹೇಳಬೇಕಾದರೆ 65 ವರ್ಷ ವಯಸ್ಸಿನವರು ವೃದ್ಧಾಪ್ಯವೇತನಕ್ಕೆ ಅರ್ಜಿ ಹಾಕಿಕೊಂಡರೆ ಅವರು ಸತ್ತು ಹೋದಮೇಲೂ ವೇತನ ಸಿಕ್ಕುವುದಿಲ್ಲ. ಇದೆಲ್ಲಾ ಅಧಿಕಾರಿವರ್ಗಗಳಲ್ಲಿ ನಡೆಯುತ್ತಾ ಇದೆ. ಇನ್ನು ರೇಷನ್ ಕಾರ್ಡ್‌ಗಳನ್ನು ವಶಪಡಿಸಿಕೊಳ್ಳುವ ವಿಚಾರದಲ್ಲಿ ತಾವು ಪತ್ರಿಕೆಗಳಲ್ಲಿ ಪ್ರಚಾರ ಮಾಡಿದಿರಿ. ಅದನ್ನು ನೋಡಿ ಸಾಮಾನ್ಯ ಜನತೆ ಹೆದರಿ ಕಾರ್ಡುಗಳನ್ನು ವಾಪಸ್ ಕೊಟ್ಟಿದ್ದಾರೆ. ಅದೇ ಶ್ರೀಮಂತ ವರ್ಗದವರು ಮತ್ತು ವರ್ತಕರು ಯಾರೂ ವಾಪಸ್ ಮಾಡಿಲ್ಲ. ಇದಕ್ಕೆ ನಮ್ಮ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದೀರಿ ? ಕಳ್ಳ ವರ್ತಕರನ್ನು ಕಂಡುಹಿಡಿಯುವುದಕ್ಕೆ ಸ್ಪೆಷಲ್ ಸ್ಕ್ವಾಡ್ ಹಾಕಿದ್ದೀರಿ ಅವರು ಯಾರನ್ನು ಕಂಡುಹಿಡಿದು ಯಾರ ಮೇಲೆ ಕೇಸನ್ನು ರಿಜಿಸ್ಟರ್ ಮಾಡಿದ್ದಾರೆ ಹೇಳಿ. ಅವರು ಆ ವರ್ತಕರ ಹತ್ತಿರ ಹೋಗಿ ಅವರ ಜೊತೆ ಷಾಮಿಲಾಗಿ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಕೇವಲ ಬಡವರನ್ನು ಹೆದರಿಸುತ್ತಾರೆ. ಇದು ಯಾವ ರೀತಿಯಾಗಿದೆ ಎಂದರೆ ಕುರಿ ಕಾಯುವುದಕ್ಕೆ ತೋಳನನ್ನು ನೇಮಿಸಿದಂತೆ ಆಗಿದೆ. ಆದ್ದರಿಂದ ಇವರನ್ನು ಹಿಡಿಯಲು ಇವರಮೇಲೆ ಒಂದು ಸ್ಕ್ವಾಡ್‌ನ್ನು ಹಾಕಬೇಕಾಗುತ್ತದೆ.

ನಮ್ಮ ಚಾಮರಾಜಪೇಟೆ ಭಾಗಕ್ಕೆ ಒಂದು ತರಹ ಅಕ್ಕಿ ಕೊಡುತ್ತಾರೆ. ಅದೇ ಸದಾಶಿವನಗರದ ಬಾಗಕ್ಕೆ ಬೇರೆ ತರಹ ಅಕ್ಕಿಯನ್ನು ಸರಬರಾಜು ಮಾಡುತ್ತಾರೆ. ಇದು ನಿಮ್ಮ ಆಹಾರದ ನೀತಿಯೇ ? ಒಂದು ಕಾರ್ಡಿಗೆ ಇಷ್ಟು ಯೂನಿಟ್ ಎಂದು ಇರುತ್ತದೆ ಅದನ್ನು ಈ ನ್ಯಾಯ ಬೆಲೆ ಅಂಗಡಿಯವರು ಸರಿಯಾಗಿ ಕೊಡುತ್ತಿಲ್ಲ. ಬಡ ಜನರು ಏನಾದರೂ ಅಕ್ಕಿ, ಸಕ್ಕರೆ ಬಂದಿದೆಯೇ ಎಂದು ಕೇಳುವುದಕ್ಕೆ ಹೋದರೆ ಅವರು ಜಬರ್‌ದಸ್ತು ಮಾಡುತ್ತಾರೆ. ಅವರ ಕುಂದು ಕೊರತೆಗಳನ್ನು ಹೇಳಲಿಕ್ಕೆ ಆಫೀಸಿಗೆ ಹೋದರೆ ಅಲ್ಲಿನ ಅಧಿಕಾರಿಗಳು ಒಂದು ಸೌಮ್ಯಭಾವದಿಂದ ಮಾತನಾಡುವುದು ಕಷ್ಟ. ಸರ್ಕಾರ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲೇಬೇಕು. ಪತ್ರಿಕೆಯಲ್ಲಿ ಪ್ರಚಾರ ಮಾಡಿದರೆ ಸಾಲದು ಯಾರ ಮೇಲೆ ಏನೇ ಕ್ರಮ ತೆಗೆದುಕೊಂಡರೂ ಅದನ್ನು ಪತ್ರಿಕೆಯಲ್ಲಿ ಅವರ ಹೆಸರನ್ನು ಬಹಿರಂಗಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅದನ್ನು ನೋಡಿದರೆ ವರ್ತಕರಿಗೆ ಭಯ ಬರುತ್ತದೆ.

ಇನ್ನು ನ್ಯಾಯಾಲಯಗಳಲ್ಲಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವುದು ಇದೆ. ಕೇವಲ ಸಣ್ಣ ಸಣ್ಣ ನ್ಯಾಯಲಯಗಳಲ್ಲಿ ತಂದರೆ ಸಾಲದು. ಹೈಕೋರ್ಟಿನಲ್ಲಿಯೂ ಸಹ ಬರಬೇಕು. ಸರ್ಕಾರಿ ಎಲ್ಲಾ ಕಚೇರಿಗಳಲ್ಲೂ, ಹಾಗೂ ಕಾಲೇಜುಗಳಲ್ಲಿ ಕನ್ನಡ ಮಾಧ್ಯಮವಾಗಬೇಕು. ಕಾಲೇಜಿನಲ್ಲಿ ಕನ್ನಡ ಮಾಧ್ಯಮ ತೆಗೆದುಕೊಂಡರೆ ಅವರಿಗೆ ಪ್ರೋತ್ಸಾಹ ಕೊಡಬೇಕು. ಅವರಿಗೆ ಸರ್ಕಾರಿ ಕೆಲಸಗಳಲ್ಲಿ ಪ್ರಾಶಸ್ತ್ಯ ಕೊಡಬೇಕು. ಇನ್ನು ಒಂದು ವಿಚಾರ ಏನು ಇದೆ ಎಂದರೆ ವಿದ್ಯಾರ್ಥಿಗಳಲ್ಲಿ ಭಯ ಬಂದಿದೆ. ಯಾವುದಾದರೂ ಕೆಲಸಕ್ಕೆ ಇಂಟರ್‌ವ್ಯೂ ಬಂದರೆ ಅಲ್ಲಿ ಇಂಗ್ಲೀಷನಲ್ಲಿ ನಡೆಯುತ್ತದೆ ಆಗ ಕನ್ನಡ ಮಾಧ್ಯಮವನ್ನು ತೆಗೆದುಕೊಂಡರೆ ತೊಂದರೆಯಾಗುತ್ತದೆಂದು. ಆದರಿಂದ ಯಾವುದೇ ಕಚೇರಿಯಲ್ಲಿ, ಅಥವಾ ಕಾರ್ಖಾನೆಯಲ್ಲಿ ಇಂಟರ್‌ವ್ಯೂಗೆ ಬಂದರೆ ಅದನ್ನು ಕನ್ನಡದಲ್ಲಿ ನಡೆಸಬೇಕೆಂದು ನಿಯಮ ಮಾಡಬೇಕು.

ಇನ್ನು ರಾಷ್ಟ್ರೀಕರಣದ ಬಗ್ಗೆ ಕೆಲವು ಗಲಾಟೆ ಇದೆ. ಬ್ಯಾಂಕ್ ರಾಷ್ಟ್ರೀಕರಣ, ಬಸ್ ರಾಷ್ಟ್ರೀಕರಣ ಮಾಡಿದ್ದೀರಿ ಈಗ ಚಿತ್ರಮಂದಿರಗಳನ್ನು ರಾಷ್ಟ್ರೀಕರಣ ಮಾಡಬೇಕು. ಯಾವುದು ಕಪ್ಪು ಹಣ ಇದೆ ಅದನ್ನು ಹೊರಗೆ ತರಬೇಕಾದರೆ ಚಿತ್ರಮಂದಿರಗಳನ್ನು ರಾಷ್ಟ್ರೀಕರಣ ಮಾಡಬೇಕು. ದೊಡ್ಡ ದೊಡ್ಡ ಶ್ರೀಮಂತರು ಏನು ಮಾಡುತ್ತಾರೆಂದರೆ ಯಾವುದೇ ಚಿತ್ರಮಂದಿರ ಮಾಡಬೇಕಾದರೆ ಅವರ ಮನೆಯವರೆಲ್ಲಾ ಸೇರಿ ಒಂದು ಕಂಪನಿಯನ್ನು ಮಾಡಿಕೊಂಡು ಅವರದೇ ಒಂದು ದೊಡ್ಡ ಸಂಸ್ಥೆಯನ್ನಾಗಿ ಮಾಡಿಕೊಳ್ಳುತ್ತಾರೆ. ಇದನ್ನು ತಪ್ಪಿಸಬೇಕು. ಇನ್ನು ನರ್ಸಿಂಗ್ ಹೋಮ್ ಇನ್ನು ಇವೆ ಇವುಗಳನ್ನು ಮೊದಲು ರಾಷ್ಟ್ರೀಕರಣ ಮಾಡಬೇಕು. ಏನೆಂದರೆ ಸಾಮಾನ್ಯ ಬಡವರು ಏನಾದರೂ ಹೋದರೆ ಕೇವಲ ಟೆಸ್ಟ್ ಮಾಡುವುದಕ್ಕೆ ನೂರು ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ. ಇದು ಬಹಳ ದುಬಾರಿಯಾಗಿ ಬಡವರಂತೂ ನರ್ಸಿಂಗ್ ಹೋಂಗೆ ಹೋಗಲು ಸಾಧ್ಯವೇ ಇಲ್ಲ. ಆದ್ದರಿಂದ ಮೊದಲು ನರ್ಸಿಂಗ್ ಹೋಂಗಳನ್ನು ರಾಷ್ಟ್ರೀಕರಣ ಮಾಡಿದರೆ ಬಡ ಜನತೆಗೆ ಬಹಳ ಸಹಾಯವಾಗುತ್ತದೆ.

ಇನ್ನು ರಾಜ್ಯಪಾಲರ ಭಾಷಣದಲ್ಲಿ ನಮ್ಮ ಕ್ರಿಡಾಪಟುಗಳ ಬಗ್ಗೆ ಹೇಳಿದ್ದಾರೆ. ನಮ್ಮ ಕರ್ನಾಟಕದವರೇ 6 ಮಂದಿ ಆಟಗಾರರು ನ್ಯೂಜಿಲೆಂಡ್ ಪ್ರವಾಸದಲ್ಲಿ ಇದ್ದಾರೆಂದು. ಕರ್ನಾಟಕದ ಕ್ರಿಡಾಪಟುಗಳಿಗೆ ಯಾವ ರೀತಿಯಿಂದಲೂ ನಮ್ಮ ಸರ್ಕಾರ ಪ್ರೋತ್ಸಾಹ ಕೊಡುತ್ತಿಲ್ಲ. ನಿಜವಾಗಿಯೂ ಹೇಳುವುದಾದರೆ ಸಾಹಿತಿಗಳಿಗೆ, ಉಪಾಧ್ಯಾಯರುಗಳಿಗೆ, ಪದವೀಧರರಿಗೆ ಮೇಲ್ಮನೆಯಲ್ಲಿ ನಾಮಕರಣ ಮಾಡಿ ಅವಕಾಶ ಮಾಡಿ ಪ್ರೋತ್ಸಾಹ ಏನು ಕೊಡುತ್ತಾರೆ ಅದೇ ರೀತಿ ಇವರಿಗೂ ಅಂಥ ಅವಕಾಶ ಮಾಡಿಕೊಡಬೇಕೆಂದು ಕೇಳುತ್ತೇನೆ. ಆಮೇಲೆ ಅವರು ಆಟವಾಡುವಾಗ ಅವರಿಗೆ ಜೀವಕ್ಕೆ ಬಹಳ ತೊಂದರೆ ಇರುತ್ತದೆ. ಅದನ್ನೆಲ್ಲಾ ಪರಿಗಣನೆಗೆ ತೆಗೆದುಕೊಂಡು ಅವರಿಗೆ ಹೆಚ್ಚಿನ ಉತ್ತೇಜನ ಕೊಟ್ಟರೆ ಅವರು ನಮ್ಮ ಕರ್ನಾಟಕದಲ್ಲಿ ಕ್ರೀಡೆಗೆ ಬಹಳ ಕೀರ್ತಿಯನ್ನು ತಂದು ಕೊಡುತ್ತಾರೆ. ಅವರಿಗೆ ಉದ್ಯೋಗಾವಕಾಶ ಮಾಡಿ ಕೊಡಬೇಕು ಎಂದು ಹೇಳಿ ಇಷ್ಟು ಹೇಳಲು ಅವಕಾಶ ಕೊಟ್ಟ ಉಪಾಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಮಾಣಿಕ್ ರಾವ್ ಆರ್. ಪುಲೇಕರ್ (ಬಿದರ್) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುವ ನಿರ್ಣಯದ ಮೇಲೆ ಬೇಕಾದಷ್ಟು ಹಿರಿಯ ಸದಸ್ಯರು ಮಾತನಾಡಿದ್ದಾರೆ. ನಾನೂ ಕೂಡ ರಾಜ್ಯಪಾಲರ ಭಾಷಣವನ್ನು ಸ್ವಾಗತಿಸುತ್ತಾ ನಾಲ್ಕು ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ. ಅಧ್ಯಕ್ಷರೇ, ಇವತ್ತಿನದಿವಸ ರಾಜ್ಯಪಾಲರು ತಮ್ಮ ಭಾಷಣದಲ್ಲಿ 20 ಅಂಶಗಳ ಆರ್ಥಿಕ ಕಾರ್ಯಕ್ರಮದ ಬಗ್ಗೆ ಬೇಕಾದಷ್ಟು ಹೇಳಿದ್ದಾರೆ. ಇದರಲ್ಲಿ ಬ್ಯಾಂಕ್ ರಾಷ್ಟ್ರೀಕರಣವು ಒಂದು. ಅದಕ್ಕೆ ಸರ್ಕಾರವನ್ನು ವಂದಿಸುತ್ತೇನೆ. ತಮಗೆಲ್ಲಾ ಗೊತ್ತಿದೆ ಬ್ಯಾಂಕುಗಳು ಮೊದಲು ಕೆಲವೇ ಶ್ರೀಮಂತ ಜನರಿಗೆ ಕೆಲವೇ ವ್ಯವಹಾರಗಳಿಗೆ ದೊಡ್ಡ ದೊಡ್ಡ ಬಾಬಿಗೆ ಮಾತ್ರ ಹಣ ಕೊಡುತ್ತಿದ್ದರು. ಬ್ಯಾಂಕ್ ರಾಷ್ಟ್ರೀಕರಣವಾದನಂತರ ಅದರಲ್ಲೂ ಎಮರ್ಜೆನ್ಸಿ ಆದನಂತರ ಬಡ ಜನರಿಗೆ ಎಷ್ಟು ನ್ಯಾಷನಲೈಸ್ಡ ಬ್ಯಾಂಕುಗಳು ಸಹಾಯ ಮಾಡುತ್ತಿವೆಯೆಂದು ಒಂದು ಸಣ್ಣ ಉದಾಹರಣೆ ಕೊಡುತ್ತೇನೆ. ನಮ್ಮ ಬೀದರ್ ಜಿಲ್ಲೆಯಲ್ಲಿ ಒಂದು ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್ ಎಂದು ಇದೆ. ಅದು ಸಣ್ಣ ಸಣ್ಣ ವ್ಯವಸಾಯ ಮಾಡುವ ಜನರಿಗೆ ರಿಕ್ಷಾ ನಡೆಸುವ ಜನರಿಗೆ ಬ್ಯಾಂಕಿನಿಂದ ಒಂದು ಸಾವಿರ, ಒಂದೂವರೆ ಸಾವಿರ ರೂಪಾಯಿ ರಿಕ್ಷಾ ಕೊಂಡುಕೊಳ್ಳುವುದಕ್ಕೆ ಸಾಲವಾಗಿ ಕೊಡುತ್ತಿದ್ದಾರೆ. ಹಣ ಮೊದಲು ತೆಗೆದುಕೊಳ್ಳುವ ಕಾಲಕ್ಕೆ ಯಾವುದೇ ಸೆಕ್ಯೂರಿಟಿ ಅಥವಾ ಜಮೀನು ಆಸ್ತಿ ಬರೆದು ಕೊಡಬೇಕಾಗಿತ್ತು. ಆದರೆ ಇವತ್ತಿನದಿವಸ ಆ ಬ್ಯಾಂಕು ಮ್ಯಾನೇಜರ್ ಬ್ಯಾಂಕಿನ ಅಧಿಕಾರಿಯಾಗಲಿ ಏನು ಸೆಕ್ಯೂರಿಟಿ ತೆಗೆದುಕೊಳ್ಳದೆ ಗ್ರೂಪ್ ಸೆಕ್ಯೂರಿಟಿ ಅಂದರೆ 10 ಜನ ಯಾರು ಸಾಲ ತೆಗೆದುಕೊಳ್ಳುತ್ತಾರೆ ಅವರವರನ್ನೇ ಸೆಕ್ಯೂರಿಟಿಯಾಗಿ ತೆಗೆದುಕೊಂಡು ಸಾಲ ಕೊಡುತ್ತಿದ್ದಾರೆ. ಇಂತಹ ಅವಕಾಶಗಳು ಹಿಂದೆ ಇರಲಿಲ್ಲ. ಆದ್ದರಿಂದ ಬ್ಯಾಂಕ್ ರಾಷ್ಟ್ರೀಕರಣ ಮಾಡಿದ್ದು ಬಹಳ ಜನ ಬಡವರಿಗೆ ಸಹಾಯವಾಗಿದೆ. ಈಗ ನಾನಾ ಪ್ರಕಾರದಿಂದ ಅಂದರೆ ಸಣ್ಣ ಸಣ್ಣ ಬಾರ್‌ಬರ್ ಷಾಪ್ ಇಟ್ಟಿರುವವರಿಗೆ ವಾಟರ್ ಮನ್‌ಗಳಿಗೆ ಕೂಡ ಬ್ಯಾಂಕ್‌ಗಳಿಂದ ಸಾಲಸಿಗುತ್ತಿದೆ. ಇಲ್ಲಿಯವರೆಗೆ ಯಾರನ್ನು ಬ್ಯಾಂಕ್‌ನವರು ಹತ್ತಿರ ಬರಗೊಡುತ್ತಿರಲಿಲ್ಲವೋ ಅಂತಹ ಜನರೆಲ್ಲರಿಗೂ ಸಹ ರಾಷ್ಟ್ರೀಕರಣವಾದಂಥ ಬ್ಯಾಂಕ್‌ಗಳವರು ಸಾಲ ಕೊಡುತ್ತಿದ್ದಾರೆ. ಮುಖ್ಯವಾಗಿ ಬ್ಯಾಂಕ್‌ಗಳ ರಾಷ್ಟ್ರೀಕರಣವಾಗಿದ್ದರಿಂದ ಬಡ ಜನರಿಗೆ ಅನುಕೂಲವಾದಂತೆ ಆಗಿದೆ. ಬ್ಯಾಂಕ್‌ಗಳ ಮೂಲಕ ಈ ಜನರಿಗೆ ಸಹಾಯ ಮಾಡುವುದರ ಮೂಲಕ ಶ್ರೀಮತಿ ಇಂದಿರಾಗಾಂಧಿಯವರು ಏನು ಇಪ್ಪತ್ತು ಅಂಶಗಳ ಕಾರ್ಯಕ್ರಮವನ್ನು ಘೋಷಣೆ ಮಾಡಿದ್ದಾರೆ. ಅದು ಅನುಷ್ಠಾನದಲ್ಲಿ ಬರುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದಾರೆ ಹಳ್ಳಿಯ ಜನರಿಗೆ ಇದರಿಂದ ಬಹಳ ಅನುಕೂಲವಾಗುತ್ತಿದೆ ; ಹೆಚ್ಚು ಹೆಚ್ಚು ಜನರು ಈ ಸಹಾಯ ಪಡೆದುಕೊಳ್ಳಲು ಮುಂದೆ ಬರುತ್ತಿದ್ದಾರೆ. ಆದರೆ ಇದರ ಸಹಾಯ ಪಡೆಯಲು ಯಾರು ಮುಂದೆ ಬರುತ್ತಿಲ್ಲ, ಅವರಿಗೆ ಮಾತ್ರ ಲಾಭವಾಗುತ್ತಿಲ್ಲ.

5-30 P.M.

ಇನ್ನು ಹೌಸಿಂಗ್ ಸ್ಕೀಮ್ ತೆಗೆದುಕೊಂಡರೆ, ಇವೊತ್ತಿನದಿವಸ ನಮ್ಮ ಸರ್ಕಾರದವರು ಪುಕ್ಕಟೆಯಾಗಿ ಬಡಜನರಿಗೆ ಸೈಟ್‌ಗಳನ್ನು ಮನೆಕಟ್ಟಿಸಿಕೊಳ್ಳಲು ಹಂಚುತ್ತಿದ್ದಾರೆ. ಇಲ್ಲಿಯವರೆಗೆ ಈ ಬಡಪ್ರಾಣಿಗಳಿಗೆ ವಾಸಮಾಡಲು ಒಂದು ಸ್ವಂತವಾದ ನೆಲೆ ಎಂಬುದು ಇಲ್ಲವಾಗಿತ್ತು : ಹಳ್ಳಿಗಳಲ್ಲಿ ಯಾರದೋ ಜಾಗದಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ಇವರುಗಳು ವಾಸಮಾಡುತ್ತಿದ್ದರು ; ಗುಡಿಸಲು ಹಾಕಿಕೊಳ್ಳಲು ಯಾರು ಜಾಗ ಕೊಟ್ಟಿದ್ದರೋ ಅಂತಹವರ ಜಮೀನಿನಲ್ಲಿ ಇವರುಗಳು ಹೋಗಿ ದುಡಿಮೆ ಮಾಡಬೇಕಾಗುತ್ತಿತ್ತು ; ಜೊತೆಗೆ ಆ ಜಾಗದ ಯಜಮಾನನು ಆ ಗುಡಿಸಲುಗಳನ್ನು ಕಿತ್ತು ಹಾಕಬೇಕೆಂದು ಹೇಳಿದರೆ, ಅವರುಗಳು ಅದೇ ರೀತಿ ಅವುಗಳನ್ನು ಕಿತ್ತು ಬೇರೆ ಕಡೆ ಹೋಗಬೇಕಾದಂಥ ಸ್ಥಿತಿ ಇತ್ತು ; ಈ ರೀತಿಯಲ್ಲಾ ತೊಂದರೆಗಳು ಈ ಬಡಪ್ರಾಣಿಗಳಿಗೆ ಬರುತ್ತಿದ್ದವು ; ಆದರೆ ಇಂದು ಈ ದರಿದ್ರ ನಾರಾಯಣನಿಗೆ ತನ್ನದೇ ಆದಂಥ ಒಂದು ಮನೆ ಕಟ್ಟಿಸಿಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ. ನಮಗೆ ಸ್ವಾತಂತ್ರ್ಯ ಬಂದು 27 ವರ್ಷಗಳಾದವು ಅಲ್ಲಿನಿಂದ ಇಲ್ಲಿಯವರೆಗೆ 3-4 ಚುನಾವಣೆಗಳಾದವು, ಇಲ್ಲಿಯವರೆಗೆ ಆಡಳಿತ ನಡೆಸಿದವರಿಗೆ ಇಂತಹ ಒಂದು ಅನುಕೂಲವನ್ನು ಬಡ ಜನರಿಗೆ ಮಾಡಬೇಕೆಂಬತಕ್ಕಂಥ ಒಂದು ಯೋಜನೆ 'ಏತಕ್ಕೆ ಹೊಳೆಯಲಿಲ್ಲವೋ ನನಗೆ ಅರ್ಥವಾಗಿಲ್ಲ, ಆದರೆ 1972ರಲ್ಲಿ ಚುನಾವಣೆ ಆದಮೇಲೆ ಅಧಿಕಾರಕ್ಕೆ ಬಂದ ಸರ್ಕಾರದವರು ಇಂತಹ ಒಂದು ನಿರ್ಧಾರಕ್ಕೆ ಬಂದು, ಊರಿನಲ್ಲಿಯಾಗಲೀ, ಅಡವಿಯಲ್ಲಾ

ಗಳಿಗೆ ಯಾರಿಗೆ ಸ್ವಂತವಾಗಿ ಮನೆ ಇಲ್ಲವೋ ಅಂತಹವರಿಗೆ ಪುಕ್ಕಟೆಯಾಗಿ ಸೈಟುಗಳನ್ನು ಹಂಚು ವುದರ ಮೂಲಕ ಮನೆಗಳನ್ನು ಕಟ್ಟಿಸಿಕೊಳ್ಳಲು ಸಹಾಯ ಮಾಡುತ್ತಿದ್ದಾರೆ. ಇದರಿಂದ ಅವರೂ ಸಹ ತಮಗೆ ಒಂದು ಸ್ವಂತವಾದ ಮನೆ ಇದೆ ಎಂದು ಹೇಳಿಕೊಳ್ಳುವಂತಹ ಪರಿಸ್ಥಿತಿ ಉಂಟಾಗಿದೆ. ಈಗಾಗಲೇ ಸರ್ಕಾರದವರು 5 ಲಕ್ಷ ಜನರಿಗೆ ಸೈಟುಗಳನ್ನು ಹಂಚಿದ್ದಾರೆ. ಇನ್ನೂ 2ಲಕ್ಷ ಜನರಿಗೆ ಹಂಚುವವರಿದ್ದಾರೆ. ಯಾವುದೋ ಒಂದು ಹಳೆಯ ಕಾಲಕ್ಕೆ ಅಂದರೆ 197 ರಲ್ಲಿ ಸರ್ವೆ ಮಾಡಿದ ಆಧಾರದಿಂದ ಇಷ್ಟು ಸೈಟಗಳನ್ನು ಹಂಚಲಾಗುತ್ತಿದೆ. ಆದರೆ ಇವರ ಸಂಖ್ಯೆ ಈಗ ಹೆಚ್ಚಾಗಿರ ಬಹುದು, ಆದಕಾರಣ ಪ್ರತಿಯೊಂದು ಹಳ್ಳಿಯಲ್ಲಿಯೂ ಪುನ: ಸರ್ವೆ ಮಾಡಿಸಿ ಮತ್ತೆ 4 - 3 ಲಕ್ಷ ಹೊಸ ಕುಟುಂಬಗಳು ಇರುವುದು ಕಂಡುಬಂದರೆ ಅವರಿಗೂ ಸಹ ಸೈಟ ಹಂಚಬೇಕೆಂದು ನಾನು ಸರ್ಕಾರದವರಲ್ಲಿ ಬೇಡಿಕೊಳ್ಳುತ್ತೇನೆ.

ಇನ್ನು ಸರ್ಕಾರದವರು ಜಾರಿಗೆ ತಂದಿರುವ ಭೂಸುಧಾರಣೆಯಿಂದ ಭೂಮಿ ಇಲ್ಲದವರಿಗೆ ಭೂಮಿ ಸಿಗಬಹುದು, ಯಾರು ಭೂಮಿಯಲ್ಲಿ ದುಡಿಮೆ ಮಾಡುತ್ತಿದ್ದಾರೆ, ಅಂತಹವರಿಗೆ ಮಾತ್ರ ಭೂಮಿ ಇರಬೇಕೆಂಬ ವಾದನ್ನು ನಾವು ಮೊದಲಿನಿಂದಲೂ ಹೇಳುತ್ತಾ ಬಂದಿದ್ದೇವೆ. ಅಂತಹ ಒಂದು ಕನಸು ನನಸಾಗುತ್ತಿರುವುದನ್ನು ಇಂದು ನಾವು ನೋಡುತ್ತಿದ್ದೇವೆ. ಈ ಮನೆಯ ಸದಸ್ಯರುಗಳು ಭೂಪಂಚಾಯಿತಿಗಳ ಸದಸ್ಯರು ಆಗಿದ್ದೇವೆ. ಅದರಂತೆ ನಾವುಗಳು ಈಗಾಗಲೇ ಫಾರಂ ನಂಬರ್ 7 ಎನಿದೆ. ಅಂದರೆ ಭೂಮಿಯಲ್ಲಿ ಟೆನೆಂಟ್ ಅವರು ಯಾರಿದ್ದಾರೆ ಅಂತಹವರಿಗೆ ಪಟ್ಟಾ ಕೊಡಲು ವ್ಯವಸ್ಥೆ ಮಾಡುತ್ತಿದ್ದೇವೆ. ಮತ್ತು ಅವರ ಹೆಸರಿಗೆ ಖಾತೆಯನ್ನು ಬದ ಲಾವಣೆ ಮಾಡಿಕೊಡುತ್ತಿದ್ದೇವೆ. ಇಂತಹ ಒಂದು ಕೆಲಸ ಮಾಡುವಂತಹ ಸೌಭಾಗ್ಯ 1972ರಲ್ಲಿ ಆರಿಸಿ ಬಂದಂಥ ಸದಸ್ಯರಿಗೆ ಸಿಕ್ಕಿದೆ. ಇದರ ಜೊತೆಗೆ ಈಗ 200-300 ಎಕರೆ ಜಮೀನು ಇರು ವವರು ಅಂದರೆ ಸೀಲಿಂಗಿಗಿಂತ ಹೆಚ್ಚು ಜಮೀನು ಇರುವವರು ಡಿಕ್ಲರೇಷನ್ ಕೊಡುತ್ತಿದ್ದಾರೆ. ಅಂತಹವರಿಂದ ಹೆಚ್ಚುವರಿ ಜಮೀನನ್ನು ಸರ್ಕಾರದವರು ಪಡೆದುಕೊಂಡು ಯಾರು ಭೂಹೀನ ರಿದ್ದಾರೆ, ಯಾರು ಕೂಲಿಗಾರರಿದ್ದಾರೆ ಅಂತಹವರಿಗೆ ಪ್ರಥಮಸ್ಥಾನ ಕೊಡುವುದರ ಮೂಲಕ ಹಂಚಬೇಕೆಂದು ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡಿದೆ. ಅದರಂತೆ ಪ್ರತೀ ತಾಲ್ಲೂಕಿ ನಲ್ಲಿರತಕ್ಕಂಥ ಲ್ಯಾಂಡ್ ಟ್ರಿಬ್ಯೂನಲ್ ಮೂಲಕ ಹೆಚ್ಚುವರಿ ಭೂಮಿಯನ್ನು ಹಂಚಲಾಗುತ್ತಿದೆ.

ಇನ್ನು ಜನತಾ ವಸತಿ ಯೋಜನೆಯ ಮೂಲಕ 35 ಸಾವಿರ ಮನೆಗಳನ್ನು ಕಟ್ಟಿಸುತ್ತಿದ್ದಾರೆ. ಇವುಗಳ ಪೈಕಿ 17 ಸಾವಿರ ಮನೆಗಳು ಕಂಪ್ಲೀಟ್ ಆಗಿವೆ. ಇನ್ನೂ 15-16 ಸಾವಿರ ಮನೆಗಳ ಕೆಲಸ ಬೇರೆಬೇರೆ ಸ್ಟೇಜಿನಲ್ಲಿವೆ. ಅವುಗಳ ಕೆಲಸವನ್ನು ಜಾಗ್ರತೆ ಮುಗಿಸುವಂತಾಗಲು ಮುಂದಿನ ಬಡ್ಜೆಟ್ಟಿನಲ್ಲಿ ಹೆಚ್ಚಿನ ಹಣವನ್ನು ಒದಗಿಸುವುದರ ಮೂಲಕ ಬಡಜನರಿಗೆ ಅನುಕೂಲ ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರದವರಲ್ಲಿ ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ಬೀದರೆ ಜಿಲ್ಲೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಗೋಧಾವರಿ ಡಿಸ್ ಪ್ಯೂಟನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ದೇವರಾಜ ಅರಸ್ ಅವರು ಸರಿಪಡಿಸಿದ್ದಾರೆ ಇದು ಆಗದಿದ್ದರೆ ನಮ್ಮ ಭಾಗದ ಕಾರಂಜಾ ಪ್ರಾಜೆಕ್ಟ್ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗು ತ್ತಿರಲಿಲ್ಲ, ನಮ್ಮ ಭಾಗದಲ್ಲಿ ಇದೊಂದು ಮೀಡಿಯಂ ನೀರಾವರಿ ಯೋಜನೆ ಇದ್ದದು; ಈಗ ಇದನ್ನು ಕೈಕೊಳ್ಳಲು ಕೇಂದ್ರಸರ್ಕಾರದಿಂದ ಗ್ರೀನ್ ಸಿಗ್ನಲ್ ಸಿಕ್ಕುತ್ತದೆ. ಇದು 16 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಆಗಿದೆ. ಆದಕಾರಣ ಇದಕ್ಕೆ ಮುಂದಿನ ಬಡೆಟ್ಟಿನಲ್ಲಿ 3-4 ಕೋಟಿ ರೂಪಾಯಿಗಳನ್ನು ಒದಗಿಸಬೇಕು ಮತ್ತು ಇದನ್ನು 2-3 ವರ್ಷಗಳಲ್ಲಿ ಮುಗಿಸಿದ್ದೇ ಆದರೆ ನಮ್ಮ ಭಾಗದಲ್ಲಿ 10-15 ಸಾವಿರ ಎಕರೆಗಳಿಗೆ ನೀರಾವರಿ ಸೌಲಭ್ಯ ಸಿಗುತ್ತದೆ. ಇದೇ ತಿಂಗಳು 14 ರಂದು ಮಾಂಜ್ರಾ ಪ್ರಾಜೆಕ್ಟಿಗೆ ಆಂಧ್ರದ ಮುಖ್ಯಮಂತ್ರಿಗಳು ಬಂದು ಫೌಂಡೇಶನ್ ಸ್ಟೋನ್ ಇಡುವವರಿದ್ದಾರೆ. ಅಂದು ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಅದನ್ನು ಪ್ರಿಸೈಡ್ ಮಾಡು ವವರಿದ್ದಾರೆ. ಅದಕ್ಕಾಗಿ ಮಾನ್ಯ ಅಧ್ಯಕ್ಷರ ಮೂಲಕ ಆ ಸರ್ಕಾರದವರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ. ನಮ್ಮ ಭಾಗದಲ್ಲಿ ಬರಗಾಲ ಬಂದಾಗ ಸರ್ಕಾರದವರು ಅನೇಕ ರೀತಿಯಿಂದ ಸಹಾಯ ಮಾಡಿದರು. ಅಂದು ಸರ್ಕಾರದವರು ನಮ್ಮ ಸಹಾಯಕ್ಕೆ ಬರದಿದ್ದರೆ ನಮ್ಮ ಗತಿ ಅದೋಗತಿಯಾಗುತ್ತಿತ್ತು. ಈ ಸಲ ನಮ್ಮ ಭಾಗದಲ್ಲಿ ಮಳೆ ಹೆಚ್ಚಾಗಿ ಬಂದ ಕಾರಣ ಮುಂಗಾರು ಬೆಳೆ ಹೋಯಿತು, ಹಿಂಗಾರು ಬೆಳೆ ಬರುವುದೂ ಸಹ ಕಷ್ಟವಾಗಿದೆ. ಈ ಕಾರಣದಿಂದ ಸರ್ಕಾರ

ದವರು ಬೀದರೆ ಜಿಲ್ಲೆಯ ಕಡೆ ಹೆಚ್ಚಿನ ಗಮನ ಕೊಟ್ಟು, ಅಲ್ಲಿಯ ಬಡಜನರಿಗೆ ಸ್ವಲ್ಪ ಸಹಾಯ ಮಾಡಬೇಕು, ಅಂದರೆ ಆ ಭಾಗದಲ್ಲಿ ರಸ್ತೆಗಳ ಕೆಲಸವನ್ನು ಮತ್ತು ಪ್ರಾಜೆಕ್ಟ್‌ಗಳ ಕೆಲಸವನ್ನು ಹೆಚ್ಚಿನ ರೀತಿಯಲ್ಲಿ ತೆಗೆದುಕೊಳ್ಳುವುದರ ಮೂಲಕ ಹೆಚ್ಚಿನ ಜನರಿಗೆ ಕೆಲಸ ಒದಗಿಸಬೇಕೆಂದು ಅಧ್ಯಕ್ಷರ ಮೂಲಕ ಬೇಡಿಕೊಂಡು ನನಗೆ ಇವೊತ್ತಿನ ದಿವಸ ನಾಲ್ಕು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಜಿ. ಚನ್ನಪ್ಪ (ಮಾಗಡಿ)—ಮಾನ್ಯ ಸಭಾಧ್ಯಕ್ಷರೇ, ಈ ದಿವಸ ನಮ್ಮ ರಾಜ್ಯಪಾಲರ ಭಾಷಣದ ಮೇಲೆ ನನಗೆ ಮಾತನಾಡುವುದಕ್ಕೆ ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕಾಗಿ ಮೊಟ್ಟ ಮೊದಲಾಗಿ ಅವರನ್ನು ವಂದಿಸಿ ಕೆಲವು ವಿಷಯಗಳನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ಎಲ್ಲಾ ವಿಷಯಗಳಲ್ಲೂ ಎಲ್ಲಾ ಸದಸ್ಯರುಗಳೂ ಕೂಡ ಯಾವ ಯಾವ ಇಲಾಖೆಗಳಲ್ಲಿ ಏನೇನು ಕುಂದುಕೊರತೆಗಳು ಇವೆ ಅದರಲ್ಲಿ ಏನೇನು ಲೋಪದೋಷಗಳು ಇವೆ ಅನ್ನುವುದನ್ನು ಈ ಸಭೆಯ ಗಮನಕ್ಕೆ ತಂದಿದ್ದಾರೆ. ಆದರೆ ನಾನು ಅಭಿವೃದ್ಧಿ ಇಲಾಖೆ ಬಗ್ಗೆ ಕೆಲವು ವಿಷಯಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುವುದಕ್ಕೆ ಇಚ್ಛೆಪಡುತ್ತೇನೆ.

ಈಗ ನಮ್ಮ ದೇಶದಲ್ಲಿ ಕಳೆದ ೫ ವರ್ಷದಿಂದಲೂ ಕೂಡ, ನಾವು ಚುನಾಯಿತರಾಗಿ ಬಂದಾಗಿನಿಂದಲೂ ಕೂಡ ಈ ವರದಿಗಳನ್ನು ಪುನರ್ವಿಮರ್ಶೆ ಮಾಡುತ್ತಾ ಬಂದಿದ್ದೇವೆ. ಯಥಾವತ್ತಾಗಿ ನಾವು ಅದನ್ನೇ ಕೇಳುತ್ತಿದ್ದೇವೆ ನೀವೂ ಕೂಡ ಹೇಳಿದ್ದನ್ನೇ ಹೇಳುತ್ತಿದ್ದೀರಿ. ಬೇರೆ ಇನ್ನಾವುದಕ್ಕೂ ಕೂಡ ಗಮನ ಬರುತ್ತಾ ಇಲ್ಲ. ನಾವು ಹೇಳಿದ್ದನ್ನು ಹೇಳುತ್ತಾ ಇದ್ದೇವೆ ಅದಕ್ಕೆ ನೀವು ಹೇಳಿದ್ದನ್ನು ಕೇಳಿಕೊಳ್ಳುತ್ತಿದ್ದೇವೆ. ಆದುದರಿಂದ ಇದರಲ್ಲಿ ಅಷ್ಟರಮಟ್ಟಿಗೆ ಫಲಪ್ರದವಾಗಿದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆದರೆ ಕೆಲವು ದಿಶೆಯಲ್ಲಿ ಹೆಚ್ಚಿನ ಅನುಕೂಲತೆಗಳು ಆಗಿವೆ. ಇನ್ನು ಕೆಲವು ಆಗಬೇಕಾದ್ದೂ ಇವೆ. ಇದಕ್ಕೆ ಆಡಳಿತ ಅಧಿಕಾರಿಗಳು ಹೆಚ್ಚಿನ ಗಮನಹರಿಸಬೇಕು. ಇದಕ್ಕೆ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳನ್ನೂ ಮತ್ತು ಮಂತ್ರಿಗಳನ್ನೂ ನಾನು ಕೇಳಿಕೊಳ್ಳುತ್ತೇನೆ. ಈ ಸಹಕಾರೀ ಕ್ಷೇತ್ರದಲ್ಲಿ ನಮ್ಮ ಸ್ನೇಹಿತರು ಅನೇಕ ಲೋಪದೋಷಗಳನ್ನು ಹೇಳಿದ್ದಾರೆ ಕಳೆದ ೫ ವರ್ಷದಿಂದಲೂ ಕೂಡ ಏನು ಇದರ ಬಗ್ಗೆ ಲೋಪದೋಷಗಳನ್ನು ಹೇಳುತ್ತಾ ಇದ್ದೇವೆ ಆ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಇದುವರೆಗೂ ಆಗಿಲ್ಲ. ಅನೇಕ ಸೊಸೈಟಿಗಳು ಇನ್ನೂ ತಮ್ಮ ದುರಾಡಳಿತವನ್ನು ನಡೆಸುತ್ತಿದ್ದಾರೆ. ಇದನ್ನು ನಾವು ತಮ್ಮ ಗಮನಕ್ಕೆ ತರದೇಹೋದರೆ ಸರಿಯೇ ? ನನಗೆ ಇದರಲ್ಲಿ ಏನೂ ಅರ್ಥವಾಗುತ್ತಾ ಇಲ್ಲ. ಏತಕ್ಕೆಂದರೆ ಇದರಲ್ಲಿ ಎಲ್ಲಾ ಪಕ್ಷದವರೂ ಇದ್ದಾರೆ. ಹಿಂದೆ ಆಳಿದಂಥಾವರೂ ಇದ್ದಾರೆ, ಮುಂದೆ ಆಳತಕ್ಕಂಥಾವರೂ ಇದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ಎಲ್ಲರಲ್ಲೂ ಕೈವಾಡ ಇದೆ. ಯಾರನ್ನೂ ಸರಿ ಮಾಡುವುದಕ್ಕೆ ಆಗಿಲ್ಲ. ಇದು ನಮ್ಮ ಅಧಿಕಾರಿಗಳ ಅದಕ್ಷತೆ ತೋರಿಸುತ್ತದೆ ಎಂದರೆ ತಪ್ಪಾಗಲಾರದು. ಈವೊತ್ತಿನ ದಿವಸ ನಾವೆಲ್ಲರೂ ಎಲ್ಲಾ ಕ್ಷೇತ್ರದಲ್ಲೂ ಬಡವರ ಚಿಂತನೆ ಹೇಳುತ್ತಾ ಇದ್ದೇವೆ, ಬಡವರಿಗೆ ಅನುಕೂಲವಾಗಬೇಕು, ಬಡವರು ಮುಂದೆ ಬರಬೇಕು ಎಂದು ಹೇಳುತ್ತಿದ್ದೇವೆ. ಯಾವ ಕ್ಷೇತ್ರದಲ್ಲಿ ಯಾವ ಒಂದು ಸೊಸೈಟಿಯನ್ನೇ ತೆಗೆದುಕೊಳ್ಳಿ. ಈ ಒಂದು ಸಣ್ಣ ಹಿಡುವಳಿದಾರರ ಕ್ಷೇತ್ರ ತೆಗೆದುಕೊಂಡರೆ ಒಬ್ಬ ಬಡವ ೫೦೦ ಕ್ಕೋ ಒಂದು ಸಾವಿರಕ್ಕೋ ಸಾಲಕ್ಕೆ ಅರ್ಜಿ ಹಾಕಿದರೆ ಅದನ್ನು ಮಂಜೂರು ಮಾಡಿಸಿಕೊಳ್ಳುವ ಹೊತ್ತಿಗೆ ಅವನಿಗೆ ೨೦೦-೩೦೦ ರೂಪಾಯಿ ಖರ್ಚಾಗಿರುತ್ತದೆ. ಅದಕ್ಕೆ ನಾನು ಹೇಳುವುದು ಅವನಿಗೆ ಸಾಲ ಮಂಜೂರಾಗುವುದಕ್ಕೆ ಒಂದು ನಿಗದಿಯಾದ ಸಾಲ ಕೊಟ್ಟು ಅವನಿಗೆ ತಲುಪುವಂತೆ ಮಾಡಬೇಕು. ಒಂದು ವೇಳೆ ಅವನಿಗೆ ನಿಗದಿಯಾದ ಕಾಲದಲ್ಲಿ ಸಾಲ ಕೊಡದೇ ಹೋದರೆ ಅದಕ್ಕೆ ಕಾರಣ ಏನು ಎನ್ನುವ ಬಗ್ಗೆ ಒಂದು ರಿಪೋರ್ಟ್ ಕೊಡತಕ್ಕಂಥಾ ಒಂದು ವ್ಯವಸ್ಥೆ ಮಾಡಿದರೆ ಒಳ್ಳೆಯದು ಎಂದು ನನಗೆ ಅನಿಸುತ್ತೆ. ಈಗ ಇದರಲ್ಲಿರತಕ್ಕಂಥ ಈ ಒಂದು ಲೋಪದೋಷ ತೆಗೆದುಹಾಕಿ ಅವನಿಗೆ ಅರ್ಜಿ ಕೊಟ್ಟ ತಕ್ಷಣ ಒಂದು ನಿಗದಿಯಾದ ವೇಳೆಗೆ ಸಾಲ ಸಿಗುವ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ವ್ಯವಸಾಯದ ಕ್ಷೇತ್ರದಲ್ಲಿ ತೆಗೆದುಕೊಳ್ಳುವುದಾದರೆ ಈ ವ್ಯವಸಾಯ ಕ್ಷೇತ್ರದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿದ್ದೇವೆ ಎಂದು ಹೇಳುತ್ತಿದ್ದೀರಿ. ಈ ಆಹಾರಧಾನ್ಯಗಳ ಧಾರಣೆಗಳು ಇಳಿದಿದೆ ಎಂದು ಹೇಳುತ್ತಾ ಇದ್ದೀರಿ. ಆದರೆ ರೈತನಿಗೆ ಬೇಕಾದಂಥ ಸಲಕರಣೆಗಳ ಧಾರಣೆ ಏರುತ್ತಾ ಇದೆ ಅವನಿಗೆ ಅವನು ಬೆಳೆಯತಕ್ಕಂಥಾ ಬೆಳೆಗೆ ಸರಿಯಾದ ಧಾರಣೆ ಸಿಗದೆ ಅವನು ಕುಸಿದಿದ್ದಾನೆ ಈ ಬಗ್ಗೆ

ನನ್ನ ಸಲಹೆ ಏನೆಂದರೆ ಸರ್ಕಾರದವರು ಅವನಿಗೆ ಹೆಚ್ಚು ಲಾಭ ಕೊಡುವುದೇನೂ ಬೇಡ. ಅವನಿಗೆ ಲಂಕ್ಷಾನು ಆಗದೇ ಇರುವ ರೀತಿಯಲ್ಲಿ ಇದಕ್ಕೆ ತಜ್ಞರ ಒಂದು ಸಮಿತಿಯನ್ನು ನೇಮಕ ಮಾಡಿ ಆ ರೈತನಿಗೆ ತಾನು ಬೆಳದಂಥ ಬೆಳೆಗೆ ಅಲ್ಪ ಸ್ವಲ್ಪ ಲಾಭ ಬರುವಂತೆ ಒಂದು ಮಾರ್ಕೆಟ್ ವ್ಯವಸ್ಥೆ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಇದಕ್ಕೆ ಸಂಬಂಧಪಟ್ಟ ಸಚಿವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಈ ಕೆಲಸ ಅತಿ ಜಾಗ್ರತೆಯಾಗಿ ಆಗಬೇಕು. ಈವೊತ್ತಿನ ದಿವಸ ಬೇರೆಯವರು ಕೊಳ್ಳುವುದಕ್ಕೆ ಹೆದರುತ್ತಾರೆ. ಸರ್ಕಾರದವರು ತೆಗೆದುಕೊಳ್ಳಿ ಎಂದರೆ ಅದನ್ನು ಕೊಂಡುಕೊಳ್ಳುವುದಕ್ಕೆ ನಮಗೆ ಅನುಮತಿ ಕೊಟ್ಟಿಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ ಈವೊತ್ತಿನ ದಿವಸ ರೈತರಿಗೆ ಇಂಥಾ ಪರಿಸ್ಥಿತಿ ಇರುವಾಗ ಸಾಲದ ಹೊರೆ ಇರತಕ್ಕಂಥಾ ಜನಗಳಿಗೆ ಅವರು ಯಾವ ರೀತಿಯಾಗಿ ಇದರಿಂದ ಸೌಲಭ್ಯ ಸಿಗುತ್ತದೆ ಅಲ್ಲದೆ ಅವರಿಗೆ ಯಾವರೀತಿಯಾದಂಥಾ ಋಣ ಅವರಿಗೆ ನಿವಾರಣೆಯಾಗುತ್ತದೆ. ಇದರಿಂದ ರೈತರು ಯಾವ ಮಾರ್ಗವೂ ಕಾಣದೆ ಬಹಳ ಕಂಗಾಲಾಗಿದ್ದಾರೆ. ಅದಕ್ಕೆ ಒಂದು ವ್ಯವಸ್ಥೆ ಮಾಡಿಕೊಡಬೇಕು ಎಂದು ಈ ಸಂದರ್ಭದಲ್ಲಿ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಚಾರ ರೈತರಿಗೆ ಸಂಬಂಧಪಟ್ಟಂತೆ ಹೇಳಬೇಕಾಗಿದೆ ರೈತರು ೧೯೬೨ನೇ ಇಸವಿಯಿಂದ ಸಾಲ ಮುಂದೂಡುತ್ತಾ ಬಂದು ಈಗ ಒಂದೇಸಾರಿ ಪಾವತಿ ಮಾಡಿ ಎಂದರೆ ಹೇಗೆ ಸಾಧ್ಯ ೧೯೬೨ನೇ ಇಸವಿಯಲ್ಲಿ ಏನು ಪಂಪ್‌ಸೆಟ್ಟನ್ನು ತೆಗೆದುಕೊಂಡಿದ್ದರು ಆ ಸಾಲವನ್ನು ಇದುವರೆಗೂ ಮಳೆ ಇರಲಿಲ್ಲ, ಅವನಿಗೆ ಬೆಳೆ ಇರಲಿಲ್ಲ ಅಂತ ಹೇಳಿ ಮುಂದೂಡುತ್ತಾ ಬಂದು ಈಗ ಅವರ ಹತ್ತಿರ ಬಂದು ಈ ಸಾಲವನ್ನು ಒಂದೇ ಸಲ ತೀರಿಸಬೇಕು ಎಂದು ಆಜ್ಞೆ ಮಾಡುತ್ತಿದ್ದಾರೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ ಆದುದರಿಂದ ಈ ಬಗ್ಗೆ ನಾನು ಹೇಳುವುದು ವರ್ಷೇ ವರ್ಷೇ ಇದರ ಬಗ್ಗೆ ಸ್ವಲ್ಪ ಸ್ವಲ್ಪ ಸಾಲ ಕಟ್ಟುವುದಕ್ಕೆ ಅವಕಾಶ ಮಾಡಿಕೊಡಿ. ಒಂದೇ ವರ್ಷದಲ್ಲಿ ಎಲ್ಲ ಸಾಲವನ್ನೂ ತೀರಿಸುವುದಕ್ಕೆ ಅವನಿಗೆ ಸಾಧ್ಯವಾಗಿದ್ದರೆ ಆತ ಸರ್ಕಾರದಲ್ಲಿ ಸಾಲ ಮಾಡುವುದಕ್ಕೆ ಬರುತ್ತಿರಲಿಲ್ಲ. ಈಗ ಅವನ ಸ್ಥಿತಿ ಚಿಂತಾಜನಕವಾಗಿದೆ. ಒಂದು ಕಡೆ ಸಾಲದ ಹೆದರಿಕೆ ಇನ್ನೊಂದು ಕಡೆ ಈ ವ್ಯವಸಾಯಕ್ಕೆ ಬೇಕಾದಂತ ಸಲಕರಣೆಗಳು ಏನು ಇದೆ ಪಂಪ್‌ಸೆಟ್ಸ್ ಇಂತಹವುಗಳನ್ನು ಆತ ಸಾಲ ಕೊಡಲಿಲ್ಲ ಎಂದು ಸೀಸ್ ಮಾಡಿಕೊಂಡು ಸರ್ಕಾರದ ವಶದಲ್ಲಿ ಇಟ್ಟುಕೊಂಡಿದ್ದಾರೆ. ಇದರಿಂದ ಆ ರೈತನಿಗೆ ಹಾಕಿರತಕ್ಕಂಥಾ ಬೆಳಗಳ ಕಡೆ ಲಕ್ಷ್ಯ ಇಲ್ಲದೆ ಅವನು ಹಾಕಿರತಕ್ಕಂಥಾ ಮುಸುಕಿನ ಜೋಳ ಬತ್ತ, ಕಬ್ಬು ವಗೈರೆ ಹಾಳಾಗಿ ಬೆಳೆಗಳು ವಿನಾ ಕಾರಣ ಹೋಗುತ್ತಾ ಇದೆ ಈ ಬಗ್ಗೆ ನನ್ನ ಒಂದು ಸಲಹೆ ಏನೆಂದರೆ ಬೆಳೆಗಳು ಇರತಕ್ಕಂಥ ಕಡೆಗಳಲ್ಲಿ ಪಂಪ್‌ಸೆಟ್ಟುಗಳನ್ನು ಯಾವ ವಿಧದಲ್ಲೂ ತೆಗೆದುಕೊಂಡು ಬರಕೂಡದು ಎಂದು ಮಾಡಿ ಇಲ್ಲದೇ ಹೋದರೆ ಆ ಬೆಳೆಗಳನ್ನು ಆಧಾರವಾಗಿ ತೆಗೆದುಕೊಂಡು ಆತನು ತೆಗೆದುಕೊಂಡಂಥಾ ಸಾಲಕ್ಕೆ ಮುಟ್ಟು ಗೋಲು ಹಾಕಿಕೊಳ್ಳುವಂಥಾ ಒಂದು ವ್ಯವಸ್ಥೆ ಮಾಡಿ. ಹೀಗೆ ಮಾಡಿದರೆ ಆ ರೈತ ಆ ಸಾಲದಿಂದಲಾದರೂ ಋಣಮುಕ್ತನಾಗುತ್ತಾನೆ. ಒಳ್ಳೆ ಹೊಡೆ ಬರುವ ಕಾಲದಲ್ಲಿ ಅವನು ಸಾಲ ಕಟ್ಟಲಿಲ್ಲ ಎಂದು ಅವನ ಹತ್ತಿರ ಇದ್ದ ಪಂಪ್‌ಸೆಟ್‌ನ್ನು ಕಿತ್ತುಕೊಂಡು ಬಂದು ತಾಲ್ಲೂಕು ಆಫೀಸ್‌ನಲ್ಲಿ ಇಟ್ಟುಕೊಂಡು ಬಿಟ್ಟರೆ ಅವನ ಸಾಲ ಹೇಗೆ ತೀರಬೇಕು ಅಲ್ಲದೆ ಅವನು ಬೆಳೆದ ಬೆಳೆಯೆಲ್ಲಾ ಹಾಳಾಗಿ ಬಿಟ್ಟರೆ ಅವನು ಏನು ಮಾಡಬೇಕು. ಇದರಿಂದ ಅವನಿಗೆ ಮತ್ತಷ್ಟು ಹೊರೆಯಾದಂತಾಗುತ್ತದೆ. ಇಂಥಾ ಒಂದು ಪರಿಸ್ಥಿತಿ ಈವೊತ್ತು ರೈತನಿಗೆ ಇದೆ, ಆದುದರಿಂದ ಇಂಥಾ ಒಂದು ಪರಿಸ್ಥಿತಿಯನ್ನು ತಪ್ಪಿಸಬೇಕು ಎಂದು ಹೇಳುತ್ತೇನೆ. ಈ ಬಗ್ಗೆ ಯಾವರೀತಿಯಿಂದಲೂ ಕೂಡ ಅವನ ಪಂಪ್‌ಸೆಟ್ಸ್ ಮತ್ತು ಆದರ ಸಲಕರಣೆಗಳನ್ನು ಸೀಸ್ ಮಾಡಿಕೊಡದು ಎಂದು ಸರ್ಕಾರ ಒಂದು ಆಜ್ಞೆ ಹೊರಡಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಸೈಟುಗಳ ವಿತರಣೆ ಬಗ್ಗೆ ಹೇಳಿದ್ದಾರೆ. ನಿಜವಾಗಿಯೂ ಇದು ಶ್ಲಾಘನೀಯವಾದ ವಿಚಾರ ಬಡವರಿಗೆ, ನೊಂದವರಿಗೆ ಸ್ವಲ್ಪವಾದರೂ ಜಾಗ ಸಿಕ್ಕುತ್ತಾ ಇದೆಯಲ್ಲಾ ಅಂತ ನಾವು ಸಂತೋಷಪಡಬೇಕು. ಅದರಲ್ಲೂ ಕೂಡ ಅನೇಕ ಲೋಪದೋಷಗಳು ಇವೆ ಅನೇಕ ಅಧಿಕಾರಿಗಳು ಒಂದು ಸೈಟಿಗೆ ೧೫–೨೦–೩೦ ರೂಪಾಯಿಗಳನ್ನು ತೆಗೆದುಕೊಂಡು ಆ ಸೈಟನ್ನು ಪೊಸಿಷನ್‌ಗೆ ಕೊಡತಕ್ಕಂಥಾ ಕೇಸುಗಳು ಅನೇಕ ಇವೆ. ಇದು ಮೆಜಾರಿಟಿಯಾಗಿದೆಯೇ ಇದೆ ಎಂದು ಹೇಳಿದರೆ ತಪ್ಪಾಗಲಾರದು. ಸೈಟುಗಳು ಸಿಕ್ಕುವುದಿಲ್ಲ ಅಂತ ಒಂದು ಭೀತಿಯನ್ನು ಅವನಿಗೆ ಹೇಳಿ ಈ ಅಧಿಕಾರಿಗಳು ಈ ರೀತಿಯಾದಂಥ ಒಂದು ಸಂಪಾದನೆ ಮಾಡತಕ್ಕಂಥ ಸಂದರ್ಭದಲ್ಲಿ, ಇಂಥಾ ಪ್ರಕರಣಗಳು ಕಂಡುಬಂದಲ್ಲಿ ಅಂಥವರಿಗೆ ಒಂದು ಹೆಚ್ಚಿನ ಶಿಕ್ಷೆಯನ್ನು ಕೊಡಬೇಕು ಎಂದು ಹೇಳುತ್ತೇನೆ. ಈ ಒಂದು ಪದ್ಧತಿಯನ್ನು ತಪ್ಪಿಸುವುದಕ್ಕೆ ಸಹಾಯ ಮಾಡಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಎಲೆಕ್ಟ್ರಿಸಿಟಿ ವಿಚಾರದಲ್ಲಿ ಹೇಳುವುದಾದರೆ ಈ ಬಗ್ಗೆ ೩-೪ ವರ್ಷದಿಂದಲೂ ಕೂಡ ಡಿಮ್ಯಾಂಡ್ ಚಾರ್ಜಸ್ ತೆಗೆದುಕೊಳ್ಳುತ್ತಿರುವುದು ಇನ್ನೂ ತಪ್ಪಿಲ್ಲ. ನೀವು ಇದನ್ನು ಮುಂದೆ ತೆಗೆದು ಹಾಕುತ್ತೇವೆ ಎಂದು ಹೇಳುತ್ತಿದ್ದೀರೇ ಹೊರತು ಇನ್ನೂ ತಪ್ಪಿಸಿಲ್ಲ. ಅನೇಕ ಜನಗಳು ಹೆದರಿ ಈ ಡಿಮ್ಯಾಂಡ್ ಚಾರ್ಜಸನ್ನು ಕೊಡುತ್ತಿದ್ದಾರೆ. ಅವರು ಈ ಎಲೆಕ್ಟ್ರಿಸಿಟಿಯನ್ನು ಉಪಯೋಗಿಸಿಕೊಳ್ಳಲಿ ಉಪಯೋಗಿಸಿಕೊಳ್ಳದೇ ಇರಲಿ ಈ ಕರೆಂಟ್ ಚಾರ್ಜಸನ್ನು ಕಟ್ಟಬೇಕಾಗುತ್ತದೆ. ಇದನ್ನು ತಪ್ಪಿಸಬೇಕೆಂದು ತಮ್ಮಲ್ಲಿ ಈ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ

ಇನ್ನು ಹಳ್ಳಿಗಳ ರಸ್ತೆಗಳ ವಿಚಾರ ಹೇಳುವುದಾದರೆ ನೀವು ಕ್ಷಾಮ ನಿವಾರಣಾ ಫಂಡ್‌ನಲ್ಲಿ ಖರ್ಚು ಮಾಡಿ ಅನೇಕ ರಸ್ತೆಗಳನ್ನು ಮಾಡಿದ್ದೀರಿ ಆದರೆ ಆ ರಸ್ತೆಗಳಿಗೆ ಸರಿಯಾಗಿ ರಿಪೇರಿ ಕೆಲಸ ಇಲ್ಲದೆ ಅದರಿಂದ ಯಾವ ಉಪಯೋಗವೂ ಕಂಡುಬರುತ್ತಾ ಇಲ್ಲ. ವ್ಯವಸಾಯಗಾರರಿಗೂ ಸೌಕರ್ಯ ಇಲ್ಲ, ಸಾರಿಗೆ ಸೌಕರ್ಯಕ್ಕೂ ಸೌಕರ್ಯ ಇಲ್ಲದಂತೆ ಆ ರಸ್ತೆಗಳು ಹಾಳಾಗಿ ಹೋಗುತ್ತಾ ಇದೆ. ಅವಕ್ಕೆ ಹೆಚ್ಚಿನ ಹಣವನ್ನು ಖರ್ಚು ಮಾಡಿ ಆ ರಸ್ತೆಗಳನ್ನು ದುರಸ್ತು ಮಾಡಿಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನೊಂದು ವಿಚಾರ ಏನೆಂದರೆ ಈ ಎಮರ್ಜೆನ್ಸಿ ಪಿರಿಯಡ್‌ನಲ್ಲಿ ಮೀಸಾ ಕಾನೂನನ್ನು ತಂದಿದ್ದೀರಿ. ಇದನ್ನು ಯಾವ ರೀತಿಯಾಗಿ ಉಪಯೋಗಿಸುತ್ತಾರೆ ಅನ್ನುವುದು ಜನಗಳಿಗೆ ಇನ್ನೂ ತಿಳುವಳಿಕೆಗೆ ಬಂದಿಲ್ಲ. ಅನೇಕ ಅಧಿಕಾರಿಗಳು ಈ ಬಗ್ಗೆ ಮೋಸ ಮಾಡಿ ಸಾಮಾನ್ಯ ಜನಗಳನ್ನು ಹೆದರಿಸುತ್ತಿದ್ದಾರೆ ಅನೇಕರು ಮಾತನಾಡುವುದಕ್ಕೆ ಹೆದರಿ ಮೂಕರಂತೆ ಯಾತನೆಯನ್ನು ಅನುಭವಿಸುತ್ತಿದ್ದಾರೆ. ಅದಕ್ಕಾಗಿ ನಾನು ಹೇಳುವುದು ಏನೆಂದರೆ ಈ ಮೀಸಾ ಕಾನೂನು ಯಾವ ಯಾವ ರೀತಿಯಲ್ಲಿ ಉಪಯೋಗಿಸಬೇಕು ಯಾರ ಮೇಲೆ ಮೀಸಾ ಕಾನೂನು ಹೊರಿಸಬೇಕು ಅನ್ನುವುದರ ಬಗ್ಗೆ ಪತ್ರಿಕೆಗಳ ಮೂಲಕ ಪ್ರಚಾರ ಮಾಡಿ ಜನಗಳಿಗೆ ತಿಳುವಳಿಕೆ ಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ

ಇನ್ನು ಮೈನರ್ ಇರ್ರಿಗೇಷನ್ ವಿಚಾರ, ಈ ದೇಶದ ಸಂಪತ್ತು ವಿಷಯವಾಗಿ ನಾವು ಮಾತನಾಡುವಾಗ ಮೇಜರ್ ಇರ್ರಿಗೇಷನ್ ಕಡೆಗೆ ಸರ್ಕಾರದ ಗಮನ ಸೆಳೆಯುವುದು ಸರಿಯಲ್ಲ. ಸರ್ಕಾರದವರೂ ಅತ್ತಕಡೆಗೆ ಹೆಚ್ಚಿನ ಗಮನವನ್ನು ಕೊಡುತ್ತಿದ್ದಾರೆಯೇ ಹೊರತು ಸಣ್ಣ ನೀರಾವರಿ ಯೋಜನೆಗಳ ಕಡೆಗೆ ಗಮನಕೊಡುತ್ತಿಲ್ಲ ಆ ಕಡೆಗೆ ಹೆಚ್ಚಿನ ಮಟ್ಟದಲ್ಲಿ ಗಮನ ಕೊಟ್ಟಿದ್ದೇ ಆದರೆ ಆದಷ್ಟು ಈ ದೇಶದಲ್ಲಿ ಬಡತನವನ್ನು ನೀಗಿಸುವುದಕ್ಕೆ ಅನುಕೂಲವಾಗುತ್ತದೆ. ಮೇಜರ್ ಇರ್ರಿಗೇಷನ್‌ಗಳನ್ನು ಮಾಡಿದರೆ ಕೇವಲ ಕೆಲವು ಜನರಿಗೆ ಮಾತ್ರ ಅದರಿಂದ ಅನುಕೂಲವಾಗುತ್ತದೆ. ಮೈನರ್ ಇರ್ರಿಗೇಷನ್‌ಗಳನ್ನು ಮಾಡುವುದರಿಂದ ದೇಶಾದ್ಯಂತ ಬಡಜನರನ್ನು ಉತ್ತಮಸ್ಥಿತಿಗೆ ತರುವುದಕ್ಕೆ ಮತ್ತು ಅವರೆಲ್ಲರ ಜೀವನವನ್ನು ಅವರ ಸ್ವಂತ ಕಾಲಿನಮೇಲೆ ನಿಂತು ನಡೆಸಿಕೊಳ್ಳುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಿದಂತಾಗುತ್ತದೆ. ಆದ್ದರಿಂದ ಸರ್ಕಾರದವರು ಮೇಜರ್ ಇರ್ರಿಗೇಷನ್ನಿಗೆ ಕೊಡುವ ಒಂದು ಆದ್ಯತೆಯನ್ನು ಮೈನರ್ ಇರ್ರಿಗೇಷನ್ನಿಗೂ ಕೊಡಬೇಕು. ಹೆಚ್ಚು ಕಡಿಮೆ ಬಡ್ಜೆಟ್ಟಿನಲ್ಲಿ ಇದರ ಬಗ್ಗೆ ಎವರೇಜ್ ಖರ್ಚು ಏನು ಬರುತ್ತದೋ ಅಷ್ಟು ಖರ್ಚುಮಾಡಿ ಮೈನರ್ ಇರ್ರಿಗೇಷನ್ನಿಗೆ ಸರ್ಕಾರದವರು ಹೆಚ್ಚಿಗೆ ಗಮನ ಕೊಡಬೇಕು ಮೈನರ್ ಇರ್ರಿಗೇಷನ್ ಯೋಜನೆಗಳ ಬಗ್ಗೆ ಸರ್ಕಾರದವರು ಅನೇಕ ಕಾರ್ಯಕ್ರಮಗಳನ್ನು ಕೂಡಲೇ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಪ್ರಾರ್ಥನೆ ಮಾಡುತ್ತೇನೆ.

ಇನ್ನು ಹೆಚ್ಚಿಗೆ ಕಾಲಾವಕಾಶವನ್ನು ತೆಗೆದುಕೊಳ್ಳುವುದಕ್ಕೆ ಇಷ್ಟಪಡದೆ, ಮಾನ್ಯ ಸಭಾಧ್ಯಕ್ಷರು ನನಗೆ ಈ ಸಂದರ್ಭದಲ್ಲಿ ಒಂದೆರಡು ವಿಷಯಗಳನ್ನು ಮಾತನಾಡುವುದಕ್ಕೆ ಅವಕಾಶಕೊಟ್ಟಿದ್ದಕ್ಕಾಗಿ ನಾನು ಅವರಿಗೆ ನನ್ನ ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ವೀರಭದ್ರಪ್ಪ (ಕೂಡ್ಲಿಗಿ).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಬಗ್ಗೆ ವಂದನಾರ್ಪಣೆ ನಿರ್ಣಯವನ್ನು ನಾನು ವಿರೋಧಿಸುತ್ತಾ ಕೆಲವು ಸೂಚನೆಗಳನ್ನು ಈ ಸಂದರ್ಭದಲ್ಲಿ ಕೊಡಲಿಕ್ಕೆ ಬಯಸುತ್ತೇನೆ. ಈಗಾಗಲೇ ಮಾನ್ಯ ಸದಸ್ಯರನೇಕರು ಈ ಕಡೆಯಿಂದಲೂ, ಆ ಕಡೆಯಿಂದಲೂ ಅನೇಕ ವಿಚಾರಗಳ ಬಗ್ಗೆ ಮಾತನಾಡಿದ್ದಾರೆ. ಆದರೂ ಕೂಡ ನಾನು ಕೆಲವು ಮುಖ್ಯಾಂಶಗಳನ್ನು ಕುರಿತು ಮಾತ್ರ ಮಾತನಾಡಲು ಬಯಸುತ್ತೇನೆ. ತುರ್ತು ಪರಿಸ್ಥಿತಿ ಬಂದಮೇಲೆ ಅನೇಕ ಇಲಾಖೆಗಳಲ್ಲಿ ಒಳ್ಳೆಯ ಶಿಸ್ತು ಬಂದಿದೆ; ಅಧಿಕಾರಿಗಳೂ ಸಹ ಒಳ್ಳೆಯ ಶಿಸ್ತಿನಿಂದ ನಡೆಯುತ್ತಿದ್ದಾರೆಂಬುದಾಗಿ ಮಾನ್ಯ ಸದಸ್ಯರಲ್ಲಿ

ಅನೇಕರು ಮಾತನಾಡಿದ್ದಾರೆ. ಆದರೆ ಈಗ ಒಂದು ಉದಾಹರಣೆಯನ್ನು ಕೊಡುತ್ತೇನೆ. ನಮ್ಮ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ ೧೩ ಒಂದು ರಸ್ತೆ ಈಗಾಗಲೇ ಪ್ರಾರಂಭಮಾಡಿದ್ದಾರೆ. ಸುಮಾರು ೧೦ ವರ್ಷಗಳು ಆಗಿರಬಹುದು. ಆದರೂ ಇವತ್ತಿನವರೆಗೆ ಅದು ಸಂಪೂರ್ಣ ಆಗಿಲ್ಲ. ಅಲ್ಲಿ ರಸ್ತೆ ಮಾಡಿದ್ದರಿಂದ, ಅಲ್ಲಿನ ಜನರು ಭೂಮಿ ಕಳೆದುಕೊಂಡಿದ್ದರೂ ಅಂತಹವರಿಗೆ ಅದರಲ್ಲಿಯೂ ಬಡ ರೈತರಿಗೆ ಸುಮಾರು ಏಳೆಂಟು ವರ್ಷಗಳಿಂದಲೂ ಯಾವ ಪರಿಹಾರವೂ ಸಿಗಲಿಲ್ಲ. ಇದಕ್ಕೆ ಕಾರಣ ಅಲ್ಲಿಗೆ ಲ್ಯಾಂಡ್ ಅಕ್ವಿಸಿಷನ್ ಆಫೀಸರನ್ನು ಸುಮಾರು ಎರಡು ವರ್ಷಗಳಿಂದಲೂ ನೇಮಿಸದೇ ಇರುವುದೇ ಆಗಿದೆ. ಇಂತಹ ಪರಿಸ್ಥಿತಿಯಲ್ಲಿ ಈಗ ಇಂತಹ ಒಂದು ರಸ್ತೆ ಕಾರ್ಯ ವಿಳಂಬವಾಗುತ್ತಾ ಇರುವುದನ್ನು ನೋಡಿದರೆ ನನಗೆ ಬಹಳ ವಿಷಾದವಾಗುತ್ತದೆ. ಈ ರಾಷ್ಟ್ರೀಯ ಹೆದ್ದಾರಿಯ ಕಾರ್ಯವನ್ನು ಆದಷ್ಟು ತೀವ್ರವಾಗಿ ಮಾಡಲು ಅಲ್ಲಿಗೆ ಒಬ್ಬ ಲ್ಯಾಂಡ್ ಅಕ್ವಿಸಿಷನ್ ಆಫೀಸರನ್ನು ನೇಮಿಸಿ ರೈತರ ಕಷ್ಟಗಳನ್ನು ನಿವಾರಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸುತ್ತೇನೆ.

ನಮ್ಮ ದೇಶದಲ್ಲಿ ಈಗಾಗಲೇ ಅನೇಕ ಪಕ್ಷಗಳ ರಾಜಕಾರಣಿಗಳನ್ನು ಜೈಲಿನಲ್ಲಿಟ್ಟಿದೀರಿ. ಅವರನ್ನೆಲ್ಲಾ ಆದಷ್ಟು ಜಾಗ್ರತೆಯಾಗಿ ಜೈಲಿನಿಂದ ಬಿಡಬೇಕು. ಅವರನ್ನು ಜೈಲಿನಲ್ಲಿ ಬಂಧಿಸಿರುವುದನ್ನು ನಾನು ಖಂಡನೀಯವಾಗಿ ವಿರೋಧಿಸುತ್ತೇನೆ. ಇನ್ನು ಪತ್ರಿಕೆಗಳವರಿಗೆ ಇರತಕ್ಕ ಸ್ವಾತಂತ್ರ್ಯವನ್ನೂ ಸಹ ಮೊಟಕು ಗೊಳಿಸಿದ್ದೀರಿ, ಮೊದಲಿದ್ದ ಹಾಗೆ ಅವರಿಗೆ ಸ್ವಾತಂತ್ರ್ಯ ಕೊಡಬೇಕು. ಇದಕ್ಕಾಗಿ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದೊಡನೆ ವ್ಯವಹರಿಸಿ ಅವರಿಗೆ ಹೆಚ್ಚಿನ ಸ್ವಾತಂತ್ರ್ಯ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಸೂಚಿಸುತ್ತೇನೆ

ಈಗಾಗಲೇ ಅಧಿಕಾರವರ್ಗದಲ್ಲಿ ಕಡ್ಡಾಯ ನಿವೃತ್ತಿಮಾಡುವ ಕಾನೂನನ್ನು ಜಾರಿಗೆ ತಂದಿದ್ದೀರಿ. ಇದರಿಂದ ಈಗ ಅನೇಕರು ಅತೃಪ್ತಿಯಿಂದ ನಿರಾಶೆ ವ್ಯಕ್ತಪಡಿಸುತ್ತಿದ್ದಾರೆ. ಅಧಿಕಾರಿಗಳಿಗೆ ಕನಿಷ್ಠ ಪಕ್ಷ ಒಂದು ನೋಟೀಸು ಕೊಟ್ಟು ಅವರಿಂದ ವಿವರಣೆಗಳನ್ನು ತೆಗೆದುಕೊಂಡು ಆಮೇಲೆ ಅವರನ್ನು ಕಡ್ಡಾಯವಾಗಿ ನಿವೃತ್ತಿಮಾಡಿದ್ದರೆ ಬಹಳ ಒಳಿತಾಗುತ್ತಿತ್ತು. ತಮ್ಮ ಅಧಿಕಾರ ಯಾವಾಗ ಹೋಗುತ್ತೋ, ಏನೋ ಗೊತ್ತಿಲ್ಲವೆಂದು ಒಂದೆರಡು ವರ್ಷಗಳಲ್ಲಿ ಬರತಕ್ಕ ಆದಾಯವನ್ನು ಕೇವಲ ಒಂದೆರಡು ತಿಂಗಳಲ್ಲಿಯೇ ಸಂಪಾದನೆಮಾಡಿಬಿಡೋಣವೆಂದು ಅನೇಕ ಅಧಿಕಾರಿಗಳು ತುಂಬಾ ನಿರುತ್ಸಾಹಿಗಳಾಗಿ ಕೆಲಸಮಾಡುವುದಕ್ಕೆ ಆಸ್ಪದ ಮಾಡಿಕೊಡುತ್ತಾ ಇದ್ದೀರಿ. ಇದರಿಂದಲೇ ಲಂಚ ಜಾಸ್ತಿಯಾಗುತ್ತಿದೆ. ಆದ್ದರಿಂದ ಕಡ್ಡಾಯ ನಿವೃತ್ತಿ ವಿಚಾರದಲ್ಲಿ ಸರ್ಕಾರದವರು ಯಾವುದಾದರೂ ಒಂದು ಸೂಕ್ತವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಅವರ ಹೇಳಿಕೆಯನ್ನು ಪಡೆದು ನಿವೃತ್ತಿಮಾಡುವುದು ಒಳ್ಳೆಯದೆಂದು ನಾನು ಈ ಸಂದರ್ಭದಲ್ಲಿ ಸೂಚಿಸಬಯಸುತ್ತೇನೆ.

ಇನ್ನು ೨೦ ಅಂಶಗಳ ಕಾರ್ಯಕ್ರಮವನ್ನು ನಾನು ನೋಡಿದ್ದೇನೆ. ಅದರಲ್ಲಿ ಕೆಲವು ಅಂಶಗಳ ಬಗ್ಗೆ ಸರ್ಕಾರ ಇನ್ನು ಹೆಚ್ಚಿಗೆ ಗಮನಕೊಡಬೇಕು. ವೃದ್ಧಾಪ್ಯ ವೇತನಗಳನ್ನು ಸಾಕಷ್ಟು ನನ್ನ ಜಿಲ್ಲೆಯಲ್ಲಿ ಕೊಡುತ್ತಿದ್ದಾರೆ. ಆದರೆ ಅವರಿಗೆ ಕೊಡುತ್ತಿರುವ ಹಣ ನಿಜವಾಗಿಯೂ ಸಂಬಂಧಪಟ್ಟವರಿಗೆ ಸರಿಯಾಗಿ ಮುಟ್ಟುತ್ತಾ ಇಲ್ಲ, ಮಧ್ಯಸ್ಥಗಾರರು ಇದರಲ್ಲಿ ಮಧ್ಯೆ ಸೇರಿಕೊಂಡು ಅವರೇ ತಿನ್ನುತ್ತಿದ್ದಾರೆ. ಆದುದರಿಂದ ಈ ವೃದ್ಧಾಪ್ಯ ವೇತನ ಸಂಬಂಧ ಪಟ್ಟವರಿಗೆ ಸರಿಯಾಗಿ ಮುಟ್ಟುವುದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡಬೇಕು. ಇದರ ಬಗ್ಗೆ ಸರ್ಕಾರದವರು ಸಂಬಂಧಪಟ್ಟ ಇಲಾಖೆಯವರಿಗೆ ಸೂಕ್ತ ಸಲಹೆಯನ್ನು ಕೊಡಬೇಕೆಂದು ಹೇಳ ಬಯಸುತ್ತೇನೆ.

ನನ್ನ ಮಿತ್ರರಾದ ಮಾನ್ಯ ಶ್ರೀ ಚನ್ನಬಸಪ್ಪನವರು ಮಾತನಾಡುತ್ತಾ ಸರ್ಕಾರದವರು ಸಣ್ಣ ನೀರಾವರಿ ಯೋಜನೆಗಳ ಬಗ್ಗೆ ಆದ್ಯತೆಯನ್ನು ಕೊಡಬೇಕೆಂದು ಹೇಳಿದರು. ನನ್ನ ಅಭಿಪ್ರಾಯವೂ ಕೂಡ ಅಷ್ಟೇ. ಇವರ ಗಮನವೆಲ್ಲ ದೊಡ್ಡದೊಡ್ಡ ನೀರಾವರಿಯೋಜನೆಗಳ ಕಡೆಗೇ ಹೋಗಿದೆ. ತುಂಗಭದ್ರಾ ಜಲಾಶಯವನ್ನು ತೆಗೆದುಕೊಂಡು ಅದಕ್ಕೆ ಸುಮಾರು ೮ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರೂ ಅಲ್ಲಿ ಒಂದು ಲಕ್ಷ ಎಕರೆ ಕೂಡ ಸಾಗು ಆಗುತ್ತಾ ಇಲ್ಲ. ಇದರಿಂದ ದೊಡ್ಡದೊಡ್ಡ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕಿಂತಲೂ ಸಣ್ಣ ನೀರಾವರಿ ಯೋಜನೆಗಳನ್ನು ತೆಗೆದುಕೊಂಡರೆ ನಿಜವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣಸಣ್ಣ ರೈತರಿಗೆ ಹೆಚ್ಚಿಗೆ ಅನುಕೂಲವಾಗುತ್ತದೆ. ಮಾನ್ಯ ಸಣ್ಣ ನೀರಾವರಿ ಮಂತ್ರಿಗಳು ಅದಕ್ಕಾಗಿ ಇನ್ನುಮುಂದೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಸರ್ವೆ ಮಾಡಿ ಎಲ್ಲಾ ತಾಲ್ಲೂಕುಗಳಲ್ಲಿಯೂ ಸಣ್ಣ ನೀರಾವರಿ ಯೋಜನೆಗಳನ್ನು ಎಲ್ಲೆಲ್ಲಿ ತೆಗೆದುಕೊಳ್ಳಬೇಕೆಂಬ ಬಗ್ಗೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಅದರ ಪ್ರಕಾರ ಎಲ್ಲಾ ತಾಲ್ಲೂಕುಗಳಲ್ಲಿಯೂ ಸಣ್ಣ ನೀರಾವರಿ ಯೋಜನೆಗಳನ್ನು

ತೆಗೆದುಕೊಂಡರೆ ದೇಶಕ್ಕೆ ಬಹಳ ಒಳ್ಳೆಯದಾಗುತ್ತದೆ ಮತ್ತು ಸಣ್ಣ ಸಣ್ಣ ರೈತರಿಗೂ ಹೆಚ್ಚು ಪ್ರಯೋಜನಕಾರಿಯಾಗುತ್ತದೆ. ಮುಂದಿನ ವರ್ಷದಲ್ಲಿಯೂ ಸಹ ಬಡ್ಜೆಟ್ಟಿನಲ್ಲಿ ಸಣ್ಣ ನೀರಾವರಿ ಯೋಜನೆಗಾಗಿ ಹೆಚ್ಚಿನ ಹಣವನ್ನು ಒದಗಿಸಬೇಕು. ಅದಕ್ಕಾಗಿ ಎಷ್ಟೇ ಖರ್ಚು ಬಂದರೂ ಸಹ ಅವುಗಳ ಕಡೆಗೆ ಹೆಚ್ಚಿನ ಗಮನಕೊಟ್ಟು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಇದರ ಬಗ್ಗೆ ಮಾನ್ಯ ಮಂತ್ರಿಗಳೂ ಸಹ ಹೆಚ್ಚಿನ ಶ್ರಮವಹಿಸಿ ಬಡ್ಜೆಟ್ಟಿನಲ್ಲಿ ಹೆಚ್ಚು ಹಣವನ್ನು ಈ ಬಾಬಿಗೆ ಒದಗಿಸುವ ಪ್ರಯತ್ನ ಮಾಡಬೇಕೆಂದು ನಾನು ಸೂಚಿಸಬಯಸುತ್ತೇನೆ. ಲೋಕೋಪಯೋಗಿ ಶಾಖೆಯವರು ಸುಮಾರು ೭ ಸಾವಿರ ಕಿಲೊ ಮೀಟರ್ ರಸ್ತೆಗಳ ದುರಸ್ತಿ ಕಾರ್ಯಗಳನ್ನು ಈಗಾಗಲೇ ಹಾಕಿಕೊಂಡಿದ್ದಾರೆ. ಆ ಕೆಲಸ ಕಾರ್ಯಗಳು ಸುಗಮವಾಗಿ ನಡೆಯಬೇಕು. ಏಕೆಂದರೆ ಮುಂದಿನವರ್ಷ ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆಗಳ ದುರಸ್ತಿ ಕಾರ್ಯಕ್ರಮ ಬಹಳ ಹೆಚ್ಚಿಗೆ ಮಾಡಬೇಕೆಂದು ಆವಶ್ಯಕತೆ ಇದೆ. ಕಾಂಟೂರ್ ಬಂಡಿಂಗ್ ಹಾಕುವುದಕ್ಕೆ ಅಲ್ಲಿ ಈಗ ಸಾಧ್ಯವಾಗುತ್ತಾ ಇಲ್ಲ. ಇದರ ಬಗ್ಗೆ ಹೆಚ್ಚಿನ ಗಮನಕೊಡಬೇಕು.

ರಾಜ್ಯಪಾಲರು ತಮ್ಮ ಭಾಷಣದಲ್ಲಿ ನಮ್ಮ ವಿಜಯನಗರ ಉಕ್ಕಿನ ಕಾರ್ಖಾನೆಯ ಬಗ್ಗೆ ಒಂದು ಅಕ್ಷರವನ್ನೂ ಸಹ ಹೇಳದೆ ಇರುವುದಕ್ಕೆ ಬಹಳ ವಿಷಾದವಾಗುತ್ತದೆ. ವಿಜಯನಗರ ಉಕ್ಕಿನ ಕಾರ್ಖಾನೆಯ ಶಂಕುಸ್ಥಾಪನೆ ಪ್ರಧಾನ ಮಂತ್ರಿಗಳಿಂದ ಹಿಂದೆಯೇ ಆಗಿದೆ. ಈಗ್ಗೆ ಐದು ವರ್ಷಗಳಾದರೂ ಕೂಡ ಅದರ ಬಗ್ಗೆ ಯಾವ ಕ್ರಮವೂ ಪ್ರಗತಿಪರವಾಗಿ ನಡೆದಿಲ್ಲವೆಂದು ನಾನು ಬಹಳ ವಿಷಾದದಿಂದ ಹೇಳುತ್ತಿದ್ದೇನೆ.

ಒಂದು ಗ್ರಾಮದಲ್ಲಿ ಸುಮಾರು ಮೂರುವರೆ ಸಾವಿರ ಎಕರೆಯಷ್ಟು ಜಮೀನು ಎರಡು ವರ್ಷಗಳಿಂದ ಬೀಳಾಗಿದೆ. ಅದನ್ನು ಗೇಣಿಗೆ ಕೊಟ್ಟರೆ ನಿಜವಾಗಿಯೂ ಹೆಚ್ಚಿಗೆ ಲಾಭ ಬರುತ್ತದೆ. ಆಹಾರ ಪದಾರ್ಥಗಳನ್ನೂ ಕೂಡ ಹೆಚ್ಚಿಗೆ ಬೆಳೆಯುವುದಕ್ಕೆ ಸಹಕಾರಿಯಾಗುತ್ತದೆ. ಪ್ರೊಕ್ಯೂರ್‌ಮೆಂಟ್ ಆಫ್ ಲೆವಿ ವಿಚಾರದಲ್ಲಿ ಸಾಕಷ್ಟು ಕೆಲಸ ಕಾರ್ಯಗಳು ಆಗಬೇಕು. ರೈತ ವರ್ಗದವರಿಗೆ ಲೆವಿ ಹಣವನ್ನು ಆದಷ್ಟು ಜಾಗ್ರತೆಯಾಗಿ ಕೊಡಬೇಕು. ಆ ರೀತಿ ಕೊಡದೇ ಇದ್ದರೆ ಜನರಿಗೆ ತುಂಬ ತೊಂದರೆಯಾಗುತ್ತದೆ. ರೈತರಿಗೂ ಬಹಳ ಕಷ್ಟವಾಗುತ್ತದೆ. ರೈತರಿಂದ ಈಗಾಗಲೇ ಪಂಪುಸೆಟ್ಟುಗಳನ್ನು ಸಕಾಲದಲ್ಲಿ ಒದಗಿಸಲು ಪ್ರತಿಯೊಬ್ಬ ರೈತನಿಂದಲೂ ೫೦ ರೂಪಾಯಿಗಳನ್ನು ಡಿಪಾಜಿಟ್ ಇಡಬೇಕೆಂದು ವಸೂಲು ಮಾಡುತ್ತಿದ್ದಾರೆ. ಆದರೆ ಮಾನ್ಯ ಮಂತ್ರಿಗಳು ಇದರ ಬಗ್ಗೆ ವಿಚಾರಮಾಡಿ ಕೂಡಲೇ ಅದನ್ನು ತೆಗೆಸಿಹಾಕುತ್ತೇವೆಂದು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆಂದು ಪ್ರತಿಕೆಗಳಲ್ಲಿಯೂ ವರದಿಯಾಗಿತ್ತು. ಅದರ ಬಗ್ಗೆ ಸೂಕ್ತವಾದ ಕ್ರಮವನ್ನು ಸರ್ಕಾರದವರು ಜಾಗ್ರತೆಯಾಗಿ ಕೈಗೊಳ್ಳಬೇಕು ಮತ್ತು ಮಾನ್ಯ ಮಂತ್ರಿಗಳು ಆ ಒಂದು ಆಜ್ಞೆಯನ್ನು ತೆಗೆಸಲಿಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ.—ಅದನ್ನು ಸಹಾನುಭೂತಿಯಿಂದ ಪರಿಶೀಲಿಸುತ್ತೇವೆಂದು ಹೇಳಿದ್ದು. ಅದನ್ನು ತೆಗೆಯುತ್ತೇವೆಂದು ಹೇಳಲಿಲ್ಲ.

ಶ್ರೀ ಬಿ. ಎಸ್. ವೀರಭದ್ರಪ್ಪ.—ವೈದ್ಯಕೀಯ ಸೌಲಭ್ಯದ ಬಗ್ಗೆ ಹೇಳುವುದಾದರೆ, ಎಲ್ಲಾ ಕಡೆಯೂ ಈಗ ಮಲೇರಿಯಾ ಕಾಯಿಲೆ ಜಾಸ್ತಿಯಾಗುತ್ತಲೇ ಇದೆ. ಅದರ ನಿವಾರಣೆಗಾಗಿ ಸರ್ಕಾರದವರು ಕೂಡಲೇ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಬಳ್ಳಾರಿಯಲ್ಲಿ ಎನ್. ಆರ್. ಸ್ಕೀಂ ಬಂದಿದೆ. ಅದರ ಬಗ್ಗೆಯೂ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಹೊತ್ತು ಈ ದಿವಸ ಕೆಲವು ಮಾತುಗಳನ್ನು ಆಡುವುದಕ್ಕೆ ಅವಕಾಶಮಾಡಿಕೊಟ್ಟಿದ್ದಕ್ಕಾಗಿ ನಾನು ಅವರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Business of the House

MR. DEPUTY SPEAKER.—Before adjourning the House, there is an annoucement to make.

The Business Advisory Committee met at 3-30 p.m. to-day and decided that the following Bills may be taken up in the order mentioned from 9th February to 11th February, 1976:—